ಅಧ್ಯಕ್ಷರು :- ಮಾನ್ಯ ಸಚಿವರೇ ತಾವು ಏನಾದರೂ ಹೇಳುವಿರಾ ?

ಶ್ರೀ ಬಿ.ಎಸ್. ಪಾಟೀಲ್ (ಸಾಸನೂರು) :- ಏನು ಹೇಳಬೇಕೋ ಅದನ್ನೆಲ್ಲಾ ಈಗಾಗಲೇ ನಾನು ಹೇಳಿದ್ದೇನೆ.

ಶ್ರೀ ಎನ್. ಚೆಲುವರಾಯಸ್ವಾಮಿ :- ಮಾನ್ಯ ಅಧ್ಯಕ್ಷರೇ, ಇಂತಹ ಉತ್ತರ ನೀಡಿದರೆ ಸರ್ಕಾರಕ್ಕೆ ತಾವು ದಯಮಾಡಿ ನಿರ್ದೇಶನ ನೀಡಬೇಕಾಗುತ್ತದೆ.

ಅಧ್ಯಕ್ಷರು :- ಅದು ಮುಗಿದ ವಿಷಯ. ಮುಂದಿನದು ವಿತ್ತೀಯ ಕಾರ್ಯಕಲಾಪ.

### 8. ನಿಯಮ 69ರ ಮೇರೆಗೆ

### ಬೆಂಗಳೂರು ನಗರ ಹಾಗೂ ಗ್ರಾಮಾಂತರ ಜಿಲ್ಲೆ ವ್ಯಾಪ್ತಿಯಲ್ಲಿ ಬರುವ ನಗರಸಭೆ ಮತ್ತು ಪುರಸಭೆಗಳಲ್ಲಿ ನಡೆದಿದೆ ಎನ್ನಲಾದ ಭ್ರಷ್ಟಾಚಾರದ ಬಗ್ಗೆ

ಶ್ರೀ ಜಗದೀಶ ಶೆಟ್ಟರ್ :- ಮಾನ್ಯ ಅಧ್ಯಕ್ಷರೇ, ನಾವು ಕಳುಹಿಸಿದ್ದು ಬಹಳ ಅರ್ಜೆಂಟು ಮತ್ತು ಮಹತ್ವದ್ದು ಇದೆ. ನಾನು ನಿಲುವಳಿ ಸೂಚನೆ ಮೂಲಕ ತಂದಿದ್ದೆವು, ತಾವೇ ಅಜೆಂಡಾದಲ್ಲಿಟ್ಟಿದ್ದೀರಿ, 69ರ ಕೆಳಗೆ. ಅಜೆಂಡಾ ಪ್ರಕಾರ ತೆಗೆದುಕೊಳ್ಳಿ.

ಅಧ್ಯಕ್ಷರು :- ನಾನು ಅಜೆಂಡಾ ಚೇಂಜ್ ಮಾಡಬಹುದು.

ಶ್ರೀ ಜಗದೀಶ ಶೆಟ್ಟರ್ :- ತಮ್ಮ ಅಧಿಕಾರವ್ಯಾಪ್ತಿಯನ್ನು ನಾನು ಪ್ರಶ್ನಿಸುತ್ತಿಲ್ಲ. ಇವತ್ತು ನೀವು ಅಜೆಂಡಾದಲ್ಲಿಟ್ಟಿದ್ದೀರಿ, ಅದನ್ನು ಪ್ರಾರಂಭಿಸೋಣ.

**MR. SPEAKER :-** According to the rules, at 5 0'Clock, we will take it up.

ಶ್ರೀ ಜಗದೀಶ ಶೆಟ್ಟರ್ (ವಿರೋಧ ಪಕ್ಷದ ನಾಯಕರು) :- ನನಗೆ ಅರ್ಥವಾಗುತ್ತಿಲ್ಲ ಸರ್ಕಾರ ಏಕೆ ಇದಕ್ಕೆ, ಚರ್ಚೆ ಮಾಡಲು ಮೊನ್ನೆ ಒಪ್ಪಿಕೊಳ್ಳುತ್ತೇವೆ ಎಂದು ಹೇಳಿದರು, ಇವತ್ಯಾಕೆ ಐದು ಗಂಟೆಗೆ ಮಾಡುವಂಥಾದು ? ರೂಲ್ಸ್ ಹೇಳುವುದು ? ಸಿಎಂಸಿದು, ಭ್ರಷ್ಟಾಚಾರದ ವಿಷಯ ತಂದರೆ ಸರ್ಕಾರಕ್ಕೆ ಚರ್ಚೆಗೆ ಮನಸಿಲ್ಲ ಅನ್ನಿಸುತ್ತದೆ ನನಗೆ. ಐದು ಗಂಟೆಗೆ ಚರ್ಚೆ ಮಾಡಿ ಯಾವಾಗ ಮುಗಿಸುವುದು ? ರೂಲ್ಸ್ ಹೇಳುವಿರಲ್ಲಾ, ಎಲ್ಲಾ ರೂಲ್ಸ್ ಪ್ರಕಾರವೇ ನಡೆಯುತ್ತಿದೆಯಾ ? ರೂಲ್ 69 ಕೆಳಗಿದ್ದವನ್ನೆಲ್ಲಾ ಸಂಜೆ 5 ಗಂಟೆ ಮೇಲೆ ಹಿಂದೆ ತೆಗೆದುಕೊಂಡಿದ್ದೀರೇನು ?

ಶ್ರೀ ಡಿ.ವಿ. ಸದಾನಂದಗೌಡ (ಪುತ್ತೂರು) :- ಮಾನ್ಯ ಅಧ್ಯಕ್ಷರೇ, ತಮ್ಮ ಆದೇಶಕ್ಕೆ ಖಂಡಿತವಾಗಿ ನಮ್ಮ ಗೌರವವಿದೆ. ಅದರಲ್ಲಿ ಎರಡು ಮಾತಿಲ್ಲ. ಆದರೇನಾಗಿದೆ ? ಇಷ್ಟರವರೆಗೆ ನಡೆದುಬಂದ ಸಂಪ್ರದಾಯ ತಾವೇನು ಅಜೆಂಡಾ ಕಳುಹಿಸಿಕೊಡುತ್ತೀರಿ ಅದರ ಪ್ರಕಾರವೇ ನಾವು ಹೋಗುತ್ತಿದ್ದೆವು. ನಮ್ಮ ಮಾತುಗಳನ್ನು ನೀವು ಕಂಟ್ರೋಲ್ ಮಾಡಲೇಬೇಕು, ಅದು ಅನಿವಾರ್ಯ ಇಲ್ಲದಿದ್ದರೆ ಸದನ ನಡೆಸಲು ಸಾಧ್ಯವಿಲ್ಲ. ನೀವು ಕಂಟ್ರೋಲ್ ಮಾಡುವುದನ್ನು ನಾವು ಖಂಡಿತ ಒಪ್ಪಿಕೊಳ್ಳುತ್ತೇವೆ. ಬಹಳ ಮುಖ್ಯವಾಗಿ ನಿಲುವಳಿ ಸೂಚನೆ ಏನಿದೆ ಇದನ್ನು ನಾವು ತಂದಿದ್ದೇವೆ ತಾವು ಹೇಳಿದಿರಿ ಅದನ್ನು ರೂಲ್ 69 ಕೆಳಗೆ ತೆಗೆದುಕೊಳ್ಳೋಣ ಎಂದು,

ತಮ್ಮ ಆದೇಶಕ್ಕೆ ನಾವು ತಲೆಬಾಗಿದ್ದೇವೆ. ಇದನ್ನು ಇವತ್ತು ಮುಗಿಸಬೇಕೆಂದರೆ, ಈಗ ಶುರುಮಾಡಿದರೆ ಸಂಜೆಗೆ ಮುಗಿಯುತ್ತದೆ, ನಾಳೆಯಿಂದ ಅಜೆಂಡಾ ಪ್ರಕಾರ ಯಾವುದು ಬರುತ್ತದೋ ತಮ್ಮ ಆದೇಶ, ಅಪ್ಪಣೆ ಏನಿದೆಯೋ ಅದಕ್ಕೆಲ್ಲಾ ನಾವು ಬದ್ಧರು. ಇವತ್ತು ಅಜೆಂಡಾದಲ್ಲಿ ಬಂದ ಕಾರಣ ಇದನ್ನು ಈಗ ತೆಗೆದುಕೊಳ್ಳಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯಾ :- ಮಾನ್ಯ ಅಧ್ಯಕ್ಷರೇ, ಅಜೆಂಡಾದಲ್ಲಿ ಬರುವಂಥದ್ದು ಒಂದು ಭಾಗ. ನಿನ್ನೆ ತಾವು ಕೊಟ್ಟ ತೀರ್ಪನ್ನು ನಾವು ಶ್ಲಾಘನೆ ಮಾಡಿದ್ದೇವೆ. ಶೂನ್ಯವೇಳೆಯಲ್ಲಿ ತಾವು ಕೊಟ್ಟ ಚರಿತ್ರಾರ್ಹ ತೀರ್ಪಿಗಾಗಿ ನಾವು ಮತ್ತು ಮಾನ್ಯ ವಿರೋಧ ಪಕ್ಷದ ನಾಯಕರು ನಿಮ್ಮನ್ನು ಅಭಿನಂದಿಸುತ್ತೇವೆ. ನನಗೆ ಆಶ್ಚರ್ಯವಾಗಿರುವುದು ಏನೆಂದರೆ, ಅಜೆಂಡಾ ಪ್ರಕಾರವೇ, ಭ್ರಷ್ಟಾಚಾರದ ಬಗ್ಗೆ ಚರ್ಚೆ ಎಂದರೆ ಏಕೆ ಮುಂದಕ್ಕೆ ಹೋಗಬೇಕೆಂದು ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರು ಈ ರೀತಿ ವರ್ತನೆ ಮಾಡುತ್ತಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಮೇಲ್ಮನೆಯಲ್ಲಿ ಏನು ಹೇಳಿದರು ? ಸಿಎಂಸಿ ಟಿಎಂಸಿಗಳಲ್ಲಿ ನಡೆದಿರುವ ಅವ್ಯವಹಾರಗಳ ಬಗ್ಗೆ ನಾನು ಚರ್ಚೆಗೆ ಸದಾಕಾಲ ಸಿದ್ಧನಿದ್ದೇನೆ ಎಂದಿದ್ದಾರೆ. ಇದು ಒಂದಾಯಿತು. ನಮಗೆ ಬಹಳ ಮುಖ್ಯವಾಗಿ ನಾವು ಕಳುಹಿಸಿದ್ದ ನಿಲುವಳಿ ಸೂಚನೆ ರೂಲ್ 69ರ ಕೆಳಗಡೆ ಚರ್ಚೆಯಾಗಬೇಕಾದ್ದು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ವ್ಯಾಪ್ತಿಯಲ್ಲಿರುವ ನಗರಸಭೆ ಮತ್ತು ಪುರಸಭೆಗಳಲ್ಲಿ ನಡೆದಿರುವ ಅವ್ಯವಹಾರಗಳ ಬಗ್ಗೆ. ಇದರ ಬಗ್ಗೆ ಚರ್ಚೆಯಾಗಿ ಸರ್ಕಾರದಿಂದ ಉತ್ತರ ಬರಬೇಕು. ಸರ್ಕಾರ ಏನು ತಪ್ಪು ಮಾಡಿದೆ ಯಾರಿಗೆ ರಕ್ಷಣೆ ಕೊಡುತ್ತಿದೆ ಅದನ್ನು ಸಾರ್ವಜನಿಕರ ಗಮನಕ್ಕೆ ತರುವುದು ನಮ್ಮ ಹಕ್ಕು. ಅದನ್ನು ನಾವು ಮಾಡಬೇಕಾಗಿದೆ. ಎರಡನೆಯದಾಗಿ, ನನಗೆ ಆಶ್ಚರ್ಯವಾಗುವುದು ಏನೆಂದರೆ ಈ ಅಲ್ಪಕಾಲಾವಧಿ ಚರ್ಚೆಗೆ ಉಡುಪಿ ಜಿಲ್ಲಾ ಪಂಚಾಯಿತಿಯಲ್ಲಿ ನಡೆದಿರುವ ಅವ್ಯವಹಾರ, ಮೂರನೆಯದು ರಾಜ್ಯದ ಬೇರೆ ಬೇರೆ ಎಪಿಎಂಸಿಗಳಲ್ಲಿ ನಡೆದಿರುವ ಭ್ರಷ್ಟಾಚಾರದ ಬಗ್ಗೆ ನೀಡಿರುವ ಸೂಚನೆಗಳು. ಸ್ವಾಮಿ, ನಮ್ಮ ಮೇನ್ ಇಶ್ಯೂ ಏನಿದೆ ಅದನ್ನು ಡೈವರ್ಟ್ ಮಾಡುವಂತಹ ; ಡೈಲ್ಯೂಟ್ ಮಾಡುವಂತಹ ಪ್ರಯತ್ನವೆಂದು ನಾನು ಹೇಳಬಯಸುತ್ತೇನೆ. ಸರ್ಕಾರದ ಈ ಧೋರಣೆಯನ್ನು ನಾನು ಅತ್ಯಂತ ಕಟುವಾಗಿ ಸಂಸದೀಯ ವ್ಯವಹಾರಗಳಿಗೆ ಭೂಷಣ ತರುವ ರೀತಿಯಲ್ಲಿ ಬಹಳ ಉಗ್ರವಾಗಿ ಇದನ್ನು ಖಂಡಿಸುತ್ತೇನೆ. ಈ ಸರ್ಕಾರಕ್ಕೆ ಇದು ಸರಿಯಲ್ಲ. ಇವರೇನೋ ಮುಚ್ಚಿಡಲಿಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. 230 ಕೋಟಿ ರೂಪಾಯಿಗಳ ಇದು ಸಾಮಾನ್ಯ ಹಗರಣವಲ್ಲ. ಆದ್ದರಿಂದ ತಾವು ಕೊಡುವ ತೀರ್ಪು ಕರ್ನಾಟಕದ ವಿಧಾನಸಭೆಯ 50 ವರ್ಷದ ಚರಿತ್ರೆಯಲ್ಲಲ್ಲ ಮುಂದಿನ 50 ವರ್ಷಗಳ ಕಾಲದಲ್ಲಿ ಸಹ ಇರುವಂಥಾದ್ದಾಗಿರಬೇಕು. ಇಂತಹ ಭ್ರಷ್ಟಾಚಾರದ ಪ್ರಕರಣ ಹಿಂದೆ ನಡೆದಿಲ್ಲ ಈಗ ನಡೆದಿದೆ. ನಮ್ಮ ಹತ್ತಿರ ದಾಖಲೆಗಳಿವೆ, ಪುರಾವೆಗಳಿವೆ, ಸಾಕ್ಷಿಯಿದೆ, ಆಧಾರವಿದೆ. ಸರ್ಕಾರದಲ್ಲಿರುವವರು ಇದರಲ್ಲಿ ಶಾಮೀಲಾಗಿದ್ದಾರೆ. ಇದರಲ್ಲಿ ಎಳ್ಳಷ್ಟೂ ಸಂಶಯವಿಲ್ಲ. ಅದರಿಂದಾಗಿ ಅಧ್ಯಕ್ಷರೇ, ನಾವೇನು ತಮಗೆ ಅಲ್ಪಕಾಲಾವಧಿ ಚರ್ಚೆಗೆ ಕಳುಹಿಸಿದ್ದೇವೆ ಅದನ್ನು ಆದಷ್ಟು ಕಡಿಮೆ ಅವಧಿಯಲ್ಲಿ ಚರ್ಚೆ ಮಾಡಬೇಕೆಂದಿದ್ದೇವೆ. ಅದರೆ ಉಡುಪಿ ಜಿಲ್ಲಾ ಪಂಚಾಯಿತಿಯ ಭ್ರಷ್ಟಾಚಾರಗಳು ಅದೂ ಕೂಡ ಬಹಳ ಮಹತ್ವದ ವಿಚಾರವೇ. ಆದರೆ ಅದನ್ನು ತಾವು ಪ್ರತ್ಯೇಕವಾಗಿ ತೆಗೆದುಕೊಳ್ಳಬೇಕು. ಬೇರೆ ಬೇರೆ ಎಪಿಎಂಸಿಗಳು, it is a very vague term ; ಹಾಗಾದರೆ

ಎಲ್ಲಾ ಎಪಿಎಂಸಿಗಳಲ್ಲೂ ಎಲ್ಲಾ ಕಡೆಗಳಲ್ಲೂ ಸರ್ವ ಕಾಲದಲ್ಲೂ ಭ್ರಷ್ಟಾಚಾರ ನಡೆಯುತ್ತಿದೆ, ಅದರ ಬಗ್ಗೆ ನಾವು ವೇಗ್ ಆಗಿ ಚರ್ಚೆ ಮಾಡುವುದಕ್ಕಾಗುತ್ತದೆಯೋ ? ಆಗುವುದಿಲ್ಲ ಸ್ವಾಮಿ. ಈಗ ಸ್ಪೆಷಿಫಿಕ್ ಆಗಿ ನಾವು ಕಳುಹಿಸಿರತಕ್ಕಂಥ ನೋಟೀಸ್ ಏನು ಇದೆ, ಅದರ ಪ್ರಕಾರವಾಗಿ ತಮ್ಮಲ್ಲಿ ಅತ್ಯಂತ ಕಳಕಳಿಯಿಂದ, ವಿನಮ್ರತೆಯಿಂದ ತಾವು ಚರಿತ್ರಾರ್ಹವಾಗಿರತಕ್ಕ ತೀರ್ಮಾನಗಳನ್ನು ನಿನ್ನೆಯ ರೀತಿಯಲ್ಲಿ ಕೊಡುತ್ತೀರಿ ಎನ್ನುವ ವಿಶ್ವಾಸವನ್ನು ವ್ಯಕ್ತಮಾಡಿ, ಸರ್ಕಾರವೂ ಸಹಾ ಇದಕ್ಕೆ ಒಪ್ಪಬೇಕು. ಸರ್ಕಾರಕ್ಕೆ ಅನುಕೂಲವಾಗುತ್ತದೆ ಸ್ವಾಮಿ. ಇವತ್ತು, 1300 ಕೋಟಿ ರೂಪಾಯಿಗಳು ನಮಗೆ ಬರಲಿಲ್ಲ ಎಂದು ಕಂಟ್ರಾಕ್ಟ್‌ದಾರರು ಒದ್ದಾಡುತ್ತಿದ್ದಾರೆ. ಪಾಪ, ಫೈನಾನ್ಸ್ ಸೆಕ್ರೆಟರಿ 50 ಸಾವಿರ ರೂಪಾಯಿಗಳನ್ನು ಬಿಡುಗಡೆ ಮಾಡಬೇಕೆಂದರೆ ಒದ್ದಾಡುತ್ತಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಬರೆದಿರತಕ್ಕ ಪವಿತ್ರವಾದ ಅವರ ಸಹಿಗೆ ಬೆಲೆ ಕೊಡಲಿಕ್ಕೆ ಫೈನಾನ್ಸ್ ಸೆಕ್ರೆಟರಿ ಕೈಯಲ್ಲಿ ಆಗುತ್ತಿಲ್ಲ. ರಾಜ್ಯದ ಬೊಕ್ಕಸ ಖಾಲಿಯಾಗಿದೆ. ಅಂಥ ಸಂದರ್ಭದಲ್ಲಿ 230 ಕೋಟಿ ರೂಪಾಯಿಗಳು ಬೇರೆ ಕಡೆಗೆ ಡೀವಿಯೇಟ್ ಆಗಿರುವ ವಿಚಾರವನ್ನು ನಾವು ಪ್ರಸ್ತಾಪ ಮಾಡಬೇಕೆಂದರೆ ಸರ್ಕಾರ ಏಕೆ ಹಿಂದೆ ಸರಿಯಬೇಕು ? ಮಾನ್ಯ ಹೆಚ್.ಕೆ. ಪಾಟೀಲರು ಬಹಳ ಜನಪ್ರಿಯರಾಗಿರುವ ನಾಯಕರು ಎನ್ನುವುದನ್ನು ಮೊನ್ನೆ ನಡೆದ ಚುನಾವಣೆಯಲ್ಲಿ ಸಾಬೀತು ಮಾಡಿದ್ದಾರೆ. ತಾವು ವಿರೋಧ ಪಕ್ಷದ ನಾಯಕರಾಗಿದ್ದಾಗ ಏನು ಮಾಡಿದ್ದೀರಾ ಸ್ವಾಮಿ, ಇಂಥ ಪ್ರಕರಣಗಳ ಬಗ್ಗೆ ಮಾನ್ಯ ಖರ್ಗೆಯವರು 1970ರಿಂದ ಈ ವಿಧಾನಸಭೆಯಲ್ಲಿ ಕುಳಿತು ಚರ್ಚೆ ಮಾಡಿದ್ದಾರೆ. ಆಡಳಿತ ಪಕ್ಷದಲ್ಲಿ ಎಷ್ಟು ದಿನ ಇದ್ದರು, ಅಷ್ಟೇ ದಿನ ವಿರೋಧ ಪಕ್ಷದಲ್ಲಿ ಇದ್ದವರು, ಈ ಪಕ್ಷದ ಹಿರಿಯ ಸದಸ್ಯರು. ಅವರು ಇಲ್ಲಿದ್ದಾಗ ಏನು ಮಾಡಿದ್ದಾರೆ ಸ್ವಾಮಿ ? ಆದ್ದರಿಂದ ದಯವಿಟ್ಟು ತಮ್ಮಲ್ಲಿ ಅತ್ಯಂತ ಕಳಕಳಿಯಿಂದ ನಾನು ಮನವಿ ಮಾಡಿಕೊಳ್ಳುತ್ತಿದ್ದೇನೆ, ಇದಕ್ಕಿಂತ ವಿತ್ತೀಯ ಕಲಾಪಗಳು ಬೇರೆ ಯಾವುದೂ ಇಲ್ಲ. ವಿತ್ತವನ್ನು ತರತಕ್ಕಂಥದ್ದು ಇದು. ನಾವು ಯಾರೋ ಒಬ್ಬರ ಮೇಲೆ ದುರುದ್ದೇಶವನ್ನು ಇಟ್ಟುಕೊಂಡು ಅವರಿಗೆ ರಾಜಕೀಯ ಚಾರಿತ್ರ್ಯವಧೆ ಮಾಡಬೇಕೆನ್ನುವ ಉದ್ದೇಶದಿಂದ ನಾನಂತೂ ಚರ್ಚೆ ಮಾಡುವುದಕ್ಕೆ ತಯಾರು ಇಲ್ಲ. ಲೋಕಾಯುಕ್ತ ಮಾಡಿರುವ ಕೆಲಸ ಏನಿದೆ ಅದಕ್ಕೆ ಸರ್ಕಾರ ಪುರಸ್ಕಾರ ಕೊಡತಕ್ಕಂಥದ್ದನ್ನು ಪ್ರಶಂಸೆ ಮಾಡತಕ್ಕಂಥವನು ನಾನು. ಆದರೆ ಯಾವರೀತಿ ಬೊಕ್ಕಸವನ್ನು ಸರಿ ಮಾಡಿಕೊಳ್ಳಬೇಕೆನ್ನುವ ಬಗ್ಗೆ ಮುಂದೆ ಯಾವುರೀತಿ ಆಗಬಾರದು ಎನ್ನುವುದರ ಬಗ್ಗೆ ನಾವು ಸಲಹೆ ಕೊಡುತ್ತೇವೆಂದು ಹೇಳಿದರೆ ಅದನ್ನು 5 ಗಂಟೆಗೆ ಅವಕಾಶ ಮಾಡಿಕೊಡುತ್ತೇನೆಂದು ಹೇಳಿ ಸರ್ಕಾರದವರು ತಮಗೆ ಹೇಳುತ್ತಿರುವುದು ಸರಿಯಲ್ಲ. ಬಾಕಿ ಎಲ್ಲದಕ್ಕೂ ನಾವು ಸಹಕಾರವನ್ನು ಕೊಡುತ್ತೇವೆ. ನಾವು ತಮಗೆ ಯಾವುದಕ್ಕೂ ಸಹಿತ ಇದುವರೆಗೂ ಅಡ್ಡಿಪಡಿಸಿಲ್ಲ, ಅಡ್ಡಿಪಡಿಸುವುದಕ್ಕೆ ಹೋಗುವುದೂ ಇಲ್ಲ. ನಿಮ್ಮ ಮೈಕ್‌ನ್ನು ಕೀಳತಕ್ಕಂಥದ್ದು, ನಿಮ್ಮ ಹತ್ತಿರ ಬರತಕ್ಕಂಥದ್ದು, ಇವೆಲ್ಲಾ ಈ ಸದನದಲ್ಲಿ ನಡೆದುಬಿಟ್ಟಿದೆ ಮಾನ್ಯ ಅಧ್ಯಕ್ಷರೇ ನನ್ನ ಕಣ್ಮುಂದೆಯೇ ನಡೆದುಬಿಟ್ಟಿದೆ. ಅವೆಲ್ಲಾ ನಾವು ಮಾಡುವುದಕ್ಕೆ ಹೋಗುವುದಿಲ್ಲ. ಅದರೆ ಈ ವಿಚಾರದಲ್ಲಿ ಮಾತ್ರ ಯಾವುದೇ ಕಾರಣಕ್ಕೂ ಸಹಿತ ತಾವು ದಯವಿಟ್ಟು ತಮ್ಮ ಮನಸ್ಸನ್ನು ಬದಲಾವಣೆ ಮಾಡಿ, ಊಟದ ವಿರಾಮದ ನಂತರ, ನಮ್ಮ ವಿರೋಧ ಪಕ್ಷಗಳ ಮಾತಿಗೆ ಗೌರವವನ್ನು ಕೊಟ್ಟು, ಮಾನ್ಯತೆಯನ್ನು ಕೊಟ್ಟು ಪ್ರತ್ಯೇಕವಾಗಿ ಈ ಬೆಂಗಳೂರು ಗ್ರಾಮಾಂತರ ಜಿಲ್ಲೆ ಮತ್ತು ನಗರ ಜಿಲ್ಲೆಯಲ್ಲಿ ನಡೆದಿರತಕ್ಕ ನಗರಸಭೆ, ಪುರಸಭೆಗಳ

ಹಣದ ಅವ್ಯವಹಾರ ಏನಿದೆ ಇದರ ಬಗ್ಗೆ ತಾವು ಚರ್ಚೆಗೆ ಅವಕಾಶವನ್ನು ಮಾಡಿಕೊಡಬೇಕೆಂದು ನಾನು ತಮ್ಮಲ್ಲಿ ಬೇಡಿಕೊಳ್ಳುತ್ತೇನೆ.

ಅಧ್ಯಕ್ಷರು :- ಈಗ ನನ್ನ ಪ್ರಶ್ನೆ ಇಷ್ಟೆ ಈ ವಿಷಯ ತೆಗೆದುಕೊಳ್ಳುವುದು ಗ್ಯಾರಂಟಿ ; ಅದರಲ್ಲೇನೂ ತೊಂದರೆ ಇಲ್ಲ. ಆದರೆ ನಾನು ರೂಲ್ಸ್ ಪ್ರಕಾರ ನಡೆಯಬೇಕೆಂದು ಹೇಳುತ್ತೀರೋ ಅಥವಾ ಬೇಡ ಎಂದು ಹೇಳುತ್ತೀರೋ ?

ಶ್ರೀ ಜಗದೀಶ ಶೆಟ್ಟರ್ (ವಿರೋಧ ಪಕ್ಷದ ನಾಯಕರು) :- ಮಾನ್ಯ ಅಧ್ಯಕ್ಷರೇ, ಇಲ್ಲಿ ವಿರೋಧ ಪಕ್ಷದ ನಾಯಕರಾಗಿ ಕೆಲಸ ಮಾಡಿದಂಥ ಮಾನ್ಯ ಹೆಚ್.ಕೆ. ಪಾಟೀಲರು ಇದ್ದಾರೆ. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರೂ ಸಹಿತ ಇಲ್ಲಿ ವಿರೋಧ ಪಕ್ಷದ ನಾಯಕರಾಗಿ ಕೆಲಸವನ್ನು ಮಾಡಿದ್ದಾರೆ. ನಿಯಮ 69ರಲ್ಲಿ ಸಾರ್ವಜನಿಕ ಮಹತ್ವದ ವಿಷಯದ ಬಗ್ಗೆ ರೂಲ್ಸ್ ಪ್ರಕಾರ 5 ಗಂಟೆಗೆ ಚರ್ಚೆ ಪ್ರಾರಂಭ ಮಾಡುವುದು ಯಾವ ಸಂಪ್ರದಾಯ ? ಸರ್ಕಾರದವರು ಇದ್ಯಾಕೆ ಒತ್ತಾಯ ಮಾಡುತ್ತಿದ್ದಾರೋ ನನಗೆ ಅರ್ಥವಾಗುತ್ತಿಲ್ಲ. ಇದನ್ನು 5 ಗಂಟೆಗೆ ಪ್ರಾರಂಭ ಮಾಡಬೇಕು, ಒಂದು ತಾಸು, ಅರ್ಧ ತಾಸು ಅಷ್ಟೆ. ಇದನ್ನು ಕೊನೆಯ ಹಂತದಲ್ಲಿ ಮುಗಿಸಿಹೋಗಬೇಕು, ಇದನ್ನು ಮುಚ್ಚಿಡುವಂಥ ಕೆಲಸವನ್ನೇನಾದರೂ ಸರ್ಕಾರ ಮಾಡುತ್ತಿದೆಯೇ ಎಂದು ನನಗನಿಸುತ್ತದೆ. ಇದರ ಬಗ್ಗೆ ಸರ್ಕಾರವೇ ಚರ್ಚೆಗೆ ಮುಂದೆ ಬರಬೇಕಾಗಿತ್ತು. ಇದು ನನಗೆ ಅರ್ಥವಾಗುತ್ತಿಲ್ಲ.

ಶ್ರೀ ಹೆಚ್.ಕೆ. ಪಾಟೀಲ್ (ಬೃಹತ್ ಮತ್ತು ಮಧ್ಯಮ ನೀರಾವರಿ ಸಚಿವರು) :- ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಸರ್ಕಾರ ಈ ವಿಚಾರವನ್ನು ಚರ್ಚೆ ಮಾಡುವುದಕ್ಕೆ ಹಿಂದೇಟು ಹಾಕುತ್ತಿದೆ ಎನ್ನುವ ವಿಚಾರ ಏನು ಇದೆ, ಅದನ್ನು ತಾವು ಹೇಳಬಾರದಾಗಿತ್ತು. ಏಕೆಂದರೆ ಸರ್ಕಾರ ಈ ವಿಚಾರವಾಗಿ ಚರ್ಚೆ ಮಾಡುವುದಕ್ಕೆ ಸಿದ್ಧ ಇದೆ. ಈಗಾಗಲೇ ಇದು ವಿಷಯ ಪಟ್ಟಿಯಲ್ಲೂ ಬಂದಿದೆ. ವಿಷಯ ಪಟ್ಟಿಯಲ್ಲಿ ಹಾಕಿ ಸನ್ಮಾನ್ಯ ಸಭಾಧ್ಯಕ್ಷರು ನಿರ್ಣಯ ಮಾಡಿದಂತೆ ಇದು ನಿಯಮ 69ರ ಕೆಳಗೆ ಬರುತ್ತದೆ. ನಿಯಮ 69ರಲ್ಲಿ ಬರತಕ್ಕದ್ದನ್ನು ಯಾವಾಗ ತೆಗೆದುಕೊಳ್ಳಬೇಕೆನ್ನುವುದನ್ನೂ ಸಹಿತ ನಿಯಮಾವಳಿಯಲ್ಲಿ ಇರುವುದರಿಂದ ಆ ನಿಯಮಾವಳಿ ಪ್ರಕಾರ ನಾವು ಚರ್ಚೆ ಮಾಡೋಣ. ವಿಸ್ತೃತವಾಗಿರುವಂಥದ್ದನ್ನು ಚರ್ಚೆ ಮಾಡುವುದಕ್ಕೆ ನಾವು ಸಿದ್ಧರಿದ್ದೇವೆ. ವಿಚಾರಗಳನ್ನು ತಿಳಿಯುತ್ತೇವೆ, ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಈಗಾಗಲೇ ನಡೆದಿರತಕ್ಕ, ತೆಗೆದುಕೊಂಡಿರತಕ್ಕ ಕ್ರಮವಲ್ಲದೆ ಅದರಿಂದ ಏನೂ ಬೆಳಕನ್ನು ಚೆಲ್ಲುತ್ತೀರಿ, ಅವುಗಳನ್ನು ಆಧರಿಸಿ ಮತ್ತೆ ಏನು ನಾವು ನಮ್ಮ ರಾಜ್ಯದ ಹಿತವನ್ನು ಕಾಪಾಡುವುದಕ್ಕೆ, ಸರ್ಕಾರದ ಹಿತವನ್ನು ಮಾಡುವುದಕ್ಕೆ ಏನು ಮಾಡಬೇಕೋ ಆ ಕಾರ್ಯಕ್ರಮವನ್ನು ನಾವು ತೆಗೆದುಕೊಳ್ಳುತ್ತೇವೆ. ಆದರೆ ಮಾನ್ಯ ಸಭಾಧ್ಯಕ್ಷರು ನಿರ್ಣಯ ಮಾಡಿರುವುದರಿಂದ ಸಭಾಧ್ಯಕ್ಷರ ನಿರ್ಣಯದಂತೆ ನಾವು ಹೋಗುವುದು ಸರಿಯಾಗುತ್ತದೆ.

ಶ್ರೀ ಜಗದೀಶ ಶೆಟ್ಟರ್ :- ಮಾನ್ಯ ಅಧ್ಯಕ್ಷರೇ, ಇಲ್ಲಿ ನಾನು ಹೇಳುವಂಥಾದ್ದು ಏನೆಂದರೆ, ನಿನ್ನೆ ತಮ್ಮ ಮನಸ್ಸು ಹೇಗೆ ಇತ್ತೋ ಅದು ನನಗೆ ಗೊತ್ತಿಲ್ಲ. ನಿನ್ನೆ ತಾವು ಈ ಅಜೆಂಡಾವನ್ನು ತಯಾರು ಮಾಡುವ ಸಂದರ್ಭದಲ್ಲಿ ಇದಕ್ಕೆ ಪ್ರಥಮ ಪ್ರಾಶಸ್ತ್ಯವನ್ನು ಕೊಡಬೇಕೆನ್ನುವ

ಉದ್ದೇಶವನ್ನು ಇಟ್ಟುಕೊಂಡು ಈ ನಾಲ್ಕನೇ ಐಟಂ ಗಮನ ಸೆಳೆಯುವ ಸೂಚನೆ ಆದಮೇಲೆ ಇದನ್ನು ಇಟ್ಟುಕೊಂಡಿದ್ದೀರಿ. ಅದು ಒಂದು ಹಂತದಲ್ಲಿ. ಅಂದರೆ ಇದಕ್ಕೆ ಚರ್ಚೆಗೆ ಪ್ರಾಶಸ್ತ್ಯವನ್ನು ಕೊಡಬೇಕೆಂದು ತಮಗೂ ಉದ್ದೇಶ ಇದೆ. ವಿತ್ತೀಯ ಕಾರ್ಯಕಲಾಪಗಳ ಬಗ್ಗೆ ಚರ್ಚೆ ಮಾಡುವುದಕ್ಕೆ ನಾವು ತಯಾರಿದ್ದೇವೆ. ಆದರೆ ಎಲ್ಲಾ ಶಾಸಕರೂ ಅದರಲ್ಲಿ ಭಾಗವಹಿಸುವುದಕ್ಕೆ ತಯಾರು ಇದ್ದಾರೆ. ಇಲ್ಲಿ ಮಾನ್ಯ ಹೆಚ್.ಕೆ. ಪಾಟೀಲರು ಹೇಳಿದರು, ಇವತ್ತು ನಾವು ರೂಲ್ಸ್ ಪ್ರಕಾರವೇ ಹೋಗಬೇಕಾಗುತ್ತದೆ, ರೂಲ್ಸ್ ಪ್ರಕಾರ ಇದನ್ನು ಮಾಡಬೇಕೆನ್ನುವಂಥದ್ದು. ಹೌದು, ರೂಲ್ಸ್‌ಗಳು ಇದ್ದಾವೆ. ಆದರೆ ಕೆಲವೊಂದು ಸಾರ್ವಜನಿಕ ಮಹತ್ವದ ವಿಷಯಗಳು ಇದ್ದಂಥ ಸಂದರ್ಭದಲ್ಲಿ ಅದನ್ನು ಪ್ರಾಶಸ್ತ್ಯದ ಮೇಲೆ ನಾವು ಚರ್ಚೆಗೆ ತೆಗೆದುಕೊಳ್ಳಬೇಕಾಗುತ್ತದೆ. ಇನ್ನೊಂದು ನಿಲುವಳಿ ಸೂಚನೆಯನ್ನು ನಾವು ಏಕೆ ಮಂಡನೆ ಮಾಡಿದ್ದೇವೆ ? ಮೊದಲು ನಾವು ರೂಲ್ಸ್ 69ರ ಮೇಲೆ ಕೊಡಬಹುದಾಗಿತ್ತಲ್ಲಾ.

ಅಧ್ಯಕ್ಷರು :– 5 ಗಂಟೆಗೆ ತೆಗೆದುಕೊಳ್ಳಬಹುದಲ್ಲಾ.

ಶ್ರೀ ಜಗದೀಶ ಶೆಟ್ಟರ್ :– 5 ಗಂಟೆಗೆ ತೆಗೆದುಕೊಳ್ಳುವುದನ್ನು ಒಂದೂವರೆ ಗಂಟೆಗೆ ಮೇಲೆ ಅಥವಾ 3 ಗಂಟೆಗೆ ತೆಗೆದುಕೊಳ್ಳುವುದಕ್ಕೆ ಸರ್ಕಾರ ಏತಕ್ಕೆ ಹಿಂದೇಟು ಹಾಕುತ್ತಿದೆ ?

ಅಧ್ಯಕ್ಷರು :– ಇಲ್ಲಿರುವ ಪ್ರಶ್ನೆ ಇಷ್ಟೇ ; ರೂಲ್ಸ್‌ನ್ನು ಫಾಲೋ ಮಾಡಬೇಕೋ, ಬಿಡಬೇಕೋ ನೀವೇ ಹೇಳಿ.

ಶ್ರೀ ಜಗದೀಶ ಶೆಟ್ಟರ್ :– ಮಾನ್ಯ ಅಧ್ಯಕ್ಷರೇ, ಸದನದಲ್ಲಿ ಒಂದು ಸಂಪ್ರದಾಯ ಇದೆ. ಅದನ್ನೇ ನಾವು ಫಾಲೋ ಮಾಡೋಣ ಯಾವ ವಿಷಯಕ್ಕೆ ಪ್ರಾಶಸ್ತ್ಯ ಕೊಡಬೇಕೋ ಅದಕ್ಕೆ ಕೊಡಬೇಕು.

ಶ್ರೀ ಡಿ.ಕೆ. ಶಿವಕುಮಾರ್ (ನಗರಾಭಿವೃದ್ಧಿ ಸಚಿವರು) :– ಮಾನ್ಯ ಅಧ್ಯಕ್ಷರೇ, ನಿನ್ನೆ 3 ಗಂಟೆಗಳ ಕಾಲ ಇದನ್ನು ಪ್ರಸ್ತಾಪ ಮಾಡಬೇಕೇ, ಬಿಡಬೇಕೇ ಎನ್ನುವ ಬಗ್ಗೆ ಸರ್ಕಾರದ ಮತ್ತು ಮಾಧ್ಯಮಗಳ ಮೇಲೆ ಬೆಳಕನ್ನು ಚೆಲ್ಲುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಇದರ ಬಗ್ಗೆ ಎಷ್ಟು ಗಂಟೆಗಳು ಬೇಕಾದರೂ ಚರ್ಚೆಯಾಗಲಿ. ನಾವು ಸಿದ್ಧವಾಗಿದ್ದೇವೆ, ಇದಕ್ಕೆ ಉತ್ತರ ಹೇಳುತ್ತೇವೆ ಎಂದೂ ಕೂಡ ಹೇಳಿದ್ದೇವೆ. ಅವರಿಗೂ ಕೂಡ ಇದು ಗೊತ್ತು. ಮೇಲ್ಮನೆಯಲ್ಲೂ ಸಹಿತ ಇದರ ಬಗ್ಗೆ ಬೇಕಾದಷ್ಟು ಅವರ ಮುಖಂಡರುಗಳು, ಸ್ನೇಹಿತರುಗಳು ಚರ್ಚೆ ಮಾಡಿದ್ದಾರೆ. ಅದಕ್ಕೆ ನಾವು ಉತ್ತರವನ್ನೂ ಹೇಳಿದ್ದೇವೆ. ಈಗಲೂ ಸರ್ಕಾರ ನಾವು ಅವರು ಏನು ಹೇಳುತ್ತಾರೋ ಅದನ್ನು ಕೇಳುವುದಕ್ಕೆ ತಯಾರಿದ್ದೇವೆ ; ಹಾಗೆಯೇ ಉತ್ತರ ಹೇಳುವುದಕ್ಕೆ ನಾವು ತಯಾರಿದ್ದೇವೆ. ಆದರೆ ಒಂದು ವಿಚಾರ ಏನೆಂದರೆ ಬೇಡಿಕೆಗಳ ಬಗ್ಗೆ ಚರ್ಚೆ ಪ್ರಾರಂಭವಾಗಿ ಈಗಾಗಲೇ ಮೂರು ದಿವಸಗಳಾಗಬೇಕಾಗಿತ್ತು. ಕಳೆದ ಎರಡು ಅಧಿವೇಶನಗಳಲ್ಲೂ ಕೂಡ ಈ ಬೇಡಿಕೆಗಳ ಬಗ್ಗೆ ಚರ್ಚೆಯೇ ಆಗಿಲ್ಲ. ಸರ್ಕಾರ ಬಜೆಟ್‌ನಲ್ಲಿ ಏನು ಮಾಡಿದ್ದೇವೆ, ಏನು ಆಗಬೇಕು, ರಾಜ್ಯದ ಜನತೆಗೆ ಯಾವ ದಿಕ್ಕಿನಲ್ಲಿ ಸರ್ಕಾರವನ್ನು ತೆಗೆದುಕೊಂಡು ಹೋಗುತ್ತಿದ್ದೇವೆ ಎನ್ನುವುದನ್ನು ಈ ಸರ್ಕಾರ ಕೂಡ ಹೇಳಲೇಬೇಕಾಗುತ್ತದೆ. ನಮಗೆ ಬರೀ ಗಿಲೊಟಿನ್ ಮಾಡಿಸಿಕೊಂಡು ಬಜೆಟ್ ಪಾಸ್ ಮಾಡುವುದಕ್ಕೆ ಈ ಸರ್ಕಾರ ತಯಾರಿಲ್ಲ. ಇದು ಚರ್ಚೆಯಾಗಲೇಬೇಕು. ಅವರು

ಹೇಳಲೇಬೇಕಾಗುತ್ತದೆ. ನಾವು ಕೂಡ ನಮ್ಮ ಸರ್ಕಾರದ ವಿಚಾರವನ್ನು ಹೇಳಲೇಬೇಕಾಗುತ್ತದೆ. ಹಿಂದೆ ತಮ್ಮ ತೀರ್ಪಿಗೆ ನಾವು ಅವಕಾಶ ಕೊಟ್ಟೆವು. ತಾವೇನು ತೀರ್ಪು ಕೊಡುತ್ತೀರಿ, ಯಾವ ನಿಯಮಗಳ ಮೇಲೆ ಚರ್ಚೆಗೆ ತೆಗೆದುಕೊಂಡಿರೋ ಅದಕ್ಕೆ ನಾವು ಒಪ್ಪಿಕೊಂಡೆವು. ಇದಾದಮೇಲೆ ನಮಗೇನು ಅಜೆಂಡಾವನ್ನು ಕಳುಹಿಸಿದ್ದೀರಿ, ಅದರ ಪ್ರಕಾರ ಮಾಡಿಕೊಂಡು ಹೋಗಿ. ಮತ್ತೆ ಈ ಬಗ್ಗೆ ತರ್ಕ ಏಕೆ ಬೇಕು ಎಂಬುದು ನನಗಂತೂ ಅರ್ಥವಾಗುತ್ತಿಲ್ಲ.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯಾ :- ಮಾನ್ಯ ಮಂತ್ರಿಗಳು ಅಜೆಂಡಾ ಪ್ರಕಾರ ಹೋಗಿ ಎಂದು ಹೇಳಿದ್ದಾರೆ ಸ್ವಾಮಿ. ಇನ್ನೇನು ಸ್ವಾಮಿ ಬೇಕು.

ಅಧ್ಯಕ್ಷರು :- ಅಜೆಂಡಾ ಪ್ರಕಾರ ಚರ್ಚಿಸುವುದರಲ್ಲಿ ಎರಡು ಮಾತಿಲ್ಲ. ಮಾನ್ಯ ಮಂತ್ರಿಗಳು ಹೇಳಿದ ಹಾಗೆ ವಿತ್ತೀಯ ಕಾರ್ಯಕಲಾಪಗಳು ಎರಡು ವರ್ಷದಿಂದಲೂ ಚರ್ಚೆಯಾಗಿಲ್ಲ. ಬರೀ ಗಿಲೆಟಿನ್ ಆಗಿದೆ. ನಾಳೆ ನೀವುಗಳೇ ಅಬ್ಜೆಕ್ಟ್ ಮಾಡುತ್ತೀರಿ ಅದಕ್ಕೆ, ಎಲ್ಲಾ ಗಿಲೆಟಿನ್ ಆಗುತ್ತಿವೆ ಎಂದು ನೀವೇ ಆಬ್ಜೆಕ್ಟ್ ಮಾಡುತ್ತೀರಿ.

ಶ್ರೀ ಡಿ.ವಿ. ಸದಾನಂದಗೌಡ :- ಗಿಲೊಟಿನ್ ಆಗುವುದಕ್ಕೆ ಕಾರಣ ಯಾರು ? ಸರ್ಕಾರದವರು ಇಲ್ಲಿ ಚರ್ಚೆ ಮಾಡುವುದಕ್ಕೆ ಅವರು ತಯಾರಿಲ್ಲ. ಅವರು ಮೊದಲು ಅಧಿವೇಶನವನ್ನು 60 ದಿವಸ, 100 ದಿವಸ ಮಾಡುತ್ತೇವೆ ಎಂದು ಹೇಳಿ 40 ದಿವಸ ಅಧಿವೇಶನ ನಡೆಸಿದರೆ ನಾವು ಚರ್ಚೆ ಮಾಡುವುದೆಲ್ಲಿ ? ಮತ್ತೊಂದು ಮಾಡುವುದೆಲ್ಲಿ ?

(ಗೊಂದಲ)

ಅಧ್ಯಕ್ಷರು :- ಈಗ ಟೈಮ್ ಆಗಿದೆ, ಈಗ ಸದನವನ್ನು 3 ಗಂಟೆವರೆಗೆ ಮುಂದೂಡುತ್ತಿದ್ದೇನೆ (ಸದನವು 1-39 ಗಂಟೆಗೆ ಮುಂದೂಡಲ್ಪಟ್ಟು 3 ಗಂಟೆಗೆ ಪುನಃ ಸಮಾವೇಶಗೊಳ್ಳಲು ನಿರ್ಧರಿಸಿತು).

ಹೆಚ್ಆರ್ವಿ / RNS

ಸದನವು ಮಧ್ಯಾಹ್ನ 3 ಗಂಟೆ 50 ನಿಮಿಷಕ್ಕೆ ಪುನರ್ ಸಮಾವೇಶಗೊಂಡಿತು. ಸನ್ಮಾನ್ಯ ಅಧ್ಯಕ್ಷರು (ಶ್ರೀ ಎಂ.ವಿ. ವೆಂಕಟಪ್ಪನವರು) ಅಧ್ಯಕ್ಷ ಪೀಠವನ್ನಲಂಕರಿಸಿದರು.

(9) ನಿಯಮ 69ರ ಮೇರೆಗೆ (ಮುಂದು)

ವಿಷಯ :- ಬೆಂಗಳೂರು ನಗರ ಹಾಗೂ ಜಿಲ್ಲಾ ವ್ಯಾಪ್ತಿಯಲ್ಲಿನ ನಗರ ಸಭೆ ಹಾಗೂ ಪುರಸಭೆಗಳಲ್ಲಿ ನಡೆದಿದೆ ಎನ್ನಲಾದ ಭ್ರಷ್ಟಾಚಾರದ ಬಗ್ಗೆ.

ಅಧ್ಯಕ್ಷರು :- ಮಾನ್ಯ ಶೆಟ್ಟರ್‌ರವರೆ, ಈಗ ವಿರೋಧ ಪಕ್ಷದವರನ್ನು ಮತ್ತು ಆಡಳಿತ ಪಕ್ಷದವರನ್ನು ಕರೆಸಿದ್ದೆ. ಅಲ್ಲಿ ಏನು ತೀರ್ಮಾನವಾಗಿದೆಯೆಂದರೆ ಇವೊತ್ತೇ 69ನೇ ನಿಯಮದಡಿಯಲ್ಲಿ ಚರ್ಚೆಗೆ ತೆಗೆದುಕೊಂಡು ಇವೊತ್ತೇ ಆ ವಿಚಾರ ಫಿನಿಶ್ ಆಗಬೇಕೆಂದು

ತೀರ್ಮಾನವಾಗಿದೆ. ದಯವಿಟ್ಟು ಈ ತೀರ್ಮಾನಕ್ಕೆ ಮನ್ನಣೆ ಕೊಡಬೇಕು. ಇವೊತ್ತೇ 6 ಗಂಟೆಯಾಗಲಿ, 7 ಗಂಟೆಯಾಗಲಿ ಕ್ಲೋಸ್ ಮಾಡಬೇಕು. ನೀವು ಈಗ ಚರ್ಚೆ ಪ್ರಾರಂಭಿಸಿ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) :– ಮಾನ್ಯ ಅಧ್ಯಕ್ಷರೆ, ನಮ್ಮ ಪಕ್ಷದ ಪರವಾಗಿ ಮೊದಲು ಮಾನ್ಯ ಸುರೇಶ್‌ಕುಮಾರ್‌ರವರು ಮಾತನಾಡುತ್ತಾರೆ.

ಅಧ್ಯಕ್ಷರು :– ಮಾನ್ಯ ಸುರೇಶ್‌ಕುಮಾರ್‌ರವರೇ, ತಾವು ಮಾತನಾಡಿ.

ಶ್ರೀ ಎಸ್. ಸುರೇಶ್‌ಕುಮಾರ್ (ರಾಜಾಜಿನಗರ) :– ಮಾನ್ಯ ಸಭಾಧ್ಯಕ್ಷರೆ, ಮೂರು ದಿವಸಗಳ ಹಿಂದೆ ನಿಲುವಳಿ ಸೂಚನೆ ಮೂಲಕ ಪ್ರಸ್ತಾಪ ಮಾಡಬೇಕಾದ ವಿಚಾರವನ್ನು ಇವೊತ್ತು 69ನೇ ನಿಯಮದಡಿಯಲ್ಲಿ ಈ ವಿಚಾರ ಪ್ರಸ್ತಾಪ ಮಾಡುವುದಕ್ಕೆ ತಾವು ಅವಕಾಶ ಮಾಡಿಕೊಟ್ಟಿದ್ದೀರಿ. ಅದಕ್ಕ ತಮಗೆ ಧನ್ಯವಾದಗಳು. ಸಭಾಧ್ಯಕ್ಷರೆ, ಇವೊತ್ತು ರಾಜ್ಯದಲ್ಲಿ ಕರ್ನಾಟಕ ಲೋಕಾಯುಕ್ತರವರು ಏನಿದ್ದಾರೆ ಅವರು ರಾಜ್ಯದ ಜನತೆಗೆ ಬಹಳ ಹತ್ತಿರದ ವ್ಯಕ್ತಿ ಆಗಿಬಿಟ್ಟಿದ್ದಾರೆ. ಅವರು ಮಾಡುತ್ತಿರುವ ಚಟುವಟಿಕೆಗಳಿಂದ ರಾಜ್ಯದ ಜನತೆಗೆ ಒಂದು ರೀತಿಯ ಹೊಸ ಭರವಸೆ ಇವೊತ್ತು ಮೂಡುತ್ತಿದೆ. ಇಡೀ ರಾಜ್ಯದ ಜನತೆಗೆ ಏನು ಗೊತ್ತಿತ್ತು ಅದನ್ನು ಲೋಕಾಯುಕ್ತರವರು ರುಜುವಾತು ಮಾಡುತ್ತಿದ್ದಾರೆ ಅಷ್ಟೆ. ಎಲ್ಲರಿಗೂ ಯಾವ ಯಾವ ಕಛೇರಿಗಳಲ್ಲಿ ಏನೇನು ಆಗುತ್ತಿದೆಯೆಂದು ಗೊತ್ತಿತ್ತು. ಅದನ್ನು ಲೋಕಾಯುಕ್ತದವರು ರುಜುವಾತು ಮಾಡುತ್ತಿದ್ದಾರೆ. ಕಳೆದ ಆರು ತಿಂಗಳಲ್ಲಿ ರಾಜ್ಯದ ಸರ್ಕಾರಿ ಆಸ್ಪತ್ರೆಗಳಿಗೆ, ಸಬ್-ರಿಜಿಸ್ಟ್ರಾರ್ ಕಛೇರಿಗಳಿಗೆ, ಎ.ಪಿ.ಎಂ.ಸಿ. ಗಳಿಗೆ, ಆರ್.ಟಿ.ಓ. ಕಛೇರಿ, ಹೀಗೆ ಅನೇಕ ಕಛೇರಿಗಳಿಗೆ ಲೋಕಾಯುಕ್ತದವರು ಹೋಗಿ ಅಲ್ಲಿ ನಡೆಯುತ್ತಿರುವ ವಿದ್ಯಮಾನವನ್ನು ಬಯಲಿಗೆ ಎಳೆಯುತ್ತಿದ್ದಾರೆ. ಈಗ ಬೆಂಗಳೂರು ಸುತ್ತಮುತ್ತ ಇರುವ ನಗರಸಭೆಗಳೇನಿವೆ, ಸಿಎಂಸಿ ಅವುಗಳು ಇವೊತ್ತು ಆ ಲಿಸ್ಟ್‌ಗೆ ಬಂದು ಸೇರಿಕೊಂಡಿವೆ. ಲೋಕಾಯುಕ್ತರವರಿಂದ ಧಾಳಿಯಾದ ಮೇಲೆ ವಿಶೇಷವಾಗಿ ಬೆಂಗಳೂರಿನ ಸುತ್ತಮುತ್ತಲಿನ ಸಿ.ಎಂ.ಸಿ. ಮತ್ತು ಪುರಸಭೆಗಳ ಮೇಲೆ ಧಾಳಿಯಾದ ಮೇಲೆ ಅದರಲ್ಲೂ ವಿಶೇಷವಾಗಿ ಕೃಷ್ಣರಾಜಪುರ ಮತ್ತು ಮಹದೇವಪುರ, ಆ ಸಿ.ಎಂ.ಸಿ. ಗಳ ಒಂದು ರೀತಿಯ ಕರ್ಮಕಾಂಡ ಎಂದರೆ ತಪ್ಪಾಗಲಾರದು. ಅದು ಬಯಲಿಗೆ ಬಂದ ಮೇಲೆ ನಗರಸಭೆಗಳು ಹೇಗೆ ಇರಬಾರದು ಎನ್ನುವುದಕ್ಕೆ ಬಹಳ ಅತ್ಯುತ್ತಮ ಮಾದರಿ ನಗರಸಭೆಗಳಾಗಿಬಿಟ್ಟಿವೆ ಈ ಮಹದೇವಪುರ ಮತ್ತು ಕೃಷ್ಣರಾಜಪುರ ನಗರಸಭೆಗಳು. ಯಾವ ರೀತಿ ಆಗಬೇಕು ಅನ್ನುವುದಕ್ಕೆ ರೋಲ್ ಮಾಡಲ್ಸ್ ಇರುತ್ತವೆ. ಆದರೆ ಈ ಪ್ರಸಂಗದಲ್ಲಿ ಯಾವ ರೀತಿ ಆಗಬಾರದು ಎನ್ನುವುದಕ್ಕೆ ರೋಲ್ ಮಾಡಲ್ಸ್ ಇವೊತ್ತು ಮಹದೇವಪುರ ಮತ್ತು ಕೃಷ್ಣರಾಜಪುರ ಆಗಿಬಿಟ್ಟಿವೆ. ಈ ನಗರಪಾಲಿಕೆ ಮತ್ತು ನಗರಸಭೆಗಳನ್ನು ನೋಡಿದರೆ, ಬರಬೇಕಾದ ಹಣವನ್ನು ಕೈಬಿಟ್ಟು ಬರಬಾರದ ಹಣವನ್ನು ಸ್ವೀಕರಿಸಿ ಯಾವ ಹಣವನ್ನು ನಾಗರಿಕರ ಸಲುವಾಗಿ ಖರ್ಚು ಮಾಡಬೇಕಾಗಿತ್ತೋ ಅದನ್ನು ಗುತ್ತಿಗೆದಾರರಿಗೆ ಕೊಟ್ಟು ಕೆಲಸ ಮಾಡದೇ ಇರುವುದಕ್ಕೆಲ್ಲಾ ಬಿಲ್ ಕೊಟ್ಟು ಬಹಳ ದೊಡ್ಡ ನಾಗರಿಕ ವಿರೋಧಿ, ಒಂದು ರೀತಿಯಲ್ಲಿ ರಾಜ್ಯದ ಬೊಕ್ಕಸದ ವಿರೋಧಿ ಕೆಲಸ ಇವೊತ್ತು ಆಗಿದೆ. ಒಂದು ಲೆಕ್ಕಾಚಾರದ ಪ್ರಕಾರ ಸುಮಾರು 240 ಕೋಟಿ ರೂಪಾಯಿಗಳಿಗೂ ಹೆಚ್ಚಿನ ಮೊತ್ತದ ಅವ್ಯವಹಾರ ಆಗಿದೆ. ನಾವು ಮೇವಿನ ಹಗರಣ, ಯೂರಿಯಾ ಹಗರಣದ ಬಗ್ಗೆ ಕೇಳಿದ್ದೇವು, ಆದರೆ ಈ ಹಗರಣ ನಮ್ಮ ರಾಜ್ಯದಲ್ಲಿ ನಡೆದಿಲ್ಲವೆಂದು ಬಹಳ ಸಮಾಧಾನದಿಂದ ಇದ್ದೆವು. ಇವೊತ್ತು ಈ ಒಂದು

ವಿದ್ಯಮಾನ ಆಚಿಗೆ ಬಂದಮೇಲೆ ನಮಗೆ ಅನ್ನಿಸುತ್ತಿದೆ, ಇಡೀ ದೇಶದಲ್ಲಿ ಈ ಹಗರಣಕ್ಕೆ ಒಂದು ಹೊಸ ಬಿರುದು ಏನಾದರೂ ಕೊಡಬಹುದಾದರೆ 'ದಿ ಗ್ರೇಟ್ ಟ್ರೆಜರಿ ರಾಬರಿ' ಎಂದು ಕೊಡಬಹುದು. ಒಂದು ಖಜಾನೆಯನ್ನು ಯಾವ ರೀತಿ ಲೂಟಿ ಮಾಡಬಹುದು, ಮಾಡುವುದಕ್ಕೆ ಸಾಧ್ಯ ಎಂದು ಇವೊತ್ತು ಇಡೀ ದೇಶಕ್ಕೆ ತೋರಿಸಿ ಕರ್ನಾಟಕ ರಾಜ್ಯ ಇಡೀ ದೇಶದಲ್ಲಿ ತಲೆ ತಗ್ಗಿಸುವ ರೀತಿಯಲ್ಲಿ ಆಗಿಬಿಟ್ಟಿದೆ. It is nothing short of a robbery of treasury. ಈ ಒಂದು ವಿದ್ಯಮಾನದಲ್ಲಿ ಟ್ರೆಷರಿ ಅಧಿಕಾರಿಗಳು, ನಗರಸಭೆ ಅಧಿಕಾರಿಗಳು, ಚುನಾಯಿತ ಪ್ರತಿನಿಧಿಗಳು, ಇವರೆಲ್ಲರ ಜೊತೆಗೆ ಇವರಿಗೆ ಧೈರ್ಯ ಕೊಡುವಂಥ ವ್ಯಕ್ತಿಗಳು ಸೇರಿದ್ದಾರೆ. ಈ ವ್ಯಕ್ತಿಗಳು ಅವರಿಗೆ, ನಾನು ಇದ್ದೇನೆ, ನೀವು ಮುಂದಕ್ಕೆ ಹೋಗಿ, ನೀವೇನಾದರೂ ಮಾಡಿ ನಾನು ಸಂಭಾಳಿಸುತ್ತೇನೆ ಎನ್ನುವ ಆ ರೀತಿಯ ಧೈರ್ಯ ಕೊಡುವ ವ್ಯಕ್ತಿಯ, ಇವರ ನಡುವಿನ ಅಪವಿತ್ರ ಮೈತ್ರಿ ಏನಿದೆ, ಅನೈತಿಕ ಸಂಬಂಧ ಏನಿದೆ ಅದು ನಮಗೆಲ್ಲಾ ಇವೊತ್ತು ಗಾಬರಿ ಉಂಟುಮಾಡುವ ಹಾಗೆ ಆಗಿದೆ. ನಮಗೆ ಇವೊತ್ತು ಗಾಬರಿಯಾಗುತ್ತಿದೆ. ಇದೇ ರೀತಿ ಮುಂದುವರಿದರೆ ಸಾಮಾನ್ಯ ಜನರಿಗೆ ಇಡೀ ವ್ಯವಸ್ಥೆ ಬಗ್ಗೆ ಯಾವ ರೀತಿ ವಿಶ್ವಾಸ ಉಳಿಯುತ್ತದೆ ? ಅದರ ಬಗ್ಗೆ ಇವೊತ್ತು ಸರ್ಕಾರ ನಡೆಸುತ್ತಿರುವವರು, ಆಡಳಿತ ನಡೆಸುತ್ತಿರುವವರು ಬಹಳ ಎಚ್ಚರಿಕೆಯಿಂದ ನೋಡಬೇಕಾಗುತ್ತದೆಯೇ ಹೊರತು ಯಾರನ್ನೋ ಪೊಲೀಟಿಕಲ್ ಆಗಿ ಅಟ್ಯಾಕ್ ಮಾಡುತ್ತಿದ್ದಾರೆ, ಯಾರನ್ನೋ ಟಾರ್ಗೆಟ್ ಮಾಡುತ್ತಿದ್ದಾರೆ ಎನ್ನುವ ಭಾವನೆ ಬಿಟ್ಟು ಅಲ್ಲಿಮೇಟ್ಲಿ ಶ್ರೀ ಎಸ್.ಎಂ. ಕೃಷ್ಣಾರವರು ಇರಬಹುದು, ಮಂತ್ರಿಗಳು ಇರಬಹುದು ಅಥವಾ ನಾವು ಇರಬಹುದು, ನಾವೆಲ್ಲರೂ ಕೂಡ we are trustees only. ನಾವು ಮುಂದಿನ ಜನಾಂಗಕ್ಕೆ ಇದನ್ನು ಇನ್ನೂ ಚೆನ್ನಾಗಿ ಮಾಡಿ ವರ್ಗಾಯಿಸಬೇಕು. we are not owners. ಆ ಟ್ರಸ್ಟೀಸ್ ಎನ್ನುವ ಮನೋಭಾವನೆಯನ್ನು ಇಟ್ಟುಕೊಂಡು ಇವೊತ್ತು ಏನು ಆಗುತ್ತಿದೆ ಅದರ ಹಿನ್ನೆಲೆಯಲ್ಲಿ ನಾವೂ ಕೂಡ ಬಹಳ ಎಚ್ಚರಿಕೆಯಿಂದ ಕ್ರಮ ತೆಗೆದುಕೊಳ್ಳಬೇಕಾದ ಅಗತ್ಯವಿದೆ. ನಾನು ಮೊದಲು ಒಂದು ಮಾತು ಹೇಳಿದೆ. ಬರಬಾರದ ಹಣವನ್ನು ತೆಗೆದುಕೊಂಡು ಇವತ್ತು ಬಹಳ ದೊಡ್ಡದಾಗಿ ದೋಚುವಂತಹ ಕೆಲಸವಾಗಿದೆ. ಯಾವರೀತಿ ಬರಬಾರದ ಹಣ ಬಂದಿದೆ ಎಂದು ಹೇಳುವುದಾದರೆ, ಈ ನಗರದ ಹೊರ ವಲಯದ ನಗರಸಭೆಗಳಿಗೆ ಅವರು ಏನು ಪ್ರಾಪರ್ಟಿ ಟ್ಯಾಕ್ಸ್ ಕಲೆಕ್ಟ್ ಮಾಡುತ್ತಾರೆ ಅಥವಾ ಇನ್ನೇನು ಆದಾಯ ಬರುತ್ತದೆ ಅದರ ಜೊತೆ ಇಷ್ಟು ಸ್ಟಾಂಪ್ ಚಾರ್ಜ್ ಎಂದು ಕೊಡಬೇಕು. ಅದು ಅವರಿಗೆ ಬರಬೇಕಾದ ಒಂದು ಹಣ. ಆದರೆ ಬರಬೇಕಾಗಿರುವುದು ಎಷ್ಟು ? ಅವರು ಪಡೆದುಕೊಂಡಿರುವುದು ಎಷ್ಟು ? ಅದನ್ನು ನೆನೆಸಿಕೊಂಡರೆ ಏನಾದರೂ ಒಂದು ಆಡಳಿತ ನಡೆಯುತ್ತಿದೆಯೇ ? ಅವರಿಗೆ ಭಯವೇನಾದರೂ ಇದೆಯಾ ? ನಾಚಿಕೆ ಏನಾದರೂ ಇದೆಯೇ ಎಂದು ಅನ್ನಿಸುವುದಿಲ್ಲವೆ ? ಕಳೆದ ಎರಡೂವರೆ ವರ್ಷಗಳಲ್ಲೆ ಈ ನಗರಸಭೆಗಳಲ್ಲಿ ಎಂದರೆ ಬೆಂಗಳೂರು ಸುತ್ತಮುತ್ತಲೂ ಇರುವ ನಗರಸಭೆಗಳಿಗೆ ಬಿಡುಗಡೆ ಆಗಬೇಕಾಗಿದ್ದ ಹಣ 23 ಕೋಟಿ ರೂಪಾಯಿಗಳು ಅಂದರೆ ಸ್ಟಾಂಪ್ ಚಾರ್ಜ್ ಬಾಬ್ತಿನಲ್ಲಿ. ಆದರೆ ಬಂದಿದ್ದು ಎಷ್ಟು ? 23 ಕೋಟಿ ರೂಪಾಯಿಗಳ ಜಾಗದಲ್ಲಿ 163 ಕೋಟಿ 72 ಲಕ್ಷ ರೂಪಾಯಿಗಳ ಬಿಡುಗಡೆಯಾಗಿದೆ. ಎಲ್ಲಿಯ 23 ಕೋಟಿ ರೂಪಾಯಿಗಳು ? ಎಲ್ಲಿಯ 163 ಕೋಟಿ ರೂಪಾಯಿಗಳು ? ನಾವು ಸ್ವಲ್ಪ ಲೆಕ್ಕಚಾರ ಹಾಕೋಣ. ಯಾವ ದಿಕ್ಕಿಗೆ ನಾವು ಹೋಗುತ್ತಿದ್ದೇವೆ ? ಈ ಸಂದರ್ಭದಲ್ಲಿ ಕಂದಾಯ ಸಚಿವಾಲಯದಿಂದ ಪ್ರಕಟವಾದಂತಹ

ಒಂದು ರಾಜ್ಯಪತ್ರದಲ್ಲೆ ಬಂದಂತಹ ಸಂಗತಿ, ಬೆಂಗಳೂರು ಜಿಲ್ಲಾ ನೋಂದಣಾಧಿಕಾರಿ ಕಚೇರಿಯಲ್ಲಿ 1993-94 ರಿಂದ ಬಿಡುಗಡೆ ಮಾಡಬೇಕಾದ ಅದಿಭಾರ ಶುಲ್ಕ ಬಾಕಿಯನ್ನು 1999 ಜೂನ್ ತಿಂಗಳಿಂದ 2000-01ನೇ ಮೇ ಅಂಚಿನವರೆಗೆ ಒಟ್ಟು 163 ಕೋಟಿ ರೂಪಾಯಿಗಳನ್ನು ಬೆಂಗಳೂರು ನಗರ ಜಿಲ್ಲೆಯ ಆರು ಪಟ್ಟಣ ಪಂಚಾಯಿತಿ, ಎರಡು ನಗರಸಭೆ, ಬೆಂಗಳೂರು ಮಹಾ ನಗರಪಾಲಿಕೆಗಳಿಗೆ ಹಣವನ್ನು ಕಾನೂನು ಬಾಹಿರವಾಗಿ ಬಿಡುಗಡೆ ಮಾಡಿರುವುದನ್ನು ವರದಿ ಮಾಡಿರುವುದಾಗಿ ನೋಂದಣಿ ಮಹಾ ಪರಿವೀಕ್ಷಕರು, ಮುದ್ರಾಂಕಗಳ ಆಯುಕ್ತರು, ಬೆಂಗಳೂರು ಇವರು ವರದಿ ಸಲ್ಲಿಸಿರುತ್ತಾರೆ. ಸದರಿ ಕಚೇರಿಯಲ್ಲಿ ಅದಿಭಾರ ಶುಲ್ಕ ಬಿಡುಗಡೆ ಮಾಡಿರುವ ಬಗ್ಗೆ ಸಂಬಂಧಪಟ್ಟ ಕಡತಗಳು ಲಭ್ಯವಿರುವುದಿಲ್ಲವೆಂದು ಇದೆ. ದುಡ್ಡು ಕೂಡ ಕೊಟ್ಟುಬಿಟ್ಟಿದ್ದಾರೆ. ಎಷ್ಟು ಹಣ ಕೊಡಬೇಕಾಗಿತ್ತು ಅದರ ನೂರು ಪಟ್ಟು ಜಾಸ್ತಿ ಕೊಟ್ಟು ಸಂಬಂಧಪಟ್ಟ ಕಡತಗಳು ಲಭ್ಯವಿರುವುದಿಲ್ಲವೆಂದು ಮಹಾಲೇಖಪಾಲಕರ ಲೆಕ್ಕ ತಪಾಸಣಾ ತಂಡಕ್ಕೆ ದಾಖಲೆಗಳು ಒದಗಿಸಿರುವುದಿಲ್ಲವಾಗಿಯೂ ತಿಳಿಸಿರುತ್ತಾರೆ. This is height of arrogance. ನಾವು ನಮ್ಮದೇ ಆದಂತಹ ಒಂದು ಸಂಸ್ಥೆ, ಆಡಿಟ್ ಟೀಂ ಎಂದು ಮಾಡಿಕೊಂಡಿದ್ದೇವೆ. ಅವರಿಗೆ ನಾವೇ ಮರ್ಯಾದೆ ಕೊಡದೆ ಇದ್ದರೆ ಬೇರೆ ದೇಶದವರು ಬಂದು ಕೊಡುತ್ತಾರಾ ? ಅವರಿಗೆ ನಾವು ಮನ್ನಣೆ ಕೊಟ್ಟಿಲ್ಲ. ಇದೆಲ್ಲಾ ಹೇಳುತ್ತಾ, ನಾನು ಆಗಲೇ ಹೇಳಿದ ಹಾಗೆ 23 ಕೋಟಿ ರೂಪಾಯಿಗಳು ರಿಲೀಜ್ ಆಗಬೇಕಾಗಿತ್ತು. ಆದರೆ ಕೃಷ್ಣರಾಜಪುರದ ಒಂದೇ ಸಿಎಂಸಿಗೆ 53.70 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಾರೆ. ಮಹದೇವಪುರದ ಸಿಎಂಸಿಗೆ 32 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಾರೆ. ಇಲ್ಲಿ ಎರಡೂ ಸೇರಿ 23 ಕೋಟಿ ರೂಪಾಯಿಗಳನ್ನು ಕೊಡಬೇಕಾಗಿತ್ತು. ಒಂದೊಂದು ನಗರಸಭೆಗಳಿಗೆ ಇಷ್ಟು ಧಾರಾಳವಾಗಿ ಕೊಡುತ್ತಿದ್ದಾರೆ. ಒಟ್ಟು 163 ಕೋಟಿ ರೂಪಾಯಿಗಳನ್ನು ರಿಲೇಜೇ ಮಾಡಿದ್ದಾರೆ. ಇಷ್ಟೆಲ್ಲಾ ಆದಮೇಲೆ ಕೂಡ ಈ ಅವ್ಯವಹಾರ ನಮ್ಮ ನಗರಾಭಿವೃದ್ಧಿ ಇಲಾಖೆಗೆ ಗೊತ್ತಿರಲಿಲ್ಲವೇ ? ಐ.ಜಿ.ಆರ್‌ಗೆ ಗೊತ್ತಿರಲಿಲ್ಲವೇ ಗೊತ್ತಿದ್ದರೂ 2001ನೇ ಜನವರಿಯಲ್ಲಿ ಇದರ ಬಗ್ಗೆ ರಾಜ್ಯ ಸರ್ಕಾರಕ್ಕೆ ವರದಿ ಬಂದಿದ್ದರೂ ಕೂಡ ಈ ಒಂದು ಅವ್ಯವಹಾರ ಅವ್ಯಾಹತವಾಗಿ ನಡೆದುಕೊಂಡು ಬರುತ್ತಲೇ ಇತ್ತು. ಈ ಒಂದು ತಿಜೋರಿಯ ದರೋಡೆ ಬಹಳ ಗುಪ್ತವಾಗಿ ನಡೆದುಕೊಂಡು ಬಂತು. Special Audit Report on the accounts of the District Registrar Bangalore Urban on the excess payment of additional stamp duty to the Notified Areas Committee/City Muncipal Councils/ Town Municipal Councils, Bangalore, for the period from April 1994 to June 2001. ಇದರಲ್ಲಿ ಸಬ್‌ಟ್ರಜರಿ ಬೆಂಗಳೂರು ನಾರ್ತ್ ತಾಲ್ಲೂಕು ಇದರ ಬಗ್ಗೆ ಹೇಳುತ್ತಾರೆ. It was observed that as a gainst the actual collection of additional stamp duty of Rs. 57.30 crores or 5,730 lakhs during the period from 1994-95 to 2000-01, an amount of Rs. 297 crores was released upto the end of 2001 to Notified Area Committees/ CMCs/TMCs. This has resulted in the release of an excess additional stamp duty of Rs. 239 crores by the District Registrar, Bangalore Urban. As against the amount of Rs. 49 crores due to the local bodies up to the end of March 2001, an amount of Rs. 289 crores were released during

the period 1998-99 to the end of 2001. ಎಂದರೆ ಎಷ್ಟು ಕೊಡಬೇಕು ? ಫೈನಾನ್ಸಿಯಲ್ ಡಿಸಿಪ್ಲಿನ್ ಎಂದು ನಮ್ಮ ಮಾನ್ಯ ಮುಖ್ಯಮಂತ್ರಿಗಳು ಪದೇ ಪದೇ ಬಜೆಟ್ ಭಾಷಣದಲ್ಲಿ ಹೇಳಿದ್ದಾರೆ. ಅದು ಏಕೆ ಪರ್ಕ್ಯೂಲೇಟ್ ಆಗಲಿಲ್ಲ ಅಥವಾ ಒಂದು ಭಯ ಅಥವಾ ಒಂದು ನಿಯಂತ್ರಣ, ಇದನ್ನು ಕೊಟ್ಟುಬಿಟ್ಟರೆ, ನಾನು ಏನು ತಪ್ಪು ಮಾಡುತ್ತೇನೆ ಎಂದು ಕೊಡುವವರಿಗೂ ಅನ್ನಿಸಲಿಲ್ಲ ; ಕೊಟ್ಟ ಕೋಡಂಗಿಗೂ ಅನ್ನಿಸಲಿಲ್ಲ, ಈಸಿಕೊಂಡ ಈರಭದ್ರನಿಗೂ ಅನ್ನಿಸಲಿಲ್ಲ. ಇದು ನಡೆದುಕೊಂಡು ಹೋಯಿತು. ಇವತ್ತಿಗೂ ಕೂಡ ನಡೆಯುತ್ತಿದೆ. ಅದರ ಜೊತೆಗೆ ಅವರು ಅದೇ ಆಡಿಟ್ ರಿಪೋರ್ಟ್‌ನಲ್ಲಿ ಸಿಸ್ಟಂಸ್ ಫೈಲ್ಯೂರ್ ಎಂದು ಬರೆದಿದ್ದಾರೆ. If the Inspector General Registration had reconciled the total amount of additional stamp duty transferred to the local bodies with reference to the provision made in the budget grant districtwise under the Head of Account 00302 deduct the payment to the local bodies of the net duties leved by them, this scam could have been detected. Even though the scam started in 1998-99 and continued till June 2001, it is surprising to note that the IG R and CS could not sense the scent of it till it was brought to the notice by the audit in March 2001.

ಇದರ ಜೊತೆಗೆ ಬಹಳ ಡಿಟೈಲ್ ಆಗಿ ಆಡಿಟ್ ರಿಪೋರ್ಟ್‌ನಲ್ಲಿ ಕೊಟ್ಟಿದ್ದಾರೆ.

Sub Treasury Bangalore North Taluk.

> As per the provisions contained in KMC Act, , no amount should be drawn by the Municipalities from the P.D Account kept by them in the Treasury for depositing in Banks. However it was observed that the sub treasury officer allowed the Municipalities to draw very heavy amounts from their P.D Accounts for depositing in various banks, all over the city vide examples furnished below.

There are examples of Krishnaraja Pura, Bommanahalli and Pattanagere.

> As per the letter dated 12.6.98 of the Director of Treasuries, the Treasury Officers were required to clear the bills/cheques upto Rs. 50 lakhs only relating to water supply schemes falling under B-Category and upto Rs. 10 lakhs in respect of all other items of expenditure, not listed in A, B or C-Categories.

ಇದು ಗಾಬರಿಯಾಗುವ ಅಂಶ :

In spite of the restrictions, However,

> It was observed that the following cheques of the municipalities for heavy amounts in favour of contractors/ supply firms have been cleared by the sub treasury officer vide examples furnished below :

ಮಾನ್ಯ ಅಧ್ಯಕ್ಷರೇ, ನಿಶ್ಮಾ ಎಲೆಕ್ಟ್ರಿಕಲ್ ಸಿಸ್ಟಂ ಶ್ರೀ ಬಿ.ಕೆ. ನಾಗೇಂದ್ರಕುಮಾರ್ ಯಾರು ಎಂದು ಹೇಳುತ್ತೇನೆ. Rs. 80 lakhs, on a single day i.e., on 1.7.2000 Next ; Shilpa Electricals B.K. Nagendra Kumar Rs. 40 lakhs ; dt. 3.1.2001. Again Nishma Electrical Systems B.K. Nagendra Kumar Rs. 66 lakhs. Again Nishma Electrical Systems B.K. Nagendra Kumar Rs. 45 lakhs. Again Nishma Electrical System B.K. Nagendra Kumar Rs. 59 lakhs ; and 15.3 and 16.3 B.K. Nagendrakumar Nishma Electrical System Rs. 66 lakhs ಆಮೇಲೆ ನಿಶ್ಮಾ ಬೇಜಾರಾಯಿತು, ಮತ್ತೆ ಒಂದು ಚೆಕ್ ಶ್ರೀ ಬಿ.ಕೆ. ನಾಗೇಂದ್ರಕುಮಾರ್ 38 ಲಕ್ಷದ 40 ಸಾವಿರ ರೂಪಾಯಿಗಳು, ನಿಶ್ಮಾ ಎಲೆಕ್ಟ್ರಿಕಲ್ಸ್ ಸಿಸ್ಟಂ ಶ್ರೀ ನಾಗೇಂದ್ರ ಕುಮಾರ್ 49 ಲಕ್ಷ ರೂಪಾಯಿಗಳು. ಈ ಕತೆಯನ್ನೇ ಹೇಳುತ್ತಾ ಹೋಗುತ್ತಾರೆ. ಇದು ಕೃಷ್ಣರಾಜಪುರದ ಒಂದು ಸಿಎಂಸಿಯ ಕತೆಯಾಗಿದೆ, ನಾನು ಇದರ ಇನ್ನೂ ಡಿಟೈಲ್ ಅನ್ನು ಓದುತ್ತಾ ಹೋಗಬಹುದು. ಇಲ್ಲಿ ಪ್ರಶ್ನೆ ಇರುವಂಥಾದ್ದು ಈ ರೀತಿ ಕಾನೂನಿನಲ್ಲಿ ನಿಯಮವಿದ್ದರೂ ಕೂಡ, ಎಷ್ಟರ ಮೇಲೆ ಚೆಕ್ ಕೊಡಬಹುದು, ಎಷ್ಟರ ಮೇಲೆ ದುಡ್ಡನ್ನು ರಿಲೀಜ್ ಮಾಡಬಹುದು, ಇದಕ್ಕೆಲ್ಲಾ ಕಾನೂನುಗಳು ಇದ್ದರೂ ಕೂಡ ಆ ಕಾನೂನನ್ನು ಮುರಿಯುವಂಥಾದ್ದಕ್ಕೆ ಧೈರ್ಯವನ್ನು ಕೊಟ್ಟವರು ಯಾರು ? ಈ 8-10 ವರ್ಷಗಳ ಹಿಂದೆ ಭಾರತದ ರಾಜಕೀಯದಲ್ಲಿ ಒಂದು ಪದ ಬಂದಿತು. Needle of Suspicion ಎಂದು. ಈ needle of suspicion ಈ ಪ್ರಕರಣದಲ್ಲಿ ಯಾರ ಕಡೆಗೆ ತೋರಿಸುತ್ತಿದೆ ? It is pointing towards whom ? Who is that very big man ? who is the person who gave confidence ? ನಾನು ಇರುವುದೇ ನಿಮಗೋಸ್ಕರ, ನಾನು ಇದ್ದೇನೆ ನಡೆಯಿರಿ, ಈ ಲೂಟಿ ಅವ್ಯಾಹತವಾಗಿ ನಡೆಯುತ್ತಿರಲಿ ಎಂದು ಧೈರ್ಯವನ್ನು ಕೊಟ್ಟವರು ಯಾರು ? ಅವರಿಗೆ ಈ ರೀತಿಯ ಧೈರ್ಯ ಬಂದದ್ದು ಹೇಗೆ ? ನಮ್ಮ ಅಧಿಕಾರಿಗಳು ಅದೇ ರೀತಿಯಲ್ಲಿ ಇರುತ್ತಾರೆ. When they are asked to bend, they crawl. ಇಲ್ಲಿ ಅವರಿಗೆ ಏನಾದರೂ ಹೇಳಿದರೆ ಹುಜೂರ್ ಎಂದು ಮಾಡುತ್ತಾರೆ. ಹೂಜೂರಿಯಲ್ಲಿರುವವರು ಹೂಜೂರ್ ಎಂದು ಈ ಕೆಲಸವನ್ನು ಮಾಡುತ್ತಾರೆ, ಈ ಕೆಲಸವನ್ನು ಮಾಡುತ್ತಾ ಹೋಗಿದ್ದಾರೆ. ಇದು ಬರೀ ದುಡ್ಡು ಕೊಟ್ಟಿರುವಂಥಾದ್ದು ಮತ್ತು ದುಡ್ಡು ರಿಲೀಜ್ ಮಾಡಿರುವಂಥಾದ್ದು ಇಲ್ಲಿ ನಾನು ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ಇಲ್ಲಿ ದುಡ್ಡು ತೆಗೆದುಕೊಳ್ಳಬಾರದನ್ನು ತೆಗೆದುಕೊಂಡಿದ್ದಾರೆ, ಇನ್ನೊಂದು ದುಡ್ಡು ತೆಗೆದುಕೊಳ್ಳಬೇಕಾದದ್ದು ನ್ಯಾಯಯುತವಾಗಿ ಬರಬೇಕಾದದ್ದನ್ನು ತ್ಯಾಗ ಮಾಡಿದ್ದಾರೆ ; ಉದಾಹರಣೆಗೆ ಮಹದೇವಪುರದ ಸಿಎಂಸಿಯಲ್ಲಿ, ನಾವು ಹಿಂದಿನಿಂದಲೂ ಯಾವುದೇ ಸ್ಥಳೀಯ ಸಂಸ್ಥೆ ತನ್ನ ಕಾಲ ಮೇಲೆ ತಾನು ನಿಲ್ಲಬೇಕು, ಆರ್ಥಿಕವಾಗಿ ಸಬಲವಾಗಬೇಕೆಂದು ಹೇಳುತ್ತಾ ಇರುತ್ತೇವೆ ; ಅಂದರೆ ನಾವು ಹೇಳುವಂಥಾದ್ದು ಎಷ್ಟು ತೆರಿಗೆಯನ್ನು ಹಾಕಬೇಕೋ ಅಷ್ಟು ಹಾಕಬೇಕೆಂದು ಹೇಳುತ್ತಾ ಇರುತ್ತೇವೆ. ಆದರೆ ನಗರಸಭೆಗಳ ಆರ್ಥಿಕ ಸ್ಥಿತಿಯನ್ನು ನೋಡಿದರೆ

ಆದರೆ ಅಲ್ಲಿರುವಂಥವರು ರಿಚ್ ಆಗಿರುತ್ತಾರೆ They are very poor or they have become very rich. ಇದಕ್ಕೆ ಒಂದು ಉದಾಹರಣೆ ಎಂದರೆ ಮಹದೇವಪುರ ಸಿಎಂಸಿಯಲ್ಲಿ ಬ್ರೂಕ್ ಬಾಂಡ್ ಕಂಪೆನಿ ಎನ್ನುವಂಥಾದ್ದು ಬಹಳ ದೊಡ್ಡ ಬಿಲ್ಡಿಂಗ್ ಇದೆ, ಅದಕ್ಕೆ ಟ್ಯಾಕ್ಸ್ ಅಸೆಸ್ 50 ಲಕ್ಷ ರೂಪಾಯಿಗಳು ಮಾಡಿದರು. ಅಲ್ಲಿ ಯಾರು ಧೈರ್ಯ ಕೊಟ್ಟರೋ, ಅವರ ಶಿಷ್ಯರು ಹೋಗಿ, ಯಾರೋ, ಹೋಗಿ, ಈ 50 ಲಕ್ಷ ರೂಪಾಯಿಗಳು ಬೇಡ, ಈ ಬ್ರೂಕ್ ಬಾಂಡ್ ಸಂಸ್ಥೆ ಬಡವ ಸಂಸ್ಥೆಯಾಗಿದೆ, below the poverty line. ಅವರಿಗೆ 50 ಲಕ್ಷ ರೂಪಾಯಿಗಳನ್ನು ಹಾಕುವುದು ಬೇಡ ಎಂದು 30 ಲಕ್ಷ ರೂಪಾಯಿಗಳ ಟ್ಯಾಕ್ಸ್ ಹಾಕಿದ್ದಾರೆ ; ಐಟಿಪಿಎಸ್ ಸಂಸ್ಥೆಗೆ ಅಸೆಸ್ ಮಾಡಬೇಕಾಗಿದ್ದಂಥಾದ್ದು 3.20 ಕೋಟಿ ರೂಪಾಯಿಗಳು ಬರಬೇಕು, ಇಲ್ಲಿ ಟ್ರೆಜರಿಯವರು ಹೇಗಿದ್ದರೂ ಕೊಡುತ್ತಾರೆ, ಇವರು ಬಡ ಜನ ಇವರಿಗೆ ಏಕೆ ಹಾಕುವುದು ಎಂದು 20 ಲಕ್ಷ ರೂಪಾಯಿಗಳ ಟ್ಯಾಕ್ಸ್ ಹಾಕಿದರು. ಇಲ್ಲಿ 3 ಕೋಟಿ ರೂಪಾಯಿಗಳು ಎಲ್ಲಿ ? 20 ಲಕ್ಷ ರೂಪಾಯಿಗಳು ಎಲ್ಲಿ ? ಅದೇ ರೀತಿಯಲ್ಲಿ ಚೈತನ್ಯ ಡೆವಲಪರ್ಸ್ ಆ ಅಪಾರ್ಟ್‌ಮೆಂಟ್ ನೋಡಿದರೆ ಗೊತ್ತಾಗುತ್ತದೆ. ಇದಕ್ಕೆ ಟ್ಯಾಕ್ಸ್ 14 ಕೋಟಿ ರೂಪಾಯಿಗಳನ್ನು ಹಾಕಬೇಕಾಗಿತ್ತು, ಆದರೆ ಬರುತ್ತಿರುವಂತಹದ್ದು 46 ಲಕ್ಷ ರೂಪಾಯಿಗಳು ; ಸಿಎಂಸಿಯಲ್ಲಿ ಆ ನಾಗರಿಕರಿಗೆ ಬಹಳ ಸಹಾಯ ಮಾಡಿದ್ದಾರೆ, ತೆರಿಗೆಯನ್ನು ಮನ್ನಾ ಮಾಡಿದ್ದಾರೆ, ನಿಜವಾಗಲೂ ಕೂಡ Citizen Friendly ಸಿಎಂಸಿ ಎಂದರೆ ಮಹದೇವ ಪುರ ಎಂದು ಅವಾರ್ಡ್ ಅನ್ನು ಕೊಡುತ್ತಿರಾ ? ಅಂದರೆ ಬರಬೇಕಾದಂತಹ ಕಂದಾಯವನ್ನು ಬಿಟ್ಟು, ಬರಬಾರದಂತಹ ಹಣವನ್ನು ಈ ರೀತಿಯಾಗಿ ತೆಗೆದುಕೊಂಡು ಒಂದು ರೀತಿಯಲ್ಲಿ Local Self Government ಗೆ ಒಂದು ತಿಲಾಂಜಲಿಯನ್ನು ಕೊಡುವಂತಹ ಕೆಲಸವಾಗಿದೆ. ಇದು ಆದಮೇಲೆ ಹಣವನ್ನು ಪಾವತಿ ಮಾಡುವ ಬಗ್ಗೆ ಯಾವರೀತಿ ಕೆಲಸ ಮಾಡಿದ್ದಾರೆ ? ನಾನು ಹೇಳಿದ Needle of suspicion ಇಲ್ಲಿ ಬರುತ್ತದೆ. ಕೃಷ್ಣರಾಜಪುರದ್ದು ಕೇವಲ ಐದಾರು ಉದಾಹರಣೆಗಳನ್ನು ಕೊಡುತ್ತೇನೆ ; ಇದರಲ್ಲಿ ಭ್ರಷ್ಟಾಚಾರವಿದೆ, highhandedness ಸ್ವಜನ ಪಕ್ಷಪಾತವಿದೆ, ನೀವು 6ನೇ ತರಗತಿಗೋ 7ನೇ ತರಗತಿಗೋ ಒಂದು ಪಠ್ಯಪುಸ್ತಕ ಇಟ್ಟರೆ, ಅದರಲ್ಲಿ ಮಹದೇವಪುರದ ಲೆಸನ್ ಸೇರಿಸಿದರೆ ಜನರಿಗೆ ಗೊತ್ತಾಗುತ್ತದೆ. ಈ ಮಹದೇವಪುರದಲ್ಲಿ ನೀರು ಸರಬರಾಜು ಗುತ್ತಿಗೆಗೆ ಮತ್ತು ಸಾಮಗ್ರಿಗಳಿಗೆ 20 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಇದನ್ನು ಗೋಕುಲ ಎಂಟರ್ ಪ್ರೈಸಸ್ ಎನ್ನುವಂತಹ ಒಂದು ಸಂಸ್ಥೆಗೆ ಕೊಟ್ಟಿದ್ದಾರೆ, ಈ ಸಂಸ್ಥೆ ಯಾರದ್ದು ಎಂಬುದು ಕುತೂಹಲವಾಗಿದೆ. ಇದು ಮಾನ್ಯ ಕೃಷ್ಣಪ್ಪನವರೇ, ಈ ಸಂಸ್ಥೆ ಯಾರದ್ದು ಎಂದು ನಿಮಗೆ ಗೊತ್ತಿದೆಯೇ ?

ಶ್ರೀ ಎ. ಕೃಷ್ಣಪ್ಪ :- ನೀವು ಮಾತನಾಡುತ್ತಿದ್ದೀರಿ, ಮಾತನಾಡಿ.

ಶ್ರೀ ಎಸ್. ಸುರೇಶ್‌ಕುಮಾರ್ :- ಇದು ಶ್ರೀ ರಮೇಶ್ ಎನ್ನುವಂಥ ವ್ಯಕ್ತಿಯದ್ದು. ಈ ಗೋಕುಲ ಎಂಟರ್ ಪ್ರೈಸಸ್‌ನವರಿಗೆ ನೀರು ಸರಬರಾಜು ಮತ್ತು ಸಾಮಾಗ್ರಿಗೆ ಎಂದು 20 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ನಾವು ಬೆಳಿಗ್ಗೆ ಪಬ್ಲಿಕ್ ಯುಟಲಿಟಿ ಬಿಲ್ಡಿಂಗ್ ನೈರ್ಮಲ್ಯದ ವಿಚಾರವನ್ನು ಮಾತನಾಡಿದೆವು. ಇದು ನೈರ್ಮಲ್ಯವಾಗಿ ಇದೆಯೋ, ಇಲ್ಲವೋ ಎಂದು ಮಾತನಾಡಿದೆವು. ಇಲ್ಲಿ ಮಹದೇವಪುರದವರು ಮತ್ತು ಕೃಷ್ಣರಾಜಪುರದವರು ನೈರ್ಮಲ್ಯವಾಗಿಟ್ಟು ಕೊಳ್ಳಬೇಕೆಂಬ ಬಗ್ಗೆ ಸಿರೀಯಸ್ ಆಗಿದ್ದಾರೆ. ಇವರು ಈ ನೈರ್ಮಲ್ಯವನ್ನು ಕ್ಲೀನಾಗಿ ಇಟ್ಟುಕೊಳ್ಳುವುದು

ಹೇಗೆ ? ಇದಕ್ಕೆ ಒಂದು ಕೋಟಿ ರೂಪಾಯಿಗಳನ್ನು ನೈರ್ಮಲ್ಯಕ್ಕೆಂದು ಗುತ್ತಿಗೆಗೆ ಕೊಟ್ಟರು ; ಇದನ್ನು ಯಾರಿಗೆ ಕೊಟ್ಟರೆಂದರೆ ಶ್ರೀ ನಾಗರಾಜು ಎನ್ನುವವರಿಗೆ ಕೊಟ್ಟರು ; ಮಾನ್ಯ ಕೃಷ್ಣಪ್ಪನವರೇ, ಅವರು ಯಾರೆಂದು ಹೇಳಲೀ ಅವರು ಹೆಸರು ಹೇಳಬಾರದೆಂದು ಇದೆಯೇ ?

ಶ್ರೀ ಎ. ಕೃಷ್ಣಪ್ಪ :- ಯಾವುದು ಎಂಬುದು ಹೇಳಿ.

ಶ್ರೀ ಎಸ್. ಸುರೇಶ್‌ಕುಮಾರ್ :- ಶ್ರೀ ನಾಗರಾಜ್ ಎನ್ನುವವರಿಗೆ ಅಲ್ಲಿನ ನಮ್ಮ ವರ್ತೂರಿನ ಶಾಸಕರು ಯಾರಿದ್ದಾರೆ, ಅವರ ಸೋದರ ಸಂಬಂಧಿಯವರಿಗೆ ಕೊಟ್ಟರು. ಇದಾದಮೇಲೆ ಅಲ್ಲಿ ಕಾಂಗ್ರೆಸ್ ಆಡಳಿತವಿರುವುದು, ಅಂದಮೇಲೆ ಕಾಂಗ್ರೆಸ್ ಗಿಡವನ್ನು ಕೀಳಬೇಕಲ್ಲಾ, ಈ ಕಾಂಗ್ರೆಸ್ ಗಿಡಗಳನ್ನು ಕೀಳುವಂತಹ ಕಾಂಟ್ರಾಕ್ಟ್ ಈ ನಾಗರಾಜ್‌ರವರಿಗೆ ಕೊಟ್ಟರು. ಗಿಡಗಳ ರಕ್ಷಣೆಗೆ ಬೇಲಿ ಹಾಕುವಂಥಾದ್ದು, ಕೀಟನಾಶಕಗಳ ಸಿಂಪರಣೆ, ಟ್ರಾನ್ಸ್‌ಫಾರ್ಮರ್‌ಗಳನ್ನು ಹಾಕುವಂಥಾದ್ದು, ಇವುಗಳನ್ನು ಈ ನಾಗರಾಜ್‌ರವರಿಗೆ ಕೊಟ್ಟಿದ್ದಾರೆ ; ಮತ್ತೆ ಟ್ಯಾಂಕರ್‌ಗಳಲ್ಲಿ ವಾಟರ್ ಸಪ್ಲೈ ಮಾಡುವಂಥಾದ್ದು, ಇದು ಯಾರಿಗೆ ಕೊಡುವುದು ? ಕಾವೇರಿ ವಾಟರ್ ಸಪ್ಲೈ ಇದು ಬಹಳ ಅನ್ಯೋನ್ಯವಾದಂತಹ ಕುಟುಂಬವಾಗಿದೆ, ಈ ರೀತಿಯ ಕುಟುಂಬಗಳು ಇದ್ದರೆ, ದೇಶದಲ್ಲಿ ಯಾವ ಗಲಾಟೆಗಳೂ ಆಗುವುದಿಲ್ಲ. ಇದಾದಮೇಲೆ ಎಲ್ಲಾ ಸಮಾರಂಭಗಳಿಗೆ ಶಾಮಿಯಾನದ ಗುತ್ತಿಗೆ ಬಗ್ಗೆ, ಇಲ್ಲಿ ಮಾನ್ಯ ಮುಖ್ಯಮುಖ್ಯಮಂತ್ರಿಯವರು ಏನಾದರೂ ಹೋದರೆ ಹತ್ತು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಬೇಕೆಂಬ ಪ್ರತೀತಿ ಇದೆ. ಇಲ್ಲಿ ಶಾಮಿಯಾನ ಬೇಕೆಂದರೆ ಒಂದೇ ಕಂಪನಿಗೆ ಕೊಡುವುದು ; ಶ್ರೀ ಚೆನ್ನಕೇಶವ ಬ್ರಿಜಲ್ಸ್, ಎಸ್‌ಸಿಬಿ ; ಎನ್ನುವಂತಹ ಒಂದು ಕಂಪೆನಿ ಇದೆ. ನಿಮ್ಮ ಹೆಸರು ಎ. ಕೃಷ್ಣಪ್ಪ ಎಂದು ಇದೆ, ಆದರೆ ಆ ಕಂಪೆನಿಯ ಮುಖ್ಯಸ್ಥರ ಹೆಸರು ಎ. ಮುನಿಸ್ವಾಮಿ ಎಂದು ಇದೆ. ಈ ರೀತಿಯಾಗಿ ನಾನು ಒಬ್ಬನೇ ಉದ್ಧಾರವಾದರೆ ಸಾಲದು, ನನ್ನ ಕುಟುಂಬವೂ ಉದ್ದಾರವಾಗಬೇಕು, ಬೇರೆಯವರು ಹಾಳಾದರೂ ಪರವಾಗಿಲ್ಲವೆನ್ನುವಂತಹ ಮನಸ್ಥಿತಿ ಏನಿದೆ, ಆ ಮನಸ್ಥಿತಿಯಿಂದ ಈ ಎರಡು ಮುನಿಸಿಪಾಲಿಟಿಗಳೂ ಈ ಸ್ಥಿತಿಗೆ ಬಂದಿದೆ. 2000-2001ಕ್ಕೆ ಕೆ.ಆರ್. ಪುರದ ನಗರಸಭೆಗೆ ಅಧ್ಯಕ್ಷರು ಆಗಿದ್ದವರು ಯಾರು ? ಶ್ರೀ ಬಿ.ಕೆ. ಮೋಹನ್ ಬಾಬು ಎನ್ನುವವರು ಆಗಿದ್ದರು. ಅವರೂ ಕೂಡ ಇವರ ಕುಟುಂಬದ ಸಕ್ರಿಯ ಸದಸ್ಯರಾಗಿದ್ದಾರೆ, ಇವರು ಅಧ್ಯಕ್ಷರಾಗಿದ್ದಾಗ ಈ ಸಂಸ್ಥೆಗಳು ಎಲ್ಲಾ ನಡೆಯುತ್ತಾ ಬಂತು ; ಅಂದರೆ ಅಧ್ಯಕ್ಷರು ನಮ್ಮವರೇ ಆಗಬೇಕು, ನೀರು ಸರಬರಾಜು ನಮ್ಮವರೇ ಮಾಡಬೇಕು ಕಾಂಗ್ರೆಸ್ ಗಿಡಗಳನ್ನು ನಮ್ಮವರೇ ಕೀಳಬೇಕು ; ಎಲೆಕ್ಟ್ರಿಕಲ್ ಕೆಲಸವೂ ನಮ್ಮವರೇ ಮಾಡಬೇಕು, ಎಲ್ಲವನ್ನೂ ನಮ್ಮವರೇ ಮಾಡಬೇಕು. ಇದಕ್ಕೆ "ಸರ್ವೇಜನಃ ಸುಖಿನೋ ಭವಂತು" ಎಂದು ಹೇಳುವುದು. ಈ ರೀತಿಯಾಗಿ ಕೆಲಸವನ್ನು ಮಾಡಿದ್ದಾರೆ ; ಇವತ್ತು ಈ ವಿಚಾರದಲ್ಲಿ ಲೋಕಾಯುಕ್ತದವರು ರೈಡ್ ಮಾಡಿದ್ದಾರೆ. ಇವತ್ತು ಲೋಕಾಯುಕ್ತರು ಧಾಳಿ ಮಾಡಿದ್ದಾರೆನ್ನುವ ವಿಚಾರ ಬಂದಿದೆ, ಒಂದು ವರ್ಷದ ಹಿಂದೆ ಅಂದರೆ 19.2.2001 ಅವತ್ತೇ ಈ ಮಾಹಿತಿಯನ್ನೆಲ್ಲಾ ನೀಡಿ ಮುಖ್ಯಮಂತ್ರಿಗಳಿಗೆ ಅಲ್ಲಿನ ಕಾರ್ಯಕರ್ತರು ಒಂದು ಪತ್ರವನ್ನು ನೀಡಿದರು. ಆದರಲ್ಲಿ ವಿದ್ಯುತ್ ಸಾಮಗ್ರಿ ಖರೀದಿ, ಬೀದಿ ನಾಮಫಲಕಗಳು, ನೀರು ಸರಬರಾಜು ಸಾಮಗ್ರಿ ಕೊಳವೆ ಬಾವಿಗಳು, ಸಿವಿಲ್ ಇಂಜನಿಯರಿಂಗ್ ಸಾಮಗ್ರಿ ಇವೆಲ್ಲದರಲ್ಲಿ ಏನೇನೇ ಅವ್ಯವಹಾರವಾಗಿದೆ ಎಂದು ಒಂದು ಪಟ್ಟಿಯನ್ನು ಕೊಟ್ಟರು. ಆ ಪಟ್ಟಿಯಾದ ಮೇಲೆ

ಏನಾಯಿತು ಎನ್ನುವ ಬಗ್ಗೆ ನಾನು ಹೇಳುತ್ತೇನೆ. ಮೊನ್ನೆ ನಾನು ಕೆ.ಆರ್. ಪುರಂಗೆ ಹೋಗಿದ್ದೆ ಅಲ್ಲೊಬ್ಬ ಹಾವಾಡಿಗ ಹಾವು ಆಟ ಆಡಿಸುತ್ತಿದ್ದ, ಸುಮಾರು 300-400 ಜನರು ಸೇರಿದಾರೆಂದು ಅವನಿಗೆ ಖುಷಿ ಜನರ ಹತ್ತಿರ ಚಪ್ಪಾಳೆ ಗಿಟ್ಟಿಸಬೇಕೆಂದು ಒಂದು ಎಳೆನೀರು ತೆಗೆದುಕೊಂಡ. ನಾವೆಲ್ಲಾ ಎಳೆನೀರನ್ನು ತೆಗೆದುಕೊಂಡು ಕೊಚ್ಚಿ ನೀರು ಕುಡಿದು ಕಾಯಿದ್ದರೆ ತಿನ್ನುತ್ತೇವೆ. ಆತ ತಿಪಟೂರಿನ ಎಳೆನೀರು ಎಂದು ಎಲ್ಲರಿಗೂ ತೋರಿಸಿದ ಎಳೆನೀರಿಗೆ ನುಸಿರೋಗವಿರಲಿಲ್ಲ, ಚೆನ್ನಾಗಿತ್ತು, ಆತ ಚಿಪ್ಪು ಸಹಿತ ಎಳೆ ನೀರನ್ನು ನುಂಗಿಬಿಟ್ಟ ; ಜನಕ್ಕೆ ಖುಷಿಯಾಗಿ ಚಪ್ಪಾಳೆ ತಟ್ಟಿದ್ದೇ ತಟ್ಟಿದ್ದು ! ಅಲ್ಲೊಬ್ಬ ಅಜ್ಜ ನಿಂತಿದ್ದವರು ಚಪ್ಪಾಳೆಯನ್ನೇ ತಟ್ಟಲಿಲ್ಲ. ಹಾವಾಡಿಗನಿಗೆ ಬೇಜರಾಗಿ, ಈ ಅಜ್ಜನ ಹತ್ತಿರ ಹೇಗಾದರೂ ಮಾಡಿ ಚಪ್ಪಾಳೆ ಗಿಟ್ಟಿಸಬೇಕೆಂದು, ಒಂದು ದೊಡ್ಡ ಆಯುಧಪೂಜೆ ಕುಂಬಳಕಾಯಿಯನ್ನು ತಂದ ; ಅದನ್ನು ಎಲ್ಲರಿಗೆ ತೋರಿಸಿ ಇಡೀ ಕುಂಬಳಕಾಯಿಯನ್ನೇ ಗುಳುಂ ಎಂದು ನುಂಗಿದ, ಜನರಿಂದ ಚಪ್ಪಾಳೆಯೋ ಚಪ್ಪಾಳೆ ಆದರೆ ಆ ಅಜ್ಜ ಚಪ್ಪಾಳೆ ತಟ್ಟಲಿಲ್ಲ. ಆಮೇಲೆ ಆತ ಆರು ಅಡಿ ಹಾವನ್ನು ತೆಗೆದುಕೊಂಡ, ಆಗೊಂಬೆ ವಿಷಪೂರಿತ ಹಾವು, ಅದನ್ನು ಎಲ್ಲರಿಗೆ ತೋರಿಸಿ ಅದರ ವೈಶಿಷ್ಟ್ಯಗಳನ್ನೆಲ್ಲಾ ವಿವರಿಸಿ ಇಡೀ ಹಾವನ್ನೇ ಗುಳುಂ ಎಂದು ನುಂಗಿದ, ಜನರಿಂದ ಚಪ್ಪಾಳೆ ; ಆದರೆ ಆ ಅಜ್ಜ ಚಪ್ಪಾಳೆ ತಟ್ಟಲಿಲ್ಲ. ಆಗ ಅವನು ಆ ಅಜ್ಜನ ಹತ್ತಿರ ಹೋಗಿ, ಏಕೆ ಅಜ್ಜ ನನ್ನ ಮೇಲೆ ಕೋಪವೇ, ನಾನು ಇದೆಲ್ಲಾ ಸಾಧನೆಯನ್ನು ಮಾಡಿದೆ, ನೀನು ಏತಕ್ಕೆ ಚಪ್ಪಾಳೆ ತಟ್ಟಲಿಲ್ಲವೆಂದು ಕೇಳಿದ. ಅಜ್ಜ, ನೋಡಯ್ಯ, ನೀನು ಏನು ಮಾಡಿದೆ ? ಒಂದು ಎಳೆನೀರನ್ನು ನುಂಗಿದೆ. ಒಂದು ಕುಂಬಳಕಾಯಿ ನುಂಗಿದೆ, ಒಂದು ಹಾವು ನುಂಗಿದೆ, ಬಾ ನನ್ನ ಕೃಷ್ಣರಾಜಪುರ ನಗರಸಭೆಗೆ ರಸ್ತೆಗಳನ್ನೇ ನುಂಗಿದ್ದಾರೆ, ಚರಂಡಿಗಳನ್ನೇ ನುಂಗಿದ್ದಾರೆ, ಎಲೆಕ್ಟ್ರಿಕ್ ಕಂಬವನ್ನು ನುಂಗಿದ್ದಾರೆ, ಟ್ರೀ ಗಾರ್ಡ್‌ಗಳನ್ನು ನುಂಗಿದ್ದಾರೆ, ಆ ಬಡವರಿಗೆ ಕೊಡಬೇಕಾದ ಆಸ್‌ಬೆಸ್ಟ್‌ ಸ್ ಶೀಟ್ ಅನ್ನು ನುಂಗಿದ್ದಾರೆ, ಟ್ರಜರಿಯನ್ನೂ ಕೂಡ ನುಂಗಿದ್ದಾರೆ, ಅದನ್ನೆಲ್ಲಾ ನುಂಗಿ ಜೀರ್ಣ ಮಾಡಿಕೊಂಡ ಮೇಲೆ ನಿನ್ನದ್ಯಾವುದಯ್ಯ ಮಹಾ ದೊಡ್ಡ ಸಾಧನೆ ಎಂದು ಹೇಳಿದ ; ಇದು ಅಕ್ಷರಶಃ ನಿಜ. ನಾನು ಇದನ್ನು ಏತಕ್ಕೆ ಹೇಳಿದೆ ಎಂದರೆ, ಇವತ್ತು ಸಮಾಜದಲ್ಲಿ ಮೊದಲೇ ತಿರಸ್ಕಾರಕ್ಕೆ ಒಳಗಾಗಿರುವ ರಾಜಕಾರಣದಲ್ಲಿ ಕೆಲಸ ಮಾಡುತ್ತಿರುವ ನಾವು ಇನ್ನಷ್ಟು ತಿರಸ್ಕಾರಕ್ಕೆ ಒಳಗಾಗುವುದಕ್ಕೋಸ್ಕರ ಇಂತಹ ಕೆಲಸಗಳು ನಡೆಯುತ್ತಿವೆ. ಒಂದು ರೀತಿಯ ಎಂದು ಇದೆಯಲ್ಲಾ, ಭಂಡ ಧೈರ್ಯ, ನಾವು ಏನು ಮಾಡಿದರೂ ಜೈಸಿಕೊಳ್ಳುತ್ತೇವೆಂದು ಏನು ಮಾಡಿದರೂ ಜೀರ್ಣಿಸಿಕೊಳ್ಳುತ್ತೇವೆ. ಈ ಬಗ್ಗೆ ನಾವು ಬಹಳ ಎಚ್ಚರಿಕೆಯಿಂದ ಇರಬೇಕು. ಸ್ಟಾಂಪ್ ಡ್ಯೂಟಿ ತೆಗೆದುಕೊಳ್ಳಬಾರದು ತೆಗೆದುಕೊಂಡರು, ತೆಗೆದುಕೊಳ್ಳಬೇಕಾದ ತೆರಿಗೆಯನ್ನು ಬಿಟ್ಟರು, ಯಾರಿಗೆ ದುಡ್ಡು ಕೊಡಬೇಕೋ ಅವರಿಗೆ ಕೊಡಬಾರದು, ಯಾರಿಗೆ ಕೊಡಬಾರದೊ ಅವರಿಗೆ ಕೊಟ್ಟರು. ಅಲ್ಲಿಯ ಸಿಎಂಸಿಯವರೇ ಒಂದು ಪತ್ರ ಬರೆದು, ನಮ್ಮದು ಬಹಳ ಚೆನ್ನಾಗಿ ನಡೆಯುತ್ತಿದೆ, ಲೋಕಾಯುಕ್ತರು ಬಂದು ತಪ್ಪು ಮಾಡಿಬಿಟ್ಟರೆಂದು ಹೇಳಿದ್ದಾರೆ. ಅವರ ಪ್ರಕಾರ, ಆಸ್ ಬೆಸ್ಟಸ್ ಶೀಟ್, ಬಡವರಿಗೆ 25000 ಸೂರಿ ಗೋಸ್ಕರ ಹಂಚಿರುವುದು. ನಾನು ಲೆಕ್ಕಾ ಹಾಕಿದೆ, ಒಂದು ಆಸ್ ಬೆಸ್ಟಸ್ ಶೀಟಿಗೆ ರೂ. 250, 25000 ಶೀಟ್‌ಗಳಿಗೆ ಆರು ಲಕ್ಷದ ಇಪ್ಪತ್ತೈದು ಲಕ್ಷ ರೂಪಾಯಿಗಳಾಗಬೇಕು, ಇವರು ಈ ಬಾಬಿಗೆ ಒಂದು ಕೋಟಿ, ನಲವತ್ತೈದು ಲಕ್ಷದ, ಮೂವತ್ತೆರಡು ಸಾವಿರದ ಎಪ್ಪತ್ತೆಂಟು

ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ, ಇದು ಎಂತಹ ಆಸ್‌ಬೆಸ್ಟಸ್ ಶೀಟ್ ಸ್ವಾಮಿ ನನಗಂತೂ ಗೊತ್ತಿಲ್ಲ ; ಗೋಲ್ಡ್ ಪ್ಲೇಟೆಡ್ ಇರಬೇಕು ! ನಾವು ಪ್ರತಿಯೊಂದು ಹಂತದಲ್ಲೂ ಏನೊಂದು ವಿಕೇಂದ್ರೀಕರಣವೆಂದು ಹೇಳುತ್ತಿದ್ದೇವೆ, it is decentralisation of corruption ; decentralisation of high handedness ; decentralisation of self-promotion. ಈ ಒಂದು ಕೆಲಸ ಇವತ್ತು ಆಗುತ್ತಿದೆ. ಇದರ ಜೊತೆಗೆ ಬಹಳ ಮುಖ್ಯವಾದುದು ಎಂದರೆ ವರ್ತೂರು ವಿಧಾನಸಭಾ ಕ್ಷೇತ್ರದಲ್ಲಿ ಕೃಷ್ಣರಾಜಪುರ ಮತ್ತು ಮಹದೇವಪುರ ಇವೆರಡು ಸಿಎಂಸಿಗಳು ಬರುತ್ತವೆ. ನಮ್ಮ ಸಚಿವರು ಸಚಿವ ಸಂಪುಟದ ಸಭೆಗೆ ಎಷ್ಟು ರೆಗ್ಯುಲರ್ ಆಗಿ ಬರುತ್ತಾರೋ ನನಗೆ ಗೊತ್ತಿಲ್ಲ, ಆದರೆ ಈ ಎರಡು ಸಿಎಂಸಿಗಳ ಸಭೆಗಳಿಗೆ ರೆಗ್ಯುಲರ್ ಆಗಿ ಹೋಗಿದ್ದಾರೆ, ನಿಜವಾಗಿ, ಡಿಫ್ಯಾಕ್ಟೋ ಪ್ರೆಸಿಡೆಂಟ್ ಎಂದು ನೋಡಬೇಕೆಂದರೆ ಆ ನಗರಸಭೆಯ ಮೀಟಿಂಗ್‌ನಲ್ಲಿ ನೋಡಬೇಕು, ಅವರ ಅಧೀನದಲ್ಲೇ ಅವರ ಮಾರ್ಗದರ್ಶನದಲ್ಲೇ ಕೆಲಸಗಳೆಲ್ಲಾ ಆಗಿದೆ. ಕರ್ನಾಟಕ ಮುನಿಸಿಪಾಲಿಟಿ ಆಕ್ಟ್ ಸೆಕ್ಷನ್ 308 ಪ್ರಕಾರ ಯಾರೇ ಚುನಾಯಿತ ಸದಸ್ಯ ಈ ರೀತಿ ರೆಸಲ್ಯೂಷನ್ ಮುಖಾಂತರ ಅನ್ಯಾಯಗಳನ್ನು ಮಾಡಿದ್ದರೆ he is a party to that crime ; he is a party to that offence. ಅವರ ಮೇಲೆ ಕ್ರಮ ತೆಗೆದುಕೊಂಡು ಹಣವನ್ನು ವಸೂಲ್ಮಾಡಬೇಕೆಂದು ಸೆಕ್ಷನ್ 308 ಹೇಳುತ್ತದೆ. ಅವರಿಗೆ ಈ ಪ್ರಕರಣಗಳೆಲ್ಲಾ ಗೊತ್ತಾಗಿದ್ದರೆ ಇನ್ನೂ ಸ್ಟ್ರಾಂಗ್ ಆಗಿ ಇರುತ್ತಿತ್ತು. ಇವತ್ತು ಒಟ್ಟು ಪ್ರಕರಣದಲ್ಲಿ ಒಬ್ಬರು ಆ ಕ್ಷೇತ್ರದ ಉಸ್ತುವಾರಿಯನ್ನು ಹಿಡಿದಿರುವ ರಾಜ್ಯ ಸರ್ಕಾರದ ಘನವೆತ್ತ ಮಂತ್ರಿ, ಜಿಲ್ಲಾ ಮಂತ್ರಿ ; ನಾವೊಬ್ಬರು ಎಂಎಲ್‌ಎಗಳೇ ಹೇಳಿದರೆ ಒಂದೊಂದು ಸಲ ಅಧಿಕಾರಿಗಳು ಎದ್ದೋ ಬಿದ್ದೋ ಮಾಡುತ್ತಾರೆ. ಇನ್ನು ಉಸ್ತುವಾರಿ ಸಚಿವರು ಅದರಲ್ಲೂ ಪವರ್‌ಫುಲ್ ಉಸ್ತುವಾರಿ ಸಚಿವರು ಹೇಳಿದಾಗ ಆ ಬಡಪಾಯಿ ಅಧಿಕಾರಿಗಳ ಸ್ಥಿತಿ ಏನಾಗಬೇಕು ? ಇದು 2002ನೇ ಇಸವಿಯಲ್ಲಿ ಗೊತ್ತಾದರೂ ಕೂಡ, ಕೆಎಎಸ್, ಐಎಎಸ್ ಅಧಿಕಾರಿಗಳು, ಚುನಾಯಿತ ಪ್ರತಿನಿಧಿಗಳು, ಇವರೆಲ್ಲಾ ಇದರಲ್ಲಿ ಇದ್ದಾರೆ. ಒಂದು ಅನ್‌ಹೋಲಿ ಅಲೈಯೆನ್ಸ್ ಎನ್ನುವುದನ್ನು ನೋಡಬೇಕೆಂದಿದ್ದರೆ ಇಲ್ಲಿ ನೋಡಬೇಕು, ಇದು ಅನೈತಿಕ ಮೈತ್ರಿ ಕೂಟ. ರಾಷ್ಟ್ರಕವಿ ಕುವೆಂಪುರವರ ಒಂದು ಗೀತೆ ಇದೆ ; ಕಾಲಿಲ್ಲದ ಅಶ್ವ ಗೂನಾದರೇನಂತೆ, ನಾನಿಲ್ಲದ ವಿಶ್ವ ಏನಾದರೇನಂತೆ. ನಾನು ಇಲ್ಲದ ಕಾರ್ಪೋರೇಷನ್ ಹಾಳಾಗಿ ಹೋಗಲಿ, ಅದೇ ಒಂದು ಮನೋಭಾವದಿಂದ ಈ ಒಂದು ಅಪವಿತ್ರ ಮೈತ್ರಿ ಕೂಟ ಎರಡು ನಗರಸಭೆಗಳ ಮೂಲಕ ಇಡೀ ರಾಜ್ಯದ ಸ್ವಾಯತ್ತ ಸಂಸ್ಥೆಗಳಿಗೆ, ಸ್ಥಳೀಯ ಸಂಸ್ಥೆಗಳಿಗೆ ಬಹಳ ಕೆಟ್ಟ ಹೆಸರನ್ನು ತಂದಿವೆ, ರಾಜ್ಯದ ಬೊಕ್ಕಸಕ್ಕೆ ಹಾಡಹಗಲಿನಲ್ಲಿ ಕನ್ನ ಹಾಕಿವೆ, ಅದಕ್ಕೆ ಪ್ರೋತ್ಸಾಹ ಸಿಕ್ಕಿದೆ, ನಿಜವಾಗಿ ನಗರಸಭೆಗಳಿಗೆ ಬರಬೇಕಾದ ಆದಾಯದ ವಂಚನೆಯಾಗಿದೆ, ಜೊತೆಗೆ ಆ ನಗರಸಭೆಗಳಿಗೆ ಯಾವುದೇ ಕಾನೂನು ನಿಯಮಗಳಿಲ್ಲದೆ ಯಾರಿಗೆ ಅಲ್ಲಿ ಕೆಲಸ ಕೊಡಬೇಕೆಂದು ಪೂರ್ವನಿರ್ಧಾರ ಮಾಡಿ ಎಲ್ಲವನ್ನೂ ತನ್ನ ಕುಟುಂಬದ ಸದಸ್ಯರಿಗೆ ಕೊಟ್ಟು ಪ್ರಜಾಪ್ರಭುತ್ವದ ವ್ಯಾಖ್ಯಾನವನ್ನೇ ಇವತ್ತು ಹಾಳುಮಾಡಿದ್ದಾರೆ. ಈ ಎಲ್ಲಾ ದೃಷ್ಟಿಯಿಂದ ಇಡೀ ದೇಶದ ಗಮನವನ್ನು ಸೆಳೆದಿರುವ ಈ ಗ್ರೇಟ್ ಟ್ರೆಜರಿ ರ‍್ಯಾಬರಿ ಪ್ರಕರಣ ಏನಿದೆ, ಅದರಲ್ಲಿ ಬಹಳ ಮುಖ್ಯ ಪಾತ್ರ ವಹಿಸಿರುವ ನಾಯಕ ಯಾರಿದ್ದಾರೆ ಅವರು ಆ ಎರಡು ನಗರಸಭೆಯ ಪದನಿಮಿತ್ತ ಸದಸ್ಯರು, ಆ ಕ್ಷೇತ್ರದ ವಿಧಾನಸಭಾ ಸದಸ್ಯರು, ಜೊತೆಗೆ ಮೊನ್ನೆ ಪಶುಸಂಗೋಪನೆಯಲ್ಲಿದ್ದರು, ಈಗ

ಸಮಾಜಕಲ್ಯಾಣ ಖಾತೆಯನ್ನು ವಹಿಸಿಕೊಂಡಿದ್ದಾರೆ, ಅವರು ಇನ್ಯಾವುದೋ ರಕ್ಷಣೆಯನ್ನು ತೆಗೆದುಕೊಳ್ಳಬಾರದು, ನಾನು ಬಹಳ ಬಲಹೀನ, ಆ ವರ್ಗದಿಂದ ಬಂದಿದ್ದೇನೆ ಅದಕ್ಕೋಸ್ಕರ ನನ್ನ ಮೇಲೆ ಈ ರೀತಿ ಮಾಡುತ್ತಾರೆಂದು ಭಾವಿಸುವುದಾದರೆ, ಖಂಡಿತಾ ಇಲ್ಲ. ಸಾಮಾಜಿಕ ನ್ಯಾಯ ಆ ಕಾನ್ಸೆಪ್ಟ್ ನಮಗೂ ಕೂಡ ಇದೆ, ಆ ಬಗ್ಗೆ ನಮ್ಮದೇ ಆದ ಕಳಕಳಿಯಲ್ಲಿ ನಾವು ಕೆಲಸ ಮಾಡುತ್ತಿದ್ದೇವೆ. ಸರ್ಕಾರ ಅವರಿಗೆ ಮನ ಮುಟ್ಟುವಂತೆ, ನೋಡಪ್ಪ ನಿನ್ನದು ಜಾಸ್ತಿಯಾಯಿತು, ಬೇರೆಯವರಿಗಾದರೂ ಟರ್ನ್ ಕೊಡು, ಬೇರೆಯವರಿಗೂ ಅವಕಾಶವಿರಲಿ ಎಂದು ಹೇಳಿ ಅವರಿಂದ ಸಚಿವ ಸಂಪುಟಕ್ಕೆ ರಾಜೀನಾಮೆಯನ್ನು ತೆಗೆದುಕೊಳ್ಳಬೇಕು. ನಾನು ರಾಜೀನಾಮೆ ಕೊಡುವುದಿಲ್ಲವೆಂದರೆ, ಸಮಾಜದ ನೈತಿಕ ಸ್ಥೈರ್ಯ ಉಳಿಸುವುದಕ್ಕೋಸ್ಕರ, ರಾಜ್ಯ ಸಚಿವಸಂಪುಟದ ಬಗ್ಗೆ ಒಳ್ಳೆಯ ಭಾವನೆ ಉಳಿಯುವುದಕೋಸ್ಕರ, ಯಾರು ಇಷ್ಟೆಲ್ಲಾ ಮಾಡಿರುವ ಆ ವರ್ತೂರು ವಿಧಾನಸಭೆಯ ಮಾಲೀಕರಿದ್ದಾರೆ ಅವರನ್ನು ಕೂಡಲೇ ಸಚಿವ ಸಂಪುಟದಿಂದ ತೆಗೆದುಹಾಕಬೇಕು. ಮೂರನೆಯದಾಗಿ, ನಮ್ಮ ಆಗ್ರಹವೇನೆಂದರೆ, ಇದರಲ್ಲಿ ಇರುವವರೆಲ್ಲಾ ಬಹಳ ದೊಡ್ಡವರು ಇದ್ದಾರೆ, ಇವರಿರುವಾಗ ಚಿಕ್ಕವರು ತನಿಖೆ ಮಾಡುವುದು ಕಷ್ಟವಾಗುತ್ತದೆ. ಅದಕೋಸ್ಕರ ಈ ಒಟ್ಟು ಪ್ರಕರಣವನ್ನು ಸಿಬಿಐಗೆ ವಹಿಸಿಕೊಟ್ಟು ಅವರಿಂದ ನಿಷ್ಪಕ್ಷಪಾತವಾದ ಒಂದು ವಿಚಾರಣೆಯಾಗುವಂತೆ ವ್ಯವಸ್ಥೆ ಮಾಡಿ ರಾಜ್ಯ ಹಾಗೂ ರಾಷ್ಟ್ರಕ್ಕೆ ಒಳ್ಳೆಯ ಸಂದೇಶ ಹೋಗಬೇಕು, Number of Chief Minister of India will not tolerate such things. ಇಂತಹ ಪ್ರಸಂಗಗಳನ್ನು ಅವರು ತಾಳ್ಮೆಯಿಂದ ನೋಡುವುದಿಲ್ಲ, ಒಂದು ರೀತಿ ಎನ್‌ಕರೇಜ್ ಮಾಡುವುದಿಲ್ಲ ಅದಕ್ಕೆ ಎನ್ನುವ ಭಾವನೆ ಬರುವ ರೀತಿಯಲ್ಲಿ ಮಾನ್ಯ ಎಸ್.ಎಂ. ಕೃಷ್ಣರವರು ಅಗತ್ಯ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಆಗ್ರಹಿಸುತ್ತೇನೆ. ಈ ರೀತಿಯದನ್ನು ಮಾಡಬೇಕು ಎಂದು ಇದರ ರುಚಿ ಹಿಡಿದಿರುವ ಬೇರೆಯವರಿಗೆ ಭಯವೂ ಆಗಬೇಕು, ನಾಚಿಕೆಯೂ ಆಗಬೇಕು. ಈ ದಿಕ್ಕಿನಲ್ಲಿ ಈ ಕ್ರಮ ಬಹಳ ಅಗತ್ಯವಾದುದು. ನಾಡಿನ ದೃಷ್ಟಿಯಿಂದ ಅಗತ್ಯ ಎಂದು ಹೇಳಿ, ಈ ಪ್ರಸಂಗದಲ್ಲಿ ಯಾರ್ಯಾರು ಭಾಗಿಯಾಗಿದ್ದಾರೆ ಅವರೆಲ್ಲರ ಮೇಲೆ ನಿರ್ದಾಕ್ಷಿಣ್ಯವಾಗಿ ಕ್ರಮ ತೆಗೆದುಕೊಳ್ಳಬೇಕು ಎಂದು ಆಗ್ರಹಿಸುತ್ತಾ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಆರ್. ರೋಷನ್‌ಬೇಗ್ :- ತಾವು ಹೇಳುತ್ತಿರುವುದು ಈ ಎರಡು ಸಿ.ಎಂ.ಸಿಗಳ ಬಗ್ಗೆ ಮಾತ್ರವೇ ? ಬೇರೆ ಸಿ.ಎಂ.ಸಿಗಳ ಬಗ್ಗೆ ತಾವು ಮಾತನಾಡಿಲ್ಲ. ಬೇರೆ ಸಿ.ಎಂ.ಸಿಗಳು ಬಿ.ಜೆ.ಪಿ ಕಂಟ್ರೋಲ್‌ನಲ್ಲಿ ಇವೆ.

ಶ್ರೀ ಎ. ಕೃಷ್ಣಪ್ಪ :- ನೈತಿಕ ಬಲ ಜಾಸ್ತಿ ಇರುವವರು ನೀವು. ಬೇರೆ ಸಿ.ಎಂ.ಸಿ ಗಳ ಬಗ್ಗೆಯೂ ಮಾತನಾಡಿ.

ಶ್ರೀ ಎಸ್. ಸುರೇಶ್ ಕುಮಾರ್ :- ಬಹಳ ಅಪರೂಪಕ್ಕೆ ಮಾನ್ಯ ರೋಷನ್‌ಬೇಗ್ ರವರು ನನ್ನ ಸಹಾಯಕ್ಕೆ ಬಂದಿದ್ದಾರೆ. ಅವರು ಹಿಂದೆ ಪ್ರವಾಸೋದ್ಯಮ ಖಾತೆಯಲ್ಲಿದ್ದಾಗ ಸಹಾಯಕ್ಕೆ ಬರುತ್ತಿರಲಿಲ್ಲ. ಈ ಎಲ್ಲಾ ಸಿ.ಎಂ.ಸಿಗಳಲ್ಲಿ ಯಾರ್ಯಾರು ಸ್ಟಾಂಪ್ ಹಗರಣದಲ್ಲಿ ಭಾಗಿಯಾಗಿದ್ದಾರೆ, ಆ ಅಧಿಕಾರಿಗಳು, ಚುನಾಯಿತ ಪ್ರತಿನಿಧಿಗಳು, ಅಧ್ಯಕ್ಷರು ಅವರೆಲ್ಲರ ಮೇಲೂ ಕ್ರಮ ತೆಗೆದುಕೊಳ್ಳಿ. ಆದರೆ ಅವರಿಗೆಲ್ಲಾ shining example ಎಂದು ಈ ಚೀಫ್ ಹೀರೋ ಮೇಲೆ ಕ್ರಮ ತೆಗೆದುಕೊಳ್ಳಿ.

ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) :- ಸನ್ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯದಲ್ಲಿ ಇತ್ತೀಚಿನ ವರ್ಷಗಳಲ್ಲಿ ನಡೆದಿರತಕ್ಕಂಥ ಈ ಪ್ರಕರಣದ ಬಗ್ಗೆ ನಿಲುವಳಿ ಸೂಚನೆ ಮೂಲಕ ಪ್ರಸ್ತಾಪ ಮಾಡಬೇಕು ಎಂದು ಕಳೆದ ಮೂರ್‍ನಾಲ್ಕು ದಿವಸಗಳಿಂದ ಪ್ರಯತ್ನವನ್ನು ಮಾಡಿದೆವು. ಈ ವಿಚಾರದಲ್ಲಿ ತಮ್ಮ ಮನಸ್ಸನ್ನು ಒಲಿಸಿಕೊಳ್ಳಲೂ ನಾವು ಪ್ರಯತ್ನ ಮಾಡಿದೆವು. ಮಾನ್ಯ ಮುಖ್ಯಮಂತ್ರಿಗಳು ಇದೇ ವಿಚಾರದಲ್ಲಿ ವಿಧಾನ ಪರಿಷತ್ತಿನಲ್ಲಿ ಮಾತನಾಡುವಾಗ, ನಾನು ಚರ್ಚೆಗೆ ತಯಾರಿದ್ದೇನೆ, ಸವಿಸ್ತಾರವಾದ ಚರ್ಚೆಯಾಗಲಿ ಎನ್ನುವ ಮಾತನ್ನು ಹೇಳಿದ್ದಾರೆ. ಅದರ ಬಗ್ಗೆ ನಾನು ಸಂತೋಷವನ್ನು ವ್ಯಕ್ತ ಮಾಡುತ್ತೇನೆ. ಆದರ ಜೊತೆಗೆ, ಮಾನ್ಯ ಲೋಕಾಯುಕ್ತರಿಗೆ ನಾನು ಈ ಸಂದರ್ಭದಲ್ಲಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಆಗಾಗ್ಗೆ ಕಳೆದ ಎರಡು ವರ್ಷಗಳಿಂದ ಲೋಕಾಯುಕ್ತಕ್ಕೆ ಹೆಚ್ಚಿನ ಶಕ್ತಿಯನ್ನು ಕೊಡುತ್ತೇನೆ ಎನ್ನುವ ಮಾತನ್ನು ಹೇಳಿಕೊಂಡು ಬಂದಿದ್ದಾರೆ. ಆ ಶಕ್ತಿಯನ್ನು ಕೊಡುವುದರ ಬಗ್ಗೆ ಅವರು ಏನು ಮಾಡಿದ್ದಾರೆ ಅಥವಾ ಏನು ಮಾಡಬೇಕು ಎಂದು ಇದ್ದಾರೆ ಎನ್ನುವುದನ್ನೂ ಸಹ ಅವರು ಉತ್ತರವನ್ನು ಕೊಡುವ ಸಂದರ್ಭದಲ್ಲಿ ತಿಳಿಸಬೇಕು ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಲು ಬಯಸುತ್ತೇನೆ. ಈ ಸದನದ ಸದಸ್ಯರಾದ ಮಾನ್ಯ ಸುರೇಶ್ ಕುಮಾರ್‌ರವರು ಸಾಕ್ಷಿ, ಆಧಾರಗಳ ಸಮೇತ ಬೆಂಗಳೂರು ನಗರ ಜಿಲ್ಲೆಯ ಸಿ.ಎಂ.ಸಿ, ಟಿ.ಎಂ.ಸಿಗಳಲ್ಲಿ ನಡೆದಿರತಕ್ಕಂಥ ಅವ್ಯವಹಾರಗಳ ಬಗ್ಗೆ ನಿಮ್ಮ ಮನಸ್ಸು ಮತ್ತು ಮುಖ್ಯಮಂತ್ರಿಗಳ ಮನಸ್ಸು ಖಚಿತಪಡಿಸಿಕೊಳ್ಳುವ ರೀತಿಯಲ್ಲಿ ಮಾತನಾಡಿದ್ದಾರೆ. ಎಲ್ಲಾ ವಿಚಾರಗಳನ್ನು ಸವಿಸ್ತಾರವಾಗಿ ಸದನದ ಮತ್ತು ರಾಜ್ಯದ ಗಮನಕ್ಕೆ ತಂದಿದ್ದಾರೆ. ಬಹಳ ಮುಖ್ಯವಾಗಿ, ನಮ್ಮ ಸಂಸದೀಯ ವ್ಯವಹಾರಗಳ ಮಂತ್ರಿಗಳು ಆಗಾಗ್ಗೆ ತಕರಾರುಗಳನ್ನು ತೆಗೆಯುತ್ತಿರುತ್ತಾರೆ.ಜ್ಯುಡಿಷಿಯಲ್ ಮ್ಯಾಟರ್ಸ್ ಬಗ್ಗೆ ಇಲ್ಲಿ ಡಿಸ್ಕಸ್ ಆಗಬಾರದು ಎಂದು ಹೇಳುತ್ತಿರುತ್ತಾರೆ. ಆ ಮಾತನ್ನು ನಾನೂ ಸಹ ಒಪ್ಪುತ್ತೇನೆ. ನ್ಯಾಯಾಂಗ ತನಿಖೆಯಲ್ಲಿರುವ ವಿಚಾರಗಳು, ನ್ಯಾಯಾಲಯಗಳ ಮುಂದೆ ಇರತಕ್ಕಂಥ ವಿಚಾರಗಳು, ವಿಚಾರಣಾ ಹಂತದಲ್ಲಿರತಕ್ಕಂಥ ವಿಚಾರಗಳೆಲ್ಲವನ್ನೂ ನಾವು ಇಲ್ಲಿ ಚರ್ಚೆ ಮಾಡಬಾರದು. ಆದರೆ ಈ ವಿಚಾರಗಳು ನಡೆಯತಕ್ಕಂಥ ಸಂದರ್ಭಗಳಲ್ಲಿ, ತಪ್ಪಿತಸ್ಥರು ಸರ್ಕಾರವನ್ನು ನಡೆಸತಕ್ಕಂಥ ಸ್ಥಾನಗಳಲ್ಲಿದ್ದರೆ, ಅವರು ಆ ಸ್ಥಾನದಲ್ಲಿ ಮುಂದುವರಿಯಬಹುದೇ, ಈ ವಿಚಾರದಲ್ಲಿ ಈ ರಾಜ್ಯದ ಇತಿಹಾಸವೇನು ಎನ್ನುವುದನ್ನು ನಾವು ಮನಗಾಣಬೇಕಾಗಿದೆ. ಇದು ಬಹಳ ಮುಖ್ಯವಾಗಿರತಕ್ಕಂಥ ಅಂಶ. ಹಿರಿಯ ಸದಸ್ಯರಾಗಿರತಕ್ಕಂಥ ಶ್ರೀಮಾನ್ ಬಿ.ಬಿ. ಶಿವಪ್ಪನವರು ಹಿಂದೆ ಮಂತ್ರಿಗಳಾಗಿದ್ದಂಥ ಮಾನ್ಯ ಸೋಮಶೇಖರ್‌ರವರು, ಶ್ರೀ ಜೀವಿಜಯರವರು ಮತ್ತು ಶ್ರೀ ದೇವೇಗೌಡರು ಈ ಮೂರು ಜನಗಳ ಮೇಲೆ ತನಿಖೆಯಾಗಬೇಕು ಎನ್ನುವ ಪತ್ರವನ್ನು ಬರೆದರು. ಈಗ ಅವರು ಈ ಸದನದಲ್ಲಿ ಇದ್ದಾರೆ. ತಕ್ಷಣ, ಅವತ್ತು ಮುಖ್ಯಮಂತ್ರಿಗಳಾಗಿದ್ದಂಥ ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಶ್ರೀ ಸೋಮಶೇಖರ್‌ರವರು, ಶ್ರೀ ವಿಜಯಾರವರು ಮತ್ತು ಶ್ರೀ ದೇವೇಗೌಡರು ರಾಜೀನಾಮೆಯನ್ನು ಕೊಟ್ಟರು. ನಂತರ, ಮಾನ್ಯ ಸೋಮಸೇಖರ್‌ರವರ ಮೇಲೆ, ಸುಮಾರು 30 ವರ್ಷಗಳ ಹಿಂದೆ ಅವರು ವಿದ್ಯಾರ್ಥಿ ದಿಸೆಯಲ್ಲಿದ್ದಾಗ ಒಂದು ಹಗರಣದಲ್ಲಿ ಭಾಗಿಯಾಗಿದ್ದಾರೆ ಎನ್ನುವ ಆಪಾದನೆ ಬಂದಂಥ ಸನ್ನಿವೇಶದಲ್ಲಿ ಅವರು ಸ್ವಯಂಪ್ರೇರಿತರಾಗಿ ರಾಜೀನಾಮೆಯನ್ನು ಕೊಟ್ಟರು. ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ, ಅಧಿಕಾರದಲ್ಲಿರತಕ್ಕಂಥ ಜನಗಳ

ಬಗ್ಗೆ ನೀಡಲ್ ಆಫ್ ಸಸ್ಪಿಷನ್ ಬಂದ ತಕ್ಷಣ ಅದನ್ನು ನಾವು ಕ್ಲಿಯರ್ ಮಾಡಿಕೊಳ್ಳತಕ್ಕಂಥಾದ್ದು ಒಂದು ಭಾಗ ಆಗಬೇಕು. ಲೋಕಾಯುಕ್ತರವರು ಇವತ್ತು ಮಾಡಿರತಕ್ಕಂಥ ತನಿಖೆಯ ವಿವರಗಳು ಮತ್ತು ಸಿ.ಎಂ.ಸಿ ಹಾಗೂ ಟಿ.ಎಂ.ಸಿಗಳಿಗೆ ಲೋಕಾಯುಕ್ತ ಪೊಲೀಸ್ ಆಫೀಸರ್‌ಗಳು ಹೋದಂಥ ಸನ್ನಿವೇಶದಲ್ಲಿ ರೆಕಾರ್ಡ್‌ಗಳನ್ನು ಸುಟ್ಟು ಹಾಕಿರತಕ್ಕಂಥಾದ್ದು ನಮ್ಮ ಗಮನದಲ್ಲಿದೆ. ಇಂಥ ಸನ್ನಿವೇಶದಲ್ಲಿ ಮುಖ್ಯಮಂತ್ರಿಗಳು ಏನು ಮಾಡಬೇಕು ಎನ್ನುವುದಕ್ಕೆ ನಾನು ನಂತರ ಬರುತ್ತೇನೆ. ಇದಕ್ಕೂ ಮುನ್ನ ಒಂದು ಅಂಶವನ್ನು ಹೇಳುತ್ತೇನೆ. ರಿಜಿಸ್ಟ್ರೇಷನ್ ಟ್ರ್ಯಾನ್‌ಸ್ಯಾಕ್ಷನ್ ಆ್ಯಕ್ಟ್ ಪ್ರಕಾರ ಶೇ. 8 ರಿಂದ 10ರಷ್ಟು ನಾರ್ಮಲ್ ಸ್ಟಾಂಪ್ ಡ್ಯೂಟಿಯನ್ನು 1957 ರಿಂದ ಕಲೆಕ್ಟ್ ಮಾಡಿಕೊಂಡು ಬಂದಿದ್ದೇವೆ. ಅಡಿಷನಲ್ ಸ್ಟಾಂಪ್ ಡ್ಯೂಟಿ ಆನ್ ಟ್ರಾನ್ಸ್‌ಫರ್ ಆಫ್ ಇಮ್ಮೂವಬಲ್ ಪ್ರಾಪರ್ಟೀಸ್ ಎಂದು ಶೇ. 2ರಷ್ಟು ಕಲೆಕ್ಟ್ ಮಾಡಿಕೊಂಡು ಬಂದಿದ್ದೇವೆ. 1994ನೇ ಇಸವಿಯಲ್ಲಿ ಮಾನ್ಯ ವೀರಪ್ಪ ಮೊಯ್ಲಿಯವರು ಮುಖ್ಯ ಮಂತ್ರಿಗಳಾಗಿದ್ದಾಗ, ಸ್ಟಾಂಪ್ ಡ್ಯೂಟಿ ಮೇಲೆ ಅಡಿಷನಲ್ ಆಗಿ ಸ್ಟಾಂಪ್ ಡ್ಯೂಟಿ ಸರ್‌ಚಾರ್ಜ್ ಅನ್ನು ಶೇ. 1 ರಿಂದ 2ಕ್ಕೆ ಏರಿಸಿದರು. ಆವತ್ತಿನಿಂದಲೂ ರಿಜಿಸ್ಟ್ರೇಷನ್ ಡಿಪಾರ್ಟ್‌ಮೆಂಟ್ ಡಿಸ್ಟ್ರಿಕ್ಟ್ ರಿಜಿಸ್ಟ್ರಾರ್‌ಗೆ ಶೇ. 1ರಷ್ಟು ಕೊಡಬೇಕು ಎಂದು ಆಗಿದ್ದು, ಕೊಡುತ್ತಾ ಬಂದಿದ್ದಾರೆ. ಆದರೆ ಸಬ್-ರಿಜಿಸ್ಟ್ರಾರ್‌ಗಳು ಶೇ. 3ರಷ್ಟು ಕಲೆಕ್ಟ್ ಮಾಡುತ್ತಿದ್ದರು. 1995-96ನೇ ಇಸವಿಯಲ್ಲಿ ನೋಟಿಫೈಡ್ ಏರಿಯಾಗಳಲ್ಲಿ ಕೆಲವನ್ನು ಕಾರ್ಪೋರೇಷನ್ನಿಗೆ ಸೇರಿಸಿದೆವು, ಕೆಲವು ಸಿ.ಎಂ.ಸಿಗಳು ಮತ್ತು ಟಿ.ಎಂ.ಸಿಗಳಾಗಿ ಕನ್‌ವರ್ಟ್ ಆದವು. ನಮ್ಮ ಸರ್ಕಾರವಿದ್ದಂಥ ಆ ಸಂದರ್ಭದಲ್ಲಿ ಅರ್ಬನ್ ಡೆವೆಲಪ್‌ಮೆಂಟ್ ಡಿಪಾರ್ಟ್‌ಮೆಂಟಿಗೆ ರಿಸೋರ್ಸಸ್ ಹೆಚ್ಚು ಮಾಡಬೇಕು ಎನ್ನುವ ದೃಷ್ಟಿಯಿಂದ ಶೇ. 2ರಷ್ಟು ಸರ್‌ಚಾರ್ಜನ್ನು ಕಲೆಕ್ಟ್ ಮಾಡಬೇಕು ಎಂದು ಆಗಿರತಕ್ಕಂಥಾದ್ದು ನಮ್ಮೆಲ್ಲರಿಗೂ ಗೊತ್ತಿರುವ ವಿಚಾರ. ಸರ್‌ಚಾರ್ಜ್ ಅನ್ನು ರಿಲೀಸ್ ಮಾಡಿರತಕ್ಕಂಥಾದ್ದು ಹೊಸದೇನೂ ಅಲ್ಲ. ನಾನು ಬಹಳ ಹಿಂದಿನ ವಿವರಗಳಿಗೆ ಹೋಗುವುದಿಲ್ಲ. ಇದನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ಏಕೆಂದರೆ ಮುಖ್ಯಮಂತ್ರಿಗಳು ಹಣಕಾಸಿನ ಸಚಿವರೂ ಸಹ ಆಗಿದ್ದಾರೆ. ಹಣಕಾಸಿನ ವಿಚಾರದಲ್ಲಿ ತಾವು ಮೂರು ದಿವಸಗಳ ಹಿಂದೆ ಈ ಸದನದಲ್ಲಿ ನಾನು ಟ್ರೆ ಬ್ಯಾನ್ ಮಾಡಿಲ್ಲ ಎನ್ನುವ ಮಾತನ್ನು ಹೇಳಿದ್ದೀರಿ. ನಮ್ಮ ರಾಜ್ಯದ ಸುಮಾರು 10-15 ಸಾವಿರ ಜನ ಕಾಂಟ್ರಾಕ್ಟರ್‌ಗಳು, ನಮಗೆ 1300 ಕೋಟಿ ರೂಪಾಯಿಗಳಷ್ಟು ಹಣ ಬರಬೇಕು, ಸುಮಾರು ಒಂದೂವರೆ, ಎರಡು ವರ್ಷಗಳಿಂದ ನಾವು ಕೆಲಸ ಮಾಡಿರತಕ್ಕಂಥಾದ್ದಕ್ಕೆ ಬಾಕಿ ಹಣ ಬರಬೇಕು, ನಾವೆಲ್ಲಾ ಸಾಲ ತೆಗೆದುಕೊಂಡು ಕೆಲಸ ಮಾಡಿದ್ದೇವೆ, ಅದಕ್ಕೆ ಬಡ್ಡಿ ಕಟ್ಟುತ್ತಿದ್ದೇವೆ, ನೇಣು ಹಾಕಿಕೊಳ್ಳುವ ಸ್ಥಿತಿಗೆ ಬಂದಿದ್ದೇವೆ, ಆದ್ದರಿಂದ ದುಡ್ಡು ಕೊಡಿ, ಎಂದು ಮೊದಲನೇ ಸಾರಿಗೆ ಕಾಂಟ್ರಾಕ್ಟರ್‌ಗಳು ಬೀದಿಗೆ ಇಳಿದಿದ್ದಾರೆ. ಹಿಂದೆ ಯಾವತ್ತೂ ಕಾಂಟ್ರಾಕ್ಟ್‌ದಾರರು ಈ ರೀತಿ ಬೀದಿಗೆ ಇಳಿದಿರಲಿಲ್ಲ. ಆವತ್ತು ಅದಕ್ಕೆ ಉತ್ತರ ಕೊಡುವಾಗ ತಾವು, ನಾನು ಟ್ರೆಜರಿ ಬ್ಯಾನ್ ಮಾಡಿಲ್ಲ ಎನ್ನತಕ್ಕಂಥ ಮಾತನ್ನು ಹೇಳಿದಿರಿ. ಈ ಪ್ರಕರಣವನ್ನು ನೋಡಿದ ಮೇಲೆ, ನೀವು ಟ್ರೆಜರಿ ಬ್ಯಾನ್ ಮಾಡಿಲ್ಲ ಎಂದು ನನಗೆ ಅನ್ನಿಸುತ್ತಿದೆ. ಟ್ರೆಜರಿ ಬ್ಯಾನ್ ಮಾಡಿಲ್ಲ ಎಂದು ನೀವು ಹೇಳಿದ ಸ್ಟೇಟ್‌ಮೆಂಟಿನ ಬಗ್ಗೆ ಈಗ ನನಗೆ ಕನ್‌ವಿನ್ಸ್ ಆಯಿತು. ಅಡಿಷನಲ್ ಸ್ಟಾಂಪ್ ಡ್ಯೂಟಿ ಮೇಲೆ ಎಕ್ಸೆಸ್ ಪೇಮೆಂಟ್ ಸಿ.ಎಂ.ಸಿ, ಟಿ.ಎಂ.ಸಿಗಳಿಗೆ ರಿಲೀಸ್ ಮಾಡಿರತಕ್ಕಂಥಾದ್ದನ್ನು 1994 ರಿಂದ ಹೇಳುತ್ತೇನೆ.

ಶೇ. 2ರಷ್ಟು ಮಾಡಿ ಸ್ಟಾಂಪ್ಸ್ ಅಂಡ್ ರಿಜಿಸ್ಟ್ರೇಷನ್ ರಿಜಿಸ್ಟ್ರಾರ್‌ರವರು ಡೈರೆಕ್ಷನ್ ಕೊಟ್ಟ ಮೇಲೆ ರಿಲೀಸ್ ಆಗಿರತಕ್ಕಂಥ ಹಣದ ಬಗ್ಗೆ ಹೇಳುತ್ತೇನೆ. 1994-95ರಲ್ಲಿ ಕೃಷ್ಣರಾಜಪುರ, ಮಹದೇವಪುರ, ಬೊಮ್ಮನಹಳ್ಳಿ, ಪಟ್ಟಣಗೆರೆ, ದಾಸರಹಳ್ಳಿ, ಬ್ಯಾಟರಾಯನಪುರ, ಯಲಹಂಕ, ಕೆಂಗೇರಿ ಈ ಎಲ್ಲಾ ನಗರಸಭೆಗಳಿಗೆ ಡ್ಯೂ ಇದ್ದದ್ದು 6 ಕೋಟಿ ರೂಪಾಯಿಗಳು. ರಿಲೀಸ್ ಮಾಡಿರತಕ್ಕಂಥಾದ್ದು ಕೇವಲ 1 ಕೋಟಿ 25 ಲಕ್ಷ ರೂಪಾಯಿಗಳು. ಆಗ ನಮ್ಮ ಸರ್ಕಾರ ಅಧಿಕಾರದಲ್ಲಿ ಇತ್ತು. 1995-96ರಲ್ಲಿ ಅವರಿಗೆ ಡ್ಯೂ ಇದ್ದದ್ದು 7 ಕೋಟಿ ರೂಪಾಯಿಗಳು ; ರಿಲೀಸ್ ಆಗಿರತಕ್ಕಂಥಾದ್ದು 4 ಕೋಟಿ ರೂಪಾಯಿಗಳು. 1996-97ರಲ್ಲಿ ಅವರಿಗೆ ಡ್ಯೂ ಇದ್ದದ್ದು 5 ಕೋಟಿ ರೂಪಾಯಿಗಳು ; ರಿಲೀಸ್ ಮಾಡಿರತಕ್ಕಂಥಾದ್ದು 3 ಕೋಟಿ ರೂಪಾಯಿಗಳು. 1997-98ರಲ್ಲಿ ಅವರಿಗೆ ಡ್ಯೂ ಇದ್ದದ್ದು 12 ಕೋಟಿ ರೂಪಾಯಿಗಳು ; ರಿಲೀಸ್ ಮಾಡಿದ್ದು 10 ಕೋಟಿ ರೂಪಾಯಿಗಳು. 1998-99ರ ಅಂತ್ಯದಲ್ಲಿ ಇದು ಪ್ರಾರಂಭವಾಗುತ್ತದೆ. 1998-99ರ ಲೆಕ್ಕ ತೆಗೆದುಕೊಂಡರೆ ಆ ವರ್ಷದಲ್ಲಿ ಅವರಿಗೆ ಡ್ಯೂ ಇದ್ದದ್ದು 8 ಕೋಟಿ 40 ಲಕ್ಷ ರೂಪಾಯಿಗಳು. ಆ ವರ್ಷದಲ್ಲಿ ಅವರಿಗೆ ಎಕ್ಸೆಸ್ ಆಗಿ 6 ಕೋಟಿ ರೂಪಾಯಿಗಳು ರಿಲೀಸ್ ಆಗಿದೆ. This was in 1998-99.

1999-2000ರಲ್ಲಿ ತಾವು ಫೈನಾನ್ಸ್ ಡಿಪಾರ್ಟ್‌ಮೆಂಟ್‌ನ್ನು ತೆಗೆದುಕೊಂಡ ಮೇಲೆ ಅವರಿಗೆ ಡ್ಯೂ ಇದ್ದದ್ದು 7 ಕೋಟಿ ರೂಪಾಯಿಗಳು, ತಾವು ರಿಲೀಸ್ ಮಾಡಿರತಕ್ಕಂಥದ್ದು 78 ಕೋಟಿ ರೂಪಾಯಿಗಳು ! 2000-2001ರಲ್ಲಿ ಅವರಿಗೆ ಡ್ಯೂ ಇದ್ದದ್ದು 10 ಕೋಟಿ ರೂಪಾಯಿಗಳು, ತಾವು ರಿಲೀಸ್ ಮಾಡಿರತಕ್ಕಂಥದ್ದು ಎಕ್ಸೆಸ್ 177 ಕೋಟಿ ರೂಪಾಯಿಗಳು ! ಅದಾದಮೇಲೆ 2001-2002ರಲ್ಲಿ ಒಟ್ಟಾರೆ ಹೇಳತಕ್ಕಂಥಾದ್ದು ಈ ಎರಡೂವರೆ ವರ್ಷಗಳ 1999ರ ಎಂಡ್‌ನಿಂದ 2002ರ ಒಳಗೆ ತಾವು ಎಕ್ಸೆಸ್ ರಿಲೀಸ್ ಮಾಡಿರತಕ್ಕಂಥಾದ್ದು 239 ಕೋಟಿ ರೂಪಾಯಿಗಳು. 239 ಕೋಟಿ ರೂಪಾಯಿಗಳು ಬೆಂಗಳೂರು ಡಿಸ್ಟ್ರಿಕ್ಟ್ ಟ್ರೆಜರಿಯಿಂದ ರಿಲೀಸ್ ಆಗಬೇಕಾದರೆ ಇದು ತಮ್ಮ ಗಮನಕ್ಕೆ ಬರಲಿಲ್ಲವೇ ? ಇದು ಏಕೆ ತಮ್ಮ ಗಮನಕ್ಕೆ ಬರಲಿಲ್ಲ ? ಮಾನ್ಯ ಮುಖ್ಯಮಂತ್ರಿಗಳು ಇವತ್ತು ಇದಕ್ಕೆ ಉತ್ತರವನ್ನು ಕೊಡಬೇಕಾಗಿದೆ ಎಂದು ಬಹಳ ಗೌರವಪೂರ್ವಕವಾಗಿ ನಾನು ಕೇಳಬಯಸುತ್ತೇನೆ. 230 ಕೋಟಿ ರೂಪಾಯಿಗಳು ಟ್ರೆಜರಿಯಿಂದ ರಿಲೀಸ್ ಆಗಿದೆ. ಯಾರ್ಯಾರ ಹೆಸರಿನಲ್ಲಿ ಯಾವ ಯಾವ ಬಿಲ್‌ಗಳನ್ನು ಮಾಡಿ ಕಳುಹಿಸಿದ್ದಾರೆ ಎನ್ನುವುದನ್ನು ಮಾನ್ಯ ಸುರೇಶ್‌ಕುಮಾರ್ ಅವರು ಬಹಳ ಚೆನ್ನಾಗಿ ಹೇಳಿದ್ದಾರೆ. ಆ ಡೀಟೈಲ್ಸ್ ಬಗ್ಗೆ ನಾನು ಹೇಳಲಿಕ್ಕೆ ಹೋಗುವುದಿಲ್ಲ. ನೀರು ಸರಬರಾಜು ಯೋಜನೆ ಇಂಥದಕ್ಕೆ ಎ.ಬಿ.ಸಿ. ವರ್ಗದಲ್ಲಿ ಬಾರದಿರತಕ್ಕಂಥ ವೆಚ್ಚಕ್ಕೆ ಟ್ರೆಜರಿಯಲ್ಲಿ ಪಾಸ್ ಮಾಡಲಿಕ್ಕೆ ಅವರಿಗೆ ಪವರ್ಸ್ ಇರತಕ್ಕಂಥಾದ್ದು ಕೇವಲ 10 ಲಕ್ಷ ರೂಪಾಯಿಗಳಿಗೆ ಮಾತ್ರ. He has got powers to release upto Rs. 10 lakhs. But, he has released upto Rs. 50 lakhs at a time. ಇದು ಹೇಗೆ ಸಾಧ್ಯ ? ಟ್ರೆಜರಿ ಆಫೀಸರ್, ರಿಜಿಸ್ಟ್ರಾರ್ ಕನ್ನೈವನ್ಸ್ ಆಗದೆ ಹೊಂದಾಣಿಕೆ ಇಲ್ಲದೆ ಹೇಗೆ ಇವರು ಇಷ್ಟೊಂದು ದುಡ್ಡನ್ನು ರಿಲೀಸ್ ಮಾಡಲಿಕ್ಕೆ ಸಾಧ್ಯವಿದೆ ? ಇದು ಇವತ್ತು ರಾಜ್ಯದ ಜನತೆಗೆ ಹೇಳಬೇಕಾಗಿರತಕ್ಕಂಥ ವಿಚಾರ. ಲೋಕಾಯುಕ್ತರವರು ತನಿಖೆಗಳನ್ನು ಮಾಡಿ, ಎಷ್ಟು ಟ್ಯೂಬ್‌ಲೈಟ್‌ಗಳನ್ನು ಹಾಕಿದ್ದಾರೆ ? ಎಷ್ಟು ರಸ್ತೆಗಳನ್ನು ಮಾಡಿದ್ದಾರೆ ? ಎಷ್ಟು ರಸ್ತೆಗಳಿಗೆ ಡಾಂಬಾರ್ ಹಾಕಿದ್ದಾರೆ ? ಎಷ್ಟು ಹಾಕಿಲ್ಲ ? ಆ ಕಂಟ್ರಾಕ್ಟರ್ ಯಾರು ? ಆ ಖೋಟಾನೋಟುಗಳು

ಯಾವುದು ? ಬೋಗಸ್ ಕೆಲಸಗಳು ಯಾವುವು ಅದರ ಬಗ್ಗೆ ನಾನು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಏಕೆಂದರೆ ಎನ್‌ಕ್ವೈರಿ ಮೇಲೆ ನಾವು ಮಾತನಾಡತಕ್ಕಂಥಾದ್ದು ಎಫೆಕ್ಟ್ ಆಗಬಾರದೆಂಬುದಾಗಿ ಇರತಕ್ಕಂಥದ್ದಕ್ಕಾಗಿ I am not going to touch that aspect. ನಾನು ಕೇಳುತ್ತಿರತಕ್ಕಂಥಾದ್ದು ಏನೆಂದರೆ, ಈ 230 ಕೋಟಿ ರೂಪಾಯಿಗಳು ಎಕ್ಸೆಸ್ ಪೇಮೆಂಟ್ ಏನಾಗಿದೆ ಆ ಎಕ್ಸೆಸ್ ಪೇಮೆಂಟ್ ಹೇಗೆ ಆಯಿತು ? ಇದು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಏಕೆ ಬರಲಿಲ್ಲ ? ನನಗೆ ಗೊತ್ತಿರುವ ಹಾಗೆ ಈ 2000-2001ರ ಅಕೌಂಟೆಂಟ್ ಜನರಲ್‌ರವರ ರಿಪೋರ್ಟ್ ಪ್ರಕಾರ ಸ್ಪೆಸಿಫಿಕ್ ಆಗಿ ಒಂದೇ ದಿವಸದಲ್ಲಿ ಒಬ್ಬನೇ ವ್ಯಕ್ತಿಗೆ ಪ್ರತಿಯೊಂದೂ 50 ಲಕ್ಷ ರೂಪಾಯಿಗಳಿಗೆ ಮೇಲ್ಪಟ್ಟ 5 ಬಿಲ್‌ಗಳನ್ನು ಪಾವತಿ ಮಾಡುತ್ತಾರೆ. ಇದು ವಿಚಿತ್ರವಾಗಿದೆ. ಇದು ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ಬಂದಿರಲಿಕ್ಕೂ ಸಾಕು. ತಾವು ತಂದಿರುವಂಥ ಹೌಸಿಂಗ್ ಕಾರ್ಯಕ್ರಮ ಬಹಳ ಚೆನ್ನಾಗಿ ನಡೆಯುತ್ತಿದೆ. 2000 ರೂಪಾಯಿಗಳನ್ನು ಆಟ್-ಎ-ಟೈಮ್ ಒಂದು ಕಂತನ್ನು ಮನೆ ಕಟ್ಟುವವರಿಗೆ ಕೊಡುತ್ತಾರೆ. ಆ ಎರಡು ಸಾವಿರ ರೂಪಾಯಿಗಳ ಚೆಕ್ ಅನೇಕ ಕಡೆ ಕ್ಯಾಷ್ ಆಗದೆ 15 ದಿನ, 20 ದಿನಗಳ ಕಾಲ ಕಾಯತಕ್ಕಂಥ ಪರಿಸ್ಥಿತಿ ರಾಜ್ಯದಲ್ಲಿದೆ. ಮೈನರ್ ಇರಿಗೇಷನ್ ಡಿಪಾರ್ಟ್‌ಮೆಂಟ್‌ನಿಂದ ಸುಮಾರು 180 ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚಿನ ಬಿಲ್‌ಗಳ ಬಾಕಿ ಇದೆ. ಇವತ್ತು ಮೈನರ್ ಇರಿಗೇಷನ್ ವರ್ಕ್ ಇಡೀ ರಾಜ್ಯದಲ್ಲಿ ನಿಂತುಹೋಗಿದೆ. ನಬಾರ್ಡ್ ಕೆಲಸಗಳು ಸಂಪೂರ್ಣವಾಗಿ ನಿಂತುಹೋಗಿವೆ. ಕಳೆದ ವಾರ ಒಂದಷ್ಟು ಅಡ್ವಾನ್ಸ್ ಪೇಮೆಂಟ್ ಮಾಡಿರುವುದರಿಂದ ವಿಧಾನಸಭಾ ಅಧಿವೇಶನ ಪ್ರಾರಂಭವಾಯಿತೆಂದು ಇರಬಹುದು, ಕೆಲಸಗಳು ಸ್ವಲ್ಪ ಪ್ರಾರಂಭವಾಗಿವೆ. ಅದರೆ ಈ ಬಿಲ್‌ಗಳು ಹೇಗೆ ಪಾಸ್ ಆಯಿತು ? ನನಗೆ ಗೊತ್ತಿರುವ ಹಾಗೆ ಮಾನ್ಯ ಸಚಿವರಾದಂಥ ಶ್ರೀ ಕೃಷ್ಣಪ್ಪನವರು ತಮಗೆ ಒಂದು ಪತ್ರ ಬರೆದಿದ್ದಾರೆ. ಆ ಪತ್ರದಲ್ಲಿ ಏನು ಹೇಳಿದ್ದಾರೆಂದರೆ "ನಮ್ಮ ಡೆವಲಪ್‌ಮೆಂಟ್ ಪಾಯಿಂಟ್ ಆಫ್ ವ್ಯೂ-ನಿಂದ ನಮ್ಮ ಜಿಲ್ಲೆಗೆ ಈ ಸರ್‌ಚಾರ್ಜ್ ಡ್ಯೂಟಿ ಕಟ್ಟತಕ್ಕಂಥಾದ್ದರಲ್ಲಿ 100 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಬೇಕೆಂದು" ನಿಮಗೆ ಪತ್ರ ಬರೆದಿದ್ದಾರೆ. ಮೇಲ್ನೋಟಕ್ಕೆ ಇದರಲ್ಲಿ Needle of Suspicion ಮಾನ್ಯ ಮಂತ್ರಿಗಳ ಕಡೆಗೆ ಹೋಗುತ್ತದೆ ಎನ್ನತಕ್ಕಂಥ ಮಾತು ಏನಿದೆ ಇದಕ್ಕೆ ಸಾಕ್ಷಿ, ಪುರಾವೆ, ಆಧಾರ ಬೇಕಾಗುತ್ತದೆ. ಇದಕ್ಕೆ ಸಾಕ್ಷಿ ಮಾನ್ಯ ಕೃಷ್ಣಪ್ಪನವರು ತಮಗೆ ಬರೆದಿರತಕ್ಕಂಥ ಪತ್ರ. ಅದು ಕಾಕತಾಳೀಯವೋ ಏನೋ ನನಗೆ ಗೊತ್ತಿಲ್ಲ. ಅವರು ಪತ್ರ ಬರೆದ ಮೇಲೆ 100 ಕೋಟಿ ರೂಪಾಯಿಗಳು ರಿಲೀಸ್ ಆಯಿತು. ಇದಕ್ಕೆ ಏನು ಸಂಬಂಧ ? ತಾವು ಇದನ್ನು ತಿಳಿಸಬೇಕಾಗುತ್ತದೆ. ಈ ವಿಷಯದ ಕಡೆಗೆ ತಾವು ಏಕೆ ಗಮನ ಕೊಡಲಿಲ್ಲ ? ತಮ್ಮ ಗಮನಕ್ಕೆ ಏಕೆ ಬರಲಿಲ್ಲ ? ಇದು ನನಗೆ ಅರ್ಥ ಆಗದಿರತಕ್ಕಂಥ ವಿಚಾರ. ನಾನು ಪ್ರಾಮಾಣಿಕವಾಗಿ ಈ ಮಾತನ್ನು ಹೇಳುತ್ತಿದ್ದೇನೆ. ಅನ್‌ಅಫಿಷಿಯಲ್ ಆಗಿ ಟ್ರೆಜರಿ ಬ್ಯಾನ್ ಇದೆ. ನಮ್ಮ ಕಾಲದಲ್ಲಿ ಟ್ರೆಜರಿ ಬ್ಯಾನ್ ಇರಲಿಲ್ಲ ಎಂದು ಹೇಳುವುದಿಲ್ಲ. ಕೆಲವು ಸಂದರ್ಭದಲ್ಲಿ ವೇಸ್ ಅಂಡ್ ಮೀನ್ಸ್ ನಾವು ಅಡ್ಜಸ್ಟ್ ಮಾಡತಕ್ಕಂಥ ಸಂದರ್ಭದಲ್ಲಿ ಆ ಬಿಲ್ ಕೊಡಬೇಡ ಎಂದು ಹೇಳತಕ್ಕಂಥದ್ದು ಇದೆ. ಅದರೆ ತಮ್ಮ ಗಮನಕ್ಕೆ ಬರಲಿಲ್ಲವೆಂದಾದರೆ ನೀವು ಎ.ಜಿ. ರಿಪೋರ್ಟ್‌ನ್ನು ಓದುವುದಿಲ್ಲವೇ ? ಫೈನಾನ್ಸ್ ಸೆಕ್ರೆಟರಿಯವರು ಓದುವುದಿಲ್ಲವೇ ಅಥವಾ ನಿಮ್ಮ ಸೆಕ್ರೆಟರಿಯವರು ಎ.ಜಿ. ರಿಪೋರ್ಟ್‌ನ್ನು ಓದುವುದಿಲ್ಲವೇ ?

ಶ್ರೀ ಎ. ಕೃಷ್ಣಪ್ಪ :- ಮಾನ್ಯ ಸಿಂಧ್ಯರವರೆ, 100 ಕೋಟಿ ರೂಪಾಯಿಗಳಿಗಾಗಿ ಕಾಗದ ಬರೆದಿರಿ ಎಂದು ಹೇಳಿದಿರಿ, ದಯಮಾಡಿ ಆ ಡೇಟ್‌ನ್ನು ಸ್ವಲ್ಪ ಕೊಡುತ್ತೀರಾ ?

ಶ್ರೀ ಪಿ.ಜಿ.ಆರ್. ಸಿಂಧ್ಯಾ :- ಮಾನ್ಯ ಅಧ್ಯಕ್ಷರೆ ನಾನು ಕೊಡುತ್ತೇನೆ. ಅದನ್ನು ಕೊಡೋಣ ಅದರಲ್ಲಿ ರೆವಿನ್ಯೂ ಸೆಕ್ರೆಟರಿಯವರು ಒಂದು ಕಾಗದ ಬರೆಯುತ್ತಾರೆ. ಅದು ಸರ್ಕಾರದ ಗಮನಕ್ಕೆ ಬಂದಿದೆ. ಇದರಲ್ಲಿ ಒಬ್ಬ ಅಸಾಮಿ ಇದಕ್ಕೆಲ್ಲಾ ವಾಲಂಟರಿಯಾಗಿ ಓಡಾಡತಕ್ಕಂಥ ಒಬ್ಬ ವಿಷಕಂಠಶೆಟ್ಟಿ ಎನ್ನುವವನು ಇದ್ದಾನೆ. ಅವನು ದೊಡ್ಡದೊಡ್ಡವರ ಮನೆಯಲ್ಲೆಲ್ಲಾ ಓಡಾಡುತ್ತಿರುತ್ತಾನಂತೆ. ಅವನ ಮೇಲೆ ನೀವು ಇನ್ನೂ ಏಕೆ ಕೇಸ್ ಹಾಕಿಲ್ಲ ? ಇದು ನನಗೆ ಅರ್ಥವಾಗದಿರುವಂಥಾದ್ದು. ಮತ್ತೊಂದು ಕಡೆ ಇದು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಏಕೆ ಬರಲಿಲ್ಲ ಎನ್ನುವುದು ಅರ್ಥವಾಗುತ್ತಿಲ್ಲ. ಈ ಅಧಿಕಾರಿಗಳ ಮೇಲೆ ನೀವು ಏಕೆ ಕ್ರಮ ತೆಗೆದುಕೊಳ್ಳಲಿಲ್ಲ ? 2000-2001ರಲ್ಲಿ ಆದ ಮೇಲೆ 2001-2002ರಲ್ಲಿ ಆದರೂ ಕ್ರಮ ತೆಗೆದುಕೊಳ್ಳಬಹುದಾಗಿತ್ತಲ್ಲಾ. ನೀವು ಏಕೆ ಕ್ರಮ ತೆಗೆದುಕೊಳ್ಳಲಿಲ್ಲ ಎನ್ನುವ ಪ್ರಶ್ನೆಯನ್ನು ನಾನು ಕೇಳಲಿಕ್ಕೆ ಬಯಸುತ್ತೇನೆ. ಈಗ ಲೋಕಾಯುಕ್ತದಲ್ಲಿ ಒಂದು ಟೆಕ್ನಿಕಲ್ ಆಡಿಟ್ ರಿಪೋರ್ಟ್ ಎಂದು ಒಂದು ಸೆಕ್ಷನ್ ಇದೆ. ಇವೆಲ್ಲಾ ರೆಕಾರ್ಡ್ಸ್‌ಗಳನ್ನು ವೆರಿಫೈ ಮಾಡಬೇಕಾದರೆ ಲಾರಿಗಟ್ಟಲೆ ಇರುತ್ತದೆ, ಅದನ್ನು ಹೇಗೆ ಲೋಕಾಯುಕ್ತದವರು ಮಾಡುತ್ತಾರೋ ನನಗಂತೂ ಗೊತ್ತಿಲ್ಲ. ಆ ಅಧಿಕಾರಿಗಳ ಮೇಲೆ ಇದುವರೆಗೂ ಏಕೆ ನೀವು ಕ್ರಮವನ್ನು ಜರುಗಿಸಿಲ್ಲ ? ನನಗೆ ಗೊತ್ತಿರುವ ಹಾಗಿ ಇಂಥಿಂಥ ಅಧಿಕಾರಿಗಳ ಮೇಲೆ ನೀವು ಕ್ರಮ ತೆಗೆದುಕೊಳ್ಳಬೇಕು ಎಂದು ನಿಮ್ಮ ಕಚೇರಿಗೆ ಕಾಗದ ಬರುತ್ತದೆ. ಇದುವರೆಗೂ ಸಹಿತ ನೀವು ಕ್ರಮ ತೆಗೆದುಕೊಂಡಿಲ್ಲ. ಆ ಕ್ರಮ ತೆಗೆದುಕೊಳ್ಳದಿರುವ ಹಾಗೆ ಅಡ್ಡಿಪಡಿಸಿರುವವರು ಯಾರು ? ಇದನ್ನು ತಾವು ಇವತ್ತು ಈ ಸದನಕ್ಕೆ ತಿಳಿಸಬೇಕಾಗುತ್ತದೆ, ರಾಜ್ಯದ ಜನತೆಗೆ ತಿಳಿಸಬೇಕಾಗುತ್ತದೆ ಎನ್ನುವ ಮಾತನ್ನು ಕೇಳುವುದಕ್ಕೆ ಬಯಸುತ್ತೇನೆ. ಇಲ್ಲಿ ಇಷ್ಟೊಂದು ಹಣ ಟ್ರೆಜರಿಯಿಂದ ಪೇಮೆಂಟ್ ಆಗಿದ್ದು ತಮ್ಮ ಗಮನಕ್ಕೇ ಬಂದಿಲ್ಲ, ಇದರ ಅರ್ಥವೇನು ? ತಾವೇ ಇದಕ್ಕೆ ಉತ್ತರವನ್ನು ಕೊಡಬೇಕಾಗುತ್ತದೆ. ಈ ಎರಡು ವರ್ಷಗಳಲ್ಲಿ ಇದಕ್ಕೆ ಸಂಬಂಧಪಟ್ಟ 7 .ಸಿ.ಎಂ.ಸಿ., ಟಿ.ಎಂ.ಸಿ. ಗಳಿಗೆ ಸಂಬಂಧಪಟ್ಟಂಥ ಅಧಿಕಾರಿಗಳು ಯಾರಿದ್ದಾರೆ ಇವರ ಆಸ್ತಿಯನ್ನು ಜಪ್ತಿ ಮಾಡಿಸಿ. ಆ ದುಡ್ಡನ್ನೆಲ್ಲಾ ಇವರು ಎಲ್ಲಿ ಇಟ್ಟಿರುತ್ತಾರೆ ? ಅಲ್ಲಿರತಕ್ಕಂಥ ಈ 230 ಕೋಟಿ ರೂಪಾಯಿಗಳು ಎಲ್ಲಿ ಹೋಯಿತು ? ಚೀಫ್ ಆಫೀಸರ್ಸ್ ಅಥವಾ ಅದಕ್ಕೆ ಸಂಬಂಧಪಟ್ಟಂಥ ಆಫೀಸರ್‌ಗಳು ಮತ್ತು ವಿಧಾನಸೌಧದವರೆಗೂ ಸಹಿತ ಅಧಿಕಾರಿಗಳ ಶಾಮೀಲು ಇಲ್ಲದೆ ಇದು ಆಗಲಿಕ್ಕೆ ಸಾಧ್ಯವೇ ಇಲ್ಲ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ಇದು ಗಹನವಾಗಿರತಕ್ಕಂಥ ವಿಚಾರ. ಆದರಿಂದಾಗಿ ಮಾನ್ಯ ಮುಖ್ಯಮಂತ್ರಿಗಳು ರಾಜ್ಯದ ಜನತೆಗೆ ವಿವರಿಸಬೇಕಾಗಿದೆ. ಒಂದು ಕಡೆ ಟ್ರೆಜರಿ ಬ್ಯಾನ್ ಇಲ್ಲ ಎಂದು ಹೇಳುತ್ತೀರಿ. ಇನ್ನೊಂದು ಕಡೆ ನಮಗೆ ದುಡ್ಡು ಸಿಗುತ್ತಿಲ್ಲ ಎಂದು ಜನ ಹೇಳುತ್ತಿದ್ದಾರೆ. ವಸ್ತು ಸ್ಥಿತಿ ಏನೆಂದರೆ ದುಡ್ಡು ಇಲ್ಲ. ಅಂಥ ಸನ್ನಿವೇಶದಲ್ಲಿ 230 ಕೋಟಿ ರೂಪಾಯಿಗಳ ಎಕ್ಸೆಸ್ ಪೇಮೆಂಟ್ ಸರ್‌ಚಾರ್ಜ್‌ನದ್ದು ಹೇಗೆ ಆಯಿತು ? ಇದು ಬಹಳ ಮುಖ್ಯವಾಗಿರತಕ್ಕಂಥ ವಿಚಾರವಾಗಿದ್ದು ತಾವು ಇದನ್ನು ತಿಳಿಸಬೇಕು. ಇನ್ನು ತನಿಖೆಯನ್ನು ಲೋಕಾಯುಕ್ತರವರು ಮಾಡಲಿ. ನನಗೆ ಗೊತ್ತಿರುವ ಹಾಗೆ ಲೋಕಾಯುಕ್ತರವರ ಮುಂದೆ ಕೆಲವು ನಾಗರೀಕ ವ್ಯಕ್ತಿಗಳು ಒಂದು

ಆಪಾದನೆ ಮಾಡಿದ್ದಾರೆ. ಅದರ ಕಾಪಿಯನ್ನು ನಾನು ತರಿಸಿಕೊಂಡಿದ್ದೇನೆ. ಇದು ಮಾನ್ಯ ಮುಖ್ಯಮಂತ್ರಿಗಳಿಗೆ ಸಹ ತಲುಪಿರುತ್ತದೆ.

4.50 ಪಿಎಂ

ಈ ಹಿಂದೆ ವಿವರಿಸಿದ ಎಲ್ಲಾ ವಿಚಾರಗಳಲ್ಲಿ ಸುಮಾರು 240 ಕೋಟಿ ಅವ್ಯವಹಾರಗಳಲ್ಲಿ ಜವಾಬ್ದಾರಿಯಾಗಿರುವ ಈ ಕೆಳಕಂಡ ವ್ಯಕ್ತಿಗಳೆಂದು ಲೋಕಾಯುಕ್ತರ ಮುಂದೆ ಹೋಗಿ ಅಫಿಡವಿಟ್ ಮಾಡಿದ್ದಾರೆ. ಅದರಲ್ಲಿ ಶ್ರೀ ಎ. ಕೃಷ್ಣಪ್ಪ, ಬೆಂಗಳೂರು ನಗರ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಹಾಲಿ ಸಮಾಜ ಕಲ್ಯಾಣ ಸಚಿವರು ; ಕೆ.ಕೆ. ನಾಯಕ್, ಖಜಾನೆ ನಿರ್ದೇಶಕರು, ಕೆ.ಎಂ. ರಾಮಚಂದ್ರನ್ ಜಿಲ್ಲಾ ನೋಂದಣಾಧಿಕಾರಿಗಳು, ಆತ್ಮಾರಾಮಯ್ಯ ಹೀಗೆ ಸುಮಾರು 36 ಹೆಸರುಗಳನ್ನು ಕೊಟ್ಟಿದ್ದಾರೆ. ಇಷ್ಟೆಲ್ಲಾ ಆದರೂ ಸಹ ಅಧಿಕಾರಿಗಳ ಮೇಲೆ ಏಕೆ ಕ್ರಮವನ್ನು ತೆಗೆದುಕೊಂಡಿಲ್ಲ ? ಇದು ನನಗೆ ಆಶ್ಚರ್ಯವಾಗಿರತಕ್ಕ ವಿಚಾರ. ಅವರನ್ನು ಬದಲಾವಣೆ ಮಾಡಲಿಕ್ಕೆ ಇದುವರೆಗೆ ಹೋಗದೆ ಇರತಕ್ಕದ್ದು ನನಗೆ ಅನೇಕ ಸಂಶಯಗಳಿಗೆ ಎಡೆ ಮಾಡಿಕೊಟ್ಟಿದೆ. ಈ ಲೋಕಾಯುಕ್ತ ತನಿಖೆಯಾಗತಕ್ಕದ್ದು, ಲೋಕಾಯುಕ್ತರು ಅಂದರೆ ನಮಗೆ ನಿಮಗೆ ಗೊತ್ತಿರತಕ್ಕ ಹಾಗೆ ನಾವೇ ಅವರನ್ನು ಅಲ್ಲಿಗೆ ಕಳುಹಿಸಿ ಕೊಡುತ್ತೇವೆ. ಲೋಕಾಯುಕ್ತರು ಇಂತಹ ಅಧಿಕಾರಿಗಳು ಬೇಕೆಂದು ಕೇಳುತ್ತಾರೆ. ಪ್ಯಾನಲ್ ಆಫ್ ನೇಮ್ಸ್ ಕಳುಹಿಸಿಕೊಡುತ್ತೇವೆ. 8-10 ಜನ ಸಬ್-ಇನ್ಸ್‌ಪೆಕ್ಟರ್ಸ್, ಸರ್ಕಲ್ ಇನ್ಸ್‌ಪೆಕ್ಟರ್ಸ್, ಡಿವೈಎಸ್‌ಪಿಗಳು ಅವರುಗಳನ್ನು ಕಳುಹಿಸುತ್ತೇವೆ. ತಾವು ಲೋಕಾಯುಕ್ತರು, ಹೋಮ್‌ಮಿನಿಸ್ಟರ್ ನಾಲ್ಕು ಜನ ಐಪಿಎಸ್ ಅಧಿಕಾರಿಗಳು ಕುಳಿತುಕೊಂಡು ಅವರಿಗೆ ಯಾವುದು ಚಾಯ್ಸ್ ಇರುತ್ತದೆ ಅವರನ್ನು ಲೋಕಾಯುಕ್ತರು ಆಯ್ಕೆ ಮಾಡಿಕೊಳ್ಳುತ್ತಾರೆ. ನಾನು ಆಫೀಸರ್ಸ್ ಇಂಟೆಗ್ರೆಟಿಯನ್ನು ಸಸ್ಪೆಕ್ಟ್ ಮಾಡುವುದಕ್ಕೆ ಹೋಗುವುದಿಲ್ಲ. I have all faith and respect for the I.P.S officers who are working in Lok Ayukta and even otherwise, those who are working outside Lok Ayukta also. ನಾನು ಕೇಳುತ್ತೇನೆ, ಮಂತ್ರಿಗಳಾಗಿರತಕ್ಕವರ ಮೇಲೆ, ಅಧಿಕಾರಿಗಳಾಗಿರತಕ್ಕವರ ಮೇಲೆ ಯಾವ ಅಧಿಕಾರಿ ತಾನೇ ವಿಚಾರಣೆ ಮಾಡುವುದಕ್ಕೆ ಸಾಧ್ಯವಿದೆ ? ಇದು ಬಂದಿರತಕ್ಕ ಪ್ರಶ್ನೆ. ಮಾನ್ಯ ಸೋಮಶೇಖರ್‌ರವರು ಮಾಡಿರತಕ್ಕ ನೈತಿಕತೆಯ ವಿಚಾರದ ಬಗ್ಗೆ ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ. ಅವರೂ ಆಗುವುದಿಲ್ಲವೆಂದು ಹೇಳಿದ್ದಾರೆ. ತಾವು ಯಾವುದೇ ಕಾರಣಕ್ಕೂ ಸಹಿತ ರಕ್ಷಣೆ ಕೊಡಬಾರದು. ಅದರಿಂದ ನಿಮಗೇನೂ ಉಪಯೋಗವಾಗುವುದಿಲ್ಲ. ತಾವು ಇತ್ತೀಚಿನ ದಿನಗಳಲ್ಲಿ ನಿಮ್ಮ ಭಾಷಣದಲ್ಲಿ ಅದರಲ್ಲೂ ನರಸಿಂಹರಾಜ ಕ್ಷೇತ್ರದಲ್ಲಿನ ಚುನಾವಣೆಯಲ್ಲಿ ಗೆದ್ದಮೇಲೆ ತಮ್ಮ ಭಾಷಣದ ಧ್ವನಿ ಬದಲಾವಣೆಯಾಗಿದೆ. ತಾವು ಮತ್ತೆ ನಮ್ಮ ಸರ್ಕಾರ ಅಧಿಕಾರಕ್ಕೆ ಬರುತ್ತದೆ, ಐದು ವರ್ಷಗಳ ಕಾಲ ಆಡಳಿತ ನಡೆಸುತ್ತೇವೆಂದೂ, ಇನ್ನುಳಿದ ಎರಡೂವರೆ ವರ್ಷಗಳಷ್ಟೇ ಅಲ್ಲಿ ಇನ್ನೊಂದು ಸಾರಿ ನಾನು ಕಾಂಗ್ರೆಸ್ ಪಾರ್ಟಿಯನ್ನು ನನ್ನ ನೇತೃತ್ವದಲ್ಲಿ ತರುತ್ತೇನೆ. ನಾನು ಕಲ್ಪವೃಕ್ಷವಾಗಿದ್ದೇನೆ, ಫಲ ಯಾರು ಬೇಕಾದರೂ ತಿನ್ನಬಹುದು ; ನಾನು ಮತ್ತೆ ಕರ್ನಾಟಕದಲ್ಲಿ ಕಾಂಗ್ರೆಸ್ ಪಾರ್ಟಿಯನ್ನು ಗೆಲ್ಲಿಸುತ್ತೇನೆಂದು ಹೇಳಿದ್ದೀರಿ, ಸಂತೋಷ. ತಾವು ಪ್ರಯತ್ನ ಮಾಡಿ, ನಮಗೇನೂ ಅದರ ಬಗ್ಗೆ ಹೊಟ್ಟೆಕಿಚ್ಚು ಇಲ್ಲ. ಆದರೆ ಕಲ್ಪವೃಕ್ಷವಾಗಿರತಕ್ಕ ಸರ್ಕಾರದ ಹಣವನ್ನು ಸಾಮಾನ್ಯ ಜನ ತಿನ್ನಬೇಕು ;

ಇಂತಹವರು ತಿನ್ನಬಾರದು. ಇದು ಬಹಳ ಮುಖ್ಯವಾಗಿರತಕ್ಕ ಪ್ರಶ್ನೆ. ಮೊದಲನೆಯದಾಗಿ ಲೋಕಾಯುಕ್ತ ತನಿಖೆಯಾಗಲಿ, ವರದಿ ಬರಲಿ. ಆದರೆ ಅಲ್ಲಿಯವರೆಗೆ ಕನಿಷ್ಟಪಕ್ಷ ಇದಕ್ಕೆ ಕುಮ್ಮಕ್ಕು ಕೊಟ್ಟಿರತಕ್ಕ ಜನಗಳನ್ನು ನೀವು ಅಧಿಕಾರದಲ್ಲಿ ಮುಂದುವರಿಸಿದರೆ ಪೊಲೀಸರು ಹೇಗೆ ತನಿಖೆಯನ್ನು ನಿಷ್ಪಕ್ಷಪಾತವಾಗಿ ಮಾಡುವುದಕ್ಕಾಗುತ್ತದೆನ್ನುವುದನ್ನು ದಯವಿಟ್ಟು ಯೋಚನೆ ಮಾಡಿ. ಇದು ಪ್ರಮುಖವಾಗಿರತಕ್ಕ ವಿಚಾರ. ಎರಡನೆಯದಾಗಿ, ತಾವೇನು ಫೈನಾನ್ಷಸ್ ಟ್ರಾನ್ಸ್‌ಪರೆನ್ಸಿ ಮ್ಯಾನೇಜ್‌ಮೆಂಟ್ ಅದರ ಬಗ್ಗೆ ಮಾತನಾಡುತ್ತಿದ್ದೀರಿ, ನಿಮ್ಮ ಎಲ್ಲಾ ಫೈನಾನ್ಷಿಯಲ್ ಮ್ಯಾನೇಜ್‌ಮೆಂಟ್ ಸ್ಕೀಮ್ ಟೆಕ್ನಿಕ್ಸ್ ಇದಕ್ಕೆ ಏಕೆ ಅಪ್ಲೈ ಆಗಲಿಲ್ಲ ? ಎಕ್ಸೆಸ್ ಪೇಮೆಂಟ್ ಹೇಗಾಯಿತು ? ಎಲ್ಲಿಯಾದರೂ ಸೋರಿಕೆಯಾಗಿದೆಯಾ ? ಅದನ್ನು ನಿಲ್ಲಿಸುವುದಕ್ಕೆ ಕ್ರಮ ತೆಗೆದುಕೊಳ್ಳಬೇಕೆಂದು ಆಗ್ರಹಪಡಿಸಿ ಇಷ್ಟು ಸಮಯ ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ನಾನು ತಮಗೆ ಧನ್ಯವಾದಗಳನ್ನು ಅರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**MR. SPEAKER :-** I am very glad nobody has interrupted.

**ಶ್ರೀ ಬಿ.ಎನ್. ಬಚ್ಚೇಗೌಡ :-** ಮಾನ್ಯ ಅಧ್ಯಕ್ಷರೆ, ಸಿ.ಎಂ.ಸಿ ನನ್ನ ಕ್ಷೇತ್ರದಲ್ಲಿ ಬರುವುದರಿಂದ ನನಗೆ ಮಾತನಾಡುವುದಕ್ಕೆ ಅವಕಾಶ ಕೊಡಿ.

**ಅಧ್ಯಕ್ಷರು :-** ನನ್ನ ಕೊಠಡಿಯಲ್ಲಿ ತೀರ್ಮಾನವಾಗಿರುವಂತೆ ಆ ಅವಧಿಯಲ್ಲಿಯೇ ಮುಗಿಸಬೇಕು. ಈಗ ಮಾನ್ಯ ಚನ್ನಿಗಪ್ಪನವರು ಮಾತನಾಡಿ.

**ಶ್ರೀ ಸಿ. ಚನ್ನಿಗಪ್ಪ (ಕೊರಟಗೆರೆ) :-** ಮಾನ್ಯ ಅಧ್ಯಕ್ಷರೆ, ಈ ರಾಜ್ಯದಲ್ಲಿ ಸರ್ಕಾರ ಅಧಿಕಾರಕ್ಕೆ ಬಂದು ಎರಡು ವರ್ಷ 10 ತಿಂಗಳಾಗಿದೆ. ಅಲ್ಲಿಂದ ಇಲ್ಲಿಯವರೆಗೆ ಆಡಳಿತ ನಡೆಸಿಕೊಂಡು ಯಾವುದೇ ಅವ್ಯವಹಾರಕ್ಕೆ ತಲೆಹಾಕದಂತೆ ನಡೆಸಿರುವುದಕ್ಕೆ ನಾನು ಅವರನ್ನು ಶ್ಲಾಘಿಸುತ್ತೇನೆ. ಆದರೆ ನಿಮ್ಮ ಈ ಆಡಳಿತದ ಅವಧಿಯಲ್ಲಿ ಅಂತರಿಕವಾದ ವ್ಯವಹಾರಗಳು ಬಯಲಿಗೆ ಬರುವ ವಿಚಾರದಲ್ಲಿ ಈ ಸರ್ಕಾರ ಲೋಕಾಯುಕ್ತರನ್ನು ಬಲಪಡಿಸಿ ಭ್ರಷ್ಟಾಚಾರ ನಿರ್ಮೂಲನ ಮಾಡಬೇಕೆಂದು ಒಂದು ಆದೇಶವನ್ನು ಮಾಡಿದೆ, ಅದನ್ನು ನಾನು ಅಭಿನಂದಿಸುತ್ತೇನೆ. ಅದೇ ರೀತಿ ಲೋಕಾಯುಕ್ತರು ಈ ರಾಜ್ಯದ ಎಲ್ಲಾ ಸರ್ಕಾರಿ ಕಛೇರಿಗಳ ಮೇಲೆ ಧಾಳಿ ಮಾಡಿ ಅಲ್ಲಿ ಆಗಿರತಕ್ಕ ಅವ್ಯವಹಾರಗಳನ್ನು ಬಯಲಿಗೆಳೆದಿರುವುದಕ್ಕೆ ನಾನು ಮಾನ್ಯ ಲೋಕಾಯುಕ್ತರನ್ನೂ ಸಹ ಅಭಿನಂದಿಸುತ್ತೇನೆ. ನಾವು ರಾಜ್ಯದ ಜನತೆಗೆ ನ್ಯಾಯ ಕೊಡುತ್ತೇವೆಂದು ಹೇಳಿ ಅದು ಬೆಂಗಳೂರು ನಗರದ ಸಿಎಂಸಿಗಳು ಆಗಬಹುದು ಕಾರ್ಪೋರೇಷನ್ ಆಗಬಹುದು, ತಾಲ್ಲೂಕು ಪಂಚಾಯಿತಿ ಆಗಬಹುದು, ಜಿಲ್ಲಾ ಪಂಚಾಯಿತಿ ಆಗಬಹುದು. ಇವತ್ತು ರಾಜ್ಯದ ಬೊಕ್ಕಸಕ್ಕೆ ಅನ್ಯಾಯವಾಗದಂತೆ ಹೆಚ್ಚಿಗೆ ಹಣವನ್ನು ಕಲೆಕ್ಟ್ ಮಾಡುವ ಮುಖೇನ ಜನಗಳಿಗೆ ಅನುಕೂಲವಾಗುವ ಕಾರ್ಯಕ್ರಮವನ್ನು ಹಮ್ಮಿಕೊಂಡು ಸರ್ಕಾರ ನಡೆಸುವುದು ರೂಢಿಯಾಗಿದೆ. ಆದರೆ 1996ನೇ ಇಸವಿಯಲ್ಲಿ ಅಸ್ತಿತ್ವಕ್ಕೆ ಬಂದಂತಹ ಸಿಎಂಸಿಗಳು ಬೆಂಗಳೂರು ಹೊರ ವಲಯದಲ್ಲಿ ಎಷ್ಟರಮಟ್ಟಿಗೆ ಅವುಗಳ ಕೆಲಸ ಮಾಡುತ್ತಿವೆ ಎನ್ನುವುದು ಲೋಕಾಯುಕ್ತರ ಧಾಳಿಯಿಂದ ನಮಗೆ ಅರ್ಥವಾಗಿದೆ. ಇವತ್ತು ಸಿಎಂಸಿಗಳು ಇರಬಹುದು, ಅಥವಾ ಉಡುಪಿ ಜಿಲ್ಲಾ ಪಂಚಾಯಿತಿ ಇರಬಹುದು ; ಇಂತಹ ಅನೇಕ ಹಗರಣಗಳ ಬಗ್ಗೆ ಸಾರ್ವಜನಿಕರು ಲೋಕಾಯುಕ್ತರಿಗೆ ದೂರು

ಕೊಡುವಂತಹ ಕಾಲ ಬಂದಿದೆ. ಎಂಟು ಜನರ ಮೇಲೆ, ರಾಜ್ಯದ ಮಂತ್ರಿಗಳ ಮೇಲೆ, ಅಧಿಕಾರಿಗಳ ಮೇಲೆ ಕೊಟ್ಟಿರತಕ್ಕ ದೂರನ್ನು ನೋಡಿದಾಗ ಈ ರಾಜ್ಯದ ಆಡಳಿತ ಕೊನೆಯಲ್ಲಿದೆ ಬಿಗ್ ಜೀರೋ ಆಗಿದೆ. ಇದರಲ್ಲಿ ಏನೂ ಉಳಿದಿಲ್ಲ. ಉದಾಹರಣೆಗೆ ಮುದ್ರಾಂಕದ ಶುಲ್ಕ ಇರಬಹುದು, ಸರ್ಚಾರ್ಜ್ ಇರಬಹುದು, ನಿಗದಿ ಪಡಿಸಿರತಕ್ಕ ಹಣವಿರಬಹುದು, ಹೆಚ್ಚಿಗೆ ಹಣವನ್ನು ಯಾರ ಮಾಹಿತಿಗೂ ಇಲ್ಲದೆ ಸರ್ಕಾರದ ಆಡಿಟ್‌ಗೂ ಸಿಗದಂತೆ ಅನೇಕ ದಾಖಲೆಗಳನ್ನು ಬಚ್ಚಿಟ್ಟು ವ್ಯಯ ಮಾಡಿರತಕ್ಕದ್ದು ಸರ್ಕಾರಕ್ಕೆ ಆಗಿರತಕ್ಕ ಅವಮಾನ. ಲೋಕಾಯುಕ್ತರ ಇನ್ನೊಂದು ಧಾಳಿಯಲ್ಲಿ ದಿನಾಂಕ 6-12-2001ರಲ್ಲಿ 140 ಕೋಟಿ ರೂಪಾಯಿಗಳಿಗಿಂತ ಹೆಚ್ಚು ಹಣವನ್ನು ಬಿಡುಗಡೆ ಮಾಡಿ ಸರ್ಕಾರಕ್ಕೆ ತಿಳಿಸದಿರತಕ್ಕ ವಿಚಾರವನ್ನು ರಾಜ್ಯದ ಗೆಜೆಟ್‌ನಲ್ಲಿ ತಿಳಿಸಿದ್ದಾರೆ. ಆದರೂ ಈ ವಿಷಯ ಸರ್ಕಾರದ ಗಮನಕ್ಕೆ ಬರಬೇಕಾಗಿತ್ತು. ಇನ್ನೂ ಏನೇನು ಆಗಿದೆಯೋ ಗೊತ್ತಿಲ್ಲ. ಇದರಲ್ಲಿ ಯಾರ ಕೈವಾಡ ಇದೆಯೆಂದು ಗೊತ್ತಿಲ್ಲ. ಮಾನ್ಯ ಸುರೇಶ್‌ಕುಮಾರ್‌ರವರು ಹೇಳಿದರು ಇದು ಗ್ರೇಟ್ ಟ್ರೆಝರಿ ರಾಬರಿ ಎಂದು. ಇದರಲ್ಲಿ ಎರಡು ಮಾತಿಲ್ಲ. 1947ನೇ ಇಸವಿಯಿಂದ ಈಚೆಗೆ ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದಮೇಲೆ ಆಗಿರತಕ್ಕ ದೊಡ್ಡ ರಾಬರಿ. ಇದು ಕರ್ನಾಟಕ ಟ್ರೆಝರಿ ರಾಬರಿ with evidence. Robbery having its own documents. ರಾಬರಿ ವಿಚಾರದಲ್ಲಿ ಇದನ್ನು ಯಾರು ತಪ್ಪಿಸಿದ್ದಾರೆ ಅಂತಹವರನ್ನು ಸರ್ಕಾರ ರಕ್ಷಣೆ ಮಾಡಬಾರದು. ಆಕಸ್ಮಾತ್ ಏನಾದರೂ ಸರ್ಕಾರ ಅಂತಹವರನ್ನು ರಕ್ಷಣೆ ಮಾಡುವುದಕ್ಕೆ ಹೊರಟರೆ, ಸರ್ಕಾರ ಜನ ನೀತಿಗೆ ವಿರೋಧವಾದ ಸರ್ಕಾರ, ಈ ರಾಜ್ಯ ಸರ್ಕಾರ ದಿವಾಳಿತನದ ಸರ್ಕಾರವೆಂದು ಹೇಳಬೇಕಾಗಿದೆ. ನಾನಾದರೂ ವಿನಂತಿ ಮಾಡಿಕೊಳ್ಳುತ್ತೇನೆ, ಈ ಸರ್ಕಾರದಲ್ಲಿ, ಏನು ಸಿಎಂಸಿಗಳಲ್ಲಿ ಆದಂತಹ ಅನ್ಯಾಯ ಏನಿದೆ ಅದು ಪರ್ಚೇಸ್ ಆಗಬಹುದು, ಸ್ಟೇಟ್ ಆಡಿಟ್ ರಿಪೋರ್ಟ್‌ನಲ್ಲಿ ಹೇಳುತ್ತಾರೆ ಅದು ಈ ರೀತಿ ಇದೆ. Whether it was observed that the following cheques of the Municipalities for heavy amounts in favour of contractors/Supply Firms had been cleared by the Sub Treasury Officers vide examples furnished below :

Name of the Contractor/Amount/Date of payment/Voucher Number/ Name of CMC. ಅರುಣಕುಮಾರ್ ಎಂಬುವರಿಗೆ ದಿನಾಂಕ 13-6-ರಲ್ಲಿ 50 ಲಕ್ಷ ರೂಪಾಯಿಗಳ ಚೆಕ್ ಕೊಡುತ್ತಾರೆ. ಅದೇ ರೀತಿ 16-6ರಲ್ಲಿ ಅದೇ ವ್ಯಕ್ತಿಗೆ 30 ಲಕ್ಷ ರೂಪಾಯಿಗಳ, ಚೆಕ್ ಕೊಡುತ್ತಾರೆ. ಯಾವುದೇ ಕಾಮಗಾರಿಗೆ ಟೆಂಡರ್ ಕರೆದಿಲ್ಲ. ಟ್ರಾನ್ಸ್‌ಪರೆನ್ಸಿ ಗೌವರ್ನಮೆಂಟ್ ಎಂದು ಹೇಳುತ್ತೀರಿ, ಟೆಂಡರ್ ಕರೆದು ಏಕೆ ಕಾಮಗಾರಿಗಳನ್ನು ಕೊಟ್ಟಿಲ್ಲ ? ಮನಬಂದಂತೆ ಕಂಟ್ರಾಕ್ಟ್ ಕೊಟ್ಟು ಕೋಟ್ಯಾಂತರ ರೂಪಾಯಿಗಳ ಚೆಕ್ ಕೊಡುವುದಕ್ಕೆ ಮುಂದಾದರೆ ಸರ್ಕಾರದ ಕಾನೂನನ್ನು ಉಲ್ಲಂಘನೆ ಮಾಡಿದರೆ ಟ್ರೆಝರಿ ರಾಬರಿ ಎಂದು ಹೇಳುವುದನ್ನು ಬಿಟ್ಟರೆ ಬೇರೇನೂ ಇಲ್ಲ. ಕೋಟ್ಯಾಂತರ ರೂಪಾಯಿಗಳ ಲೂಟಿ ಮಾಡಿರತಕ್ಕದ್ದು ಯಾರೇ ಆಗಲಿ, ಕಾರ್ಪೋರೇಷನ್ ಆಗಬಹುದು, ಮುನಿಸಿಪಾಲಿಟಿಗಳು ಆಗಬಹುದು, ಮಾನ್ಯ ಸುರೇಶ್‌ಕುಮಾರ್ ಮತ್ತು ಸಿಂಧ್ಯಾರವರು ಹೇಳಿದರು. ರಾಜ್ಯದಲ್ಲಿ ಇವತ್ತು ಸರ್ಚಾರ್ಜ್ ವಸೂಲಿ ಮಾಡಿ ಜನರ ಸೌಕರ್ಯಗಳಿಗೆ ವೆಚ್ಚ ಮಾಡಬೇಕಾದಂತಹ ಹಣ ಅದು ರಸ್ತೆ ಆಗಬಹುದು, ಕುಡಿಯುವ ನೀರು ಅಗಬಹುದು, ಬೀದಿ

ದೀಪ ಆಗಬಹುದು, ಇಂಥ ಕೆಲಸಗಳಿಗೆ ಜನರಿಗೆ ಸೌಲಭ್ಯವನ್ನು ಕಲ್ಪಿಸಿ ಕೊಡಲು ಹಣ ಬಿಡುಗಡೆ ಮಾಡಬಹುದು. ಆದರೆ ಇವತ್ತು ಒಂದು ಏರಿಯಾ ಮ್ಯಾಪ್ ಮಾಡುವುದಕ್ಕೆ ಸುಮಾರು 60 ಲಕ್ಷ, 70 ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತಾರೆ. ಅದೇ ರೀತಿ ಕಾಂಗ್ರೆಸ್ ಗಿಡ ಕೀಳುವುದಕ್ಕೆ ಒಂದೂವರೆ ಕೋಟಿ ರೂಪಾಯಿಗಳು, ಹೀಗೆ ಕೋಟಿಗಟ್ಟಲೇ ಹಣ ಲೂಟಿಯಾಗುತ್ತದೆ. ಅದರ ಬೆಲೆ 25 ಪರ್ಸೆಂಟ್ ಇದ್ದರೆ ಇವರು ಒಂದುಕಾಲು ಪರ್ಸೆಂಟ್ ಜಾಸ್ತಿ ಮಾಡಿದ್ದಾರೆ. ಲಕ್ಷ ರೂಪಾಯಿಗೆ 20 ಲಕ್ಷ ರೂಪಾಯಿ ಎಂದು ಬಿಲ್ ಮಾಡಿ ಕೋಟಿಗಟ್ಟಲೆ ಹಣವನ್ನು ಸರ್ಕಾರ ಲೂಟಿ ಮಾಡಿದೆ ಎಂದು ನಾನು ಹೇಳಬಯಸುತ್ತೇನೆ. ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡುವುದೇನೆಂದರೆ, ಆಗಿರುವ ಅನ್ಯಾಯವನ್ನು ಕೂಡಲೇ ಪರಿಶೀಲಿಸಬೇಕು, ಲೋಕಾಯುಕ್ತರು ಮಾಡಿದ ಕೆಲಸವನ್ನು ಶ್ಲಾಘನೆ ಮಾಡುವುದಲ್ಲದೆ ಅವರ ವರದಿ ಬಂದತಕ್ಷಣ ಅದಕ್ಕೂ ಕೂಡ ಅಷ್ಟೇ ಪ್ರೋತ್ಸಾಹ ಕೊಡಬೇಕು. ಯಾವುದೇ ರೀತಿಯಲ್ಲಿ ಡೈರೆಕ್ಟಾಗಿ ಅಥವಾ ಇನ್‌ಡೈರೆಕ್ಟಾಗಿ ಈ ಹಗರಣಕ್ಕೆ ಒತ್ತು ಕೊಡಬಾರದು. ಇದನ್ನು ಫ್ರೀಯಾಗಿ ನಿಷ್ಪಕ್ಷಪಾತವಾಗಿ ತನಿಖೆ ಮಾಡಬೇಕೆಂದು ಸರ್ಕಾರವನ್ನು ಕೇಳುತ್ತೇನೆ. 239 ಕೋಟಿ ರೂಪಾಯಿಗಳನ್ನು ಹೆಚ್ಚುವರಿಯಾಗಿ ಡ್ರಾ ಮಾಡಿಕೊಂಡಿರುವಂಥ ಪ್ರಕರಣದಲ್ಲಿ ಯಾರ್‍ಯಾರು ಭಾಗಿಗಳಾಗಿದ್ದಾರೆ, ಎಷ್ಟರಮಟ್ಟಿಗೆ ಕಾನೂನು ಬಾಹಿರವಾಗಿ ಡ್ರಾ ಮಾಡಿದ್ದಾರೆ, ಅವರು ಯಾವ ಅಧಿಕಾರಿಯೇ ಆಗಿರಬಹುದು ; ಉದಾಹರಣೆಗೆ ಹೇಳುವುದಾದರೆ ನಮ್ಮ ರೆವಿನ್ಯೂ ಸೆಕ್ರೆಟರಿಯವರು ಲೆಟರ್ ಬರೆಯುತ್ತಾರೆ. ಇಂಥವರು ತಪ್ಪು ಮಾಡಿದ್ದಾರೆ, ಶೆಟ್ಟಿಯವರ ಮೇಲೆ ಕ್ರಿಮಿನೆಲ್ ಕೇಸ್ ಹಾಕುತ್ತೇವೆ, ಅವನು ಪ್ರೈವೇಟ್ ಪರ್ಸನ್ ಆಗಿರುವುದರಿಂದ ಸಸ್ಪೆಂಡ್ ಮಾಡುವುದಕ್ಕೆ ಬರುವುದಿಲ್ಲ ಎನ್ನುವ ಮಾತನ್ನು ಹೇಳುತ್ತಾರೆ. ಅದರೂ ಕೂಡ ಅವನ ಮೇಲೆ ಇವತ್ತಿನವರೆವಿಗೂ ಕ್ರಿಮಿನಲ್ ಕೇಸ್ ಹಾಕಲಿಲ್ಲ, ಕೇಸ್ ಹಾಕಿ ಅವನನ್ನು ತನಿಖೆ ಮಾಡಿಸಲಿಲ್ಲ, ಏನೂ ಮಾಡಲಿಕ್ಕೆ ಸಾಧ್ಯವಿಲ್ಲ ಈ ಸರ್ಕಾರಕ್ಕೆ ? ಆದ್ದರಿಂದ, ಸರ್ಕಾರದವರು ಎಷ್ಟರ ಮಟ್ಟಿಗೆ ಶಕ್ತಿಯುತವಾದ ಕೆಲಸ ಮಾಡುತ್ತೇವೆಂದು ಹೇಳಿಕೊಂಡು ಬಂದಿದ್ದಾರೆ, ಪಾರದರ್ಶಕತೆ ಎಂದು ಹೇಳಿಕೊಂಡು ಬಂದಿದ್ದಾರೆ, ಅದಕ್ಕೆ ಈಗ ತಿಲಾಂಜಲಿಯನ್ನಿಟ್ಟಿದ್ದಾರೆ. ಈ ಇಲಾಖೆಯ ಉಸ್ತುವಾರಿಯೂ ಕೂಡ ಮಾನ್ಯ ಮುಖ್ಯಮಂತ್ರಿಯವರ ಕೈಗೆ ಬರುತ್ತದೆ, ಹಣಕಾಸಿನ ಸಚಿವರು ಸಹ ಮಾನ್ಯ ಮುಖ್ಯಮಂತ್ರಿಗಳೇ ಆಗಿರುವುದರಿಂದ ಅವರದ್ದೂ ಸಹ ಇದರಲ್ಲಿ ಪಾತ್ರ ಇದೆ ಎಂದು ಹೇಳಬೇಕಾಗುತ್ತದೆ. ಅವರು ಈ ವಿಚಾರದಲ್ಲಿ ನೈಜವಾಗಿ ನಡೆಯಬೇಕೆನ್ನುವ ಆಸೆ ಇದ್ದರೆ ದಯಮಾಡಿ ಈ ಒಂದು ತನಿಖೆ ನಿಷ್ಪಕ್ಷಪಾತವಾಗಿ ನಡೆಯಬೇಕಾಗಿದ್ದರೆ, ಸಂಬಂಧಪಟ್ಟವರನ್ನು ಸಸ್ಪೆಂಡ್ ಮಾಡುವ ಮೂಲಕ ದೂರ ಇರಿಸಿ ಈ ತನಿಖೆಯನ್ನು ಮಾಡಿಸಿದರೆ ಈ ರಾಜ್ಯದ ಜನತೆಗೆ ನಿಜವಾದ ನ್ಯಾಯ ಕೊಟ್ಟಹಾಗೆ ಆಗುತ್ತದೆ, ಇಲ್ಲದಿದ್ದರೆ ದ್ರೋಹ ಮಾಡಿದ ಹಾಗೆ ಆಗುತ್ತದೆ. ಆದ್ದರಿಂದ, ಟ್ರೆಝುರಿಯಲ್ಲಾದ ಟ್ರೆಝುರಿ ಗ್ರೇಟ್ ರಾಬರಿ ಏನು ಇದೆ, ಅಲ್ಲಿ ಮೇವಿನ ಹಗರಣದಲ್ಲಿ ಯಾವುದೇ ತರಹದ ಎವಿಡೆನ್ಸ್ ಡಾಕುಮೆಂಟ್ ಇರಲಿಲ್ಲ, ಇಲ್ಲಿ ಎಲ್ಲಾ ಎವಿಡೆನ್ಸ್ ಡಾಕುಮೆಂಟ್ ಕೊಟ್ಟಿದ್ದಾರೆ, ಪತ್ರಿಕೆಗಳಲ್ಲಿ ಇವತ್ತು ರಾಜಕಾರಣಿಗಳ ಹಾಗೂ ಸರ್ಕಾರದ ಬಗ್ಗೆ ಬೀದಿಯಲ್ಲಿ ಮಾನ ಹರಾಜು ಮಾಡಿದ್ದಾರೆ. ಪತ್ರಿಕೆಗಳಲ್ಲಿ ಮಾನ್ಯ ಲೋಕಾಯುಕ್ತರು ನೀಡಿದಂಥ ಹೇಳಿಕೆಗಳನ್ನು ನೋಡಿದಾಗ ನಮಗೆ ಇವತ್ತು ಹಳ್ಳಿಕಡೆ ಹೋದರೆ ಯಾರಿಗೂ ಮೂರುಕಾಸಿನ ಗೌರವ ಇಲ್ಲ, ಇವತ್ತು ಹಳ್ಳಿಕಡೆಗೆ ರಾಜಕಾರಣಿ ಹೋದರೆ ಬಂದ್ರಪ್ಪೋ ಲೂಟಿ ಮಾಡುವುದಕ್ಕೆ ಎನ್ನುವಂತಾಗಿದೆ. ಈ

ರೀತಿಯಾಗಿ ಜನ ನಮ್ಮನ್ನು ತೀರ್ಮಾನಿಸಿದ್ದಾರೆ. ಆದ್ದರಿಂದ, ಆ ಕಳಂಕವನ್ನು ಆ ಕೆಟ್ಟ ಹೆಸರನ್ನು ತಪ್ಪಿಸಬೇಕಾದರೆ, ಮಾನ್ಯ ಮುಖ್ಯಮಂತ್ರಿಗಳು ಈ ರಾಬರಿಯನ್ನು ನಿಷ್ಪಕ್ಷಪಾತವಾಗಿ, ಎಲ್ಲಾ ವಿಚಾರವಾಗಿ ಲೋಕಾಯುಕ್ತರ ವರದಿ ಬರುವುದಕ್ಕಿಂತ ಮುಂಚಿತವಾಗಿ ಅವರೇ ತನಿಖೆ ಮಾಡಬೇಕು ಎನ್ನುವ ವಿಚಾರವನ್ನು ಇಟ್ಟುಕೊಂಡು ಸಂಬಂಧಪಟ್ಟ ವ್ಯಕ್ತಿಗಳ ಬಗ್ಗೆ ಕೂಡಲೇ ಎಲ್ಲಾ ರೀತಿಯ ಕ್ರಮ ತೆಗೆದುಕೊಂಡು ಅವರನ್ನು ಸಸ್ಪೆಂಡ್ ಮಾಡಬೇಕು. ಮಂತ್ರಿಮಂಡಲದಿಂದ ಅವರನ್ನು ಕೈಬಿಡಬೇಕು. ಸರ್ಕಾರ ಕಳೆದ ಎರಡೂವರೆ ವರ್ಷಗಳಲ್ಲಿ ಇದೊಂದೇ ವಿಚಾರ ಅಲ್ಲ, ಅನೇಕ ವಿಚಾರಗಳಲ್ಲಿ, ತಾಲ್ಲೂಕು ಪಂಚಾಯಿತಿ, ಟೌನ್ ಪಂಚಾಯಿತಿ, ಡಿಸಿಸಿ ಬ್ಯಾಂಕ್, ಇದು ಯಾವುದೂ ತೆಗೆದುಕೊಂಡರೂ ಇಲ್ಲಿ ಹಗರಣಗಳ ಸರಮಾಲೆಯೇ ಇದೆ. ಇದರ ಜೊತೆಗೆ ಜಮೀನು ಮಾರಾಟ ತೆಗೆದುಕೊಂಡರೂ ಕೂಡ ಅಲ್ಲಿ ಕೂಡ ಹಸ್ತಕ್ಷೇಪ ಇದೆ. ಇಲ್ಲಿ ಹಗರಣವಾಗಿದ್ದು ಸರ್ಕಾರಕ್ಕೆ ಕೋಟ್ಯಾಂತರ ರೂಪಾಯಿಗಳ ಲಾಸ್ ಆಗಿದೆ. ದಯಮಾಡಿ ಇದನ್ನೆಲ್ಲಾ ಮಾನ್ಯ ಮುಖ್ಯಮಂತ್ರಿಗಳು ಅರ್ಥ ಮಾಡಿಕೊಂಡು, ಅವರೇ ಹಣಕಾಸಿನ ಇಲಾಖೆಯನ್ನು ತಮ್ಮ ಕೈಯಲ್ಲಿಟ್ಟುಕೊಂಡು ಇವತ್ತೇನು ಕೆಲಸ ಮಾಡಲಿಕ್ಕೆ ಹೊರಟಿದ್ದಾರೆ, ಇದಕ್ಕೆಲ್ಲಾ ನಾವೇ ಹೊಣೆ ಎಂದು ಅವರು ತೀರ್ಮಾನ ಮಾಡಿಕೊಳ್ಳಬೇಕು. ಇದಕ್ಕೆ ಬೇರೆಯವರನ್ನು ಹೊಣೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ, ಕಾರಣ ಈ ರಾಜ್ಯದ ಮುಖ್ಯಮಂತ್ರಿ ಎಂದರೆ ಈ ರಾಜ್ಯದ ನಿಜವಾದ ಮೊಟ್ಟಮೊದಲ ಪ್ರಜೆ, ಅವರಿಗೆ ಅಧಿಕಾರ ಇದೆ, ಎಲ್ಲಾ ಇಲಾಖೆಯ ಅಧಿಕಾರಿಗಳು ಅವರ ಕೈ ಕೆಳಗೆ ಬರುತ್ತಾರೆ, ಅವರು ಏನು ರಾಜ್ಯಪಾಲರ ಭಾಷಣದಲ್ಲಿ ಪಾರದರ್ಶಕತೆ ಆಡಳಿತ ಎಂದು ಹೇಳಿಕೊಂಡು ಬಂದಿದ್ದಾರೆ. ಅದನ್ನು ಅವರು ಪರಿಪಾಲನೆ ಮಾಡಬೇಕು ; ಇವತ್ತು ಆಗಿರುವ ಅನ್ಯಾಯದ ಬಗ್ಗೆ ಕೂಲಂಕಷವಾಗಿ ಪರಿಶೀಲನೆ ಮಾಡಿ ತಪ್ಪಿತಸ್ಥರ ಮೇಲೆ ಕೂಡಲೇ ಕ್ರಮ ತೆಗೆದುಕೊಳ್ಳಬೇಕು. ಈ ರಾಜ್ಯದಲ್ಲಿ ಹಿಂದೆಂದೂ ಕಾಣದಂಥ ಅನ್ಯಾಯ ಆಗಿದೆ. ಇದೊಂದು ಉದಾಹರಣೆಯಾಗಿ ಉಳಿದುಕೊಳ್ಳುತ್ತದೆ, ದಯಮಾಡಿ ಮಾನ್ಯ ಮುಖ್ಯಮಂತ್ರಿಗಳು ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳಬೇಕು. ರಾಜ್ಯ ಹಾಗೂ ರಾಷ್ಟ್ರದಲ್ಲಿರುವ ನಮ್ಮ ಜೆಡಿ (ಎಸ್) ಯಾವುದೇ ನಾಯಕರು ಹಿಂದೆ ಇಂಥ ಹಗರಣವನ್ನು ಮಾಡುವುದಕ್ಕೆ, ರಾಜ್ಯವನ್ನು ಮಾರುವುದಕ್ಕೆ ಅವಕಾಶವನ್ನು ಕೊಟ್ಟಿರಲಿಲ್ಲ, ಟ್ರಝುರಿ ರಾಬರಿ ಮಾಡುವುದಕ್ಕೆ ಅವಕಾಶ ಕೊಟ್ಟಿರಲಿಲ್ಲ, ಆದರೆ ಈ ಸರ್ಕಾರ ಮೂರು ವರ್ಷಗಳಲ್ಲಿ ಟ್ರಝುರಿ ರಾಬರಿ ಮಾಡಿಸಿದೆ ಎನ್ನುವ ಮಾತನ್ನು ತಮಗೆ ಹೇಳುತ್ತೇನೆ. ಇನ್ನು ಮುಂದೆ ಮುಖ್ಯಮಂತ್ರಿಗಳು ಈ ರೀತಿ ಆಗದಂತೆ ತಕ್ಕ ಬಂದೋಬಸ್ತ್ ಮಾಡಬೇಕು, ಇದಕ್ಕೆ ತಕ್ಕ ಕಾನೂನು ಕ್ರಮ ತೆಗೆದುಕೊಳ್ಳುವ ಮೂಲಕ ಈ ರಾಜ್ಯವನ್ನು ಹಾಗೂ ರಾಜ್ಯದ ಆಸ್ತಿಯನ್ನು ಮತ್ತು ರಾಜ್ಯ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಭೇಕೆಂದು ನಾನು ಒತ್ತಾಯಿಸಿ ನನ್ನ ಎರಡು ಮಾತುಗಳನ್ನು ಮುಕ್ತಾಯ ಮಾಡುತ್ತೇನೆ.

ಶ್ರೀ ಎ. ರಾಮದಾಸ್ (ಕೃಷ್ಣರಾಜ) :- ಮಾನ್ಯ ಅಧ್ಯಕ್ಷರೆ, ಈಗಾಗಲೇ ಸಿ.ಎಂ.ಸಿಗಳ ಅವ್ಯವಹಾರಕ್ಕೆ ಸಂಬಂಧಪಟ್ಟಹಾಗೆ ವಿರೋಧಪಕ್ಷದ ನಾಯಕರು, ಮಾನ್ಯ ಸುರೇಶ್‌ಕುಮಾರ್ ರವರು, ಮಾನ್ಯ ಪಿ.ಜಿ.ಆರ್. ಸಿಂಧ್ಯರವರು ಬಹಳ ವಿವರವಾಗಿ ವಿಚಾರಗಳನ್ನು ಹೇಳಿದ್ದಾರೆ. ಅವರು ಹೇಳಿದಂಥ ಅಂಶಗಳನ್ನು ಬಿಟ್ಟು ಕೆಲವು ಅಂಶಗಳನ್ನು ನಾನು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರಬಯಸುತ್ತೇನೆ.

**ಡಾ॥ ಭಾರತಿ ಶಂಕರ್** :- ಮಾನ್ಯ ಅಧ್ಯಕ್ಷರೆ, ಮೈಸೂರು ಭೂ ಹಗರಣಕ್ಕೆ ಸಂಬಂಧಪಟ್ಟಹಾಗೆ ಹೇಳಿದರೆ ಸಾರ್ವಜನಿಕರಿಗೆ ಬಹಳ ಉಪಯೋಗವಾಗುತ್ತದೆ.

**ಅಧ್ಯಕ್ಷರು** :- ಗಂಭೀರವಾಗಿ ಚರ್ಚೆ ನಡೆಯುತ್ತಿದೆ, ಮಧ್ಯೆ ಎಂಥದ್ದು ?

**ಶ್ರೀ ಎ. ರಾಮದಾಸ್** :- ಈ ಹಗರಣಕ್ಕೆ ಸಂಬಂಧಪಟ್ಟಹಾಗೆ 1994-95ರಿಂದ ಇಲ್ಲಿಯವರೆಗೂ ಕೂಡ, ಈ ಸರ್ಕಾರ ಬಂದತಕ್ಷಣವೇ ಹಗರಣವಾಯಿತು ಎಂದಲ್ಲ, ಇದಕ್ಕೆ ಸಂಬಂಧಪಟ್ಟಹಾಗೆ ಪ್ರಮುಖವಾದ ಅಂಶ, ಹಿಂದೆ ನೋಟಿಫೈಡ್ ಏರಿಯಾ ಇದ್ದಂಥ ಸಂದರ್ಭದಲ್ಲಿ ಸರ್ಕಾರ ಆದೇಶವನ್ನು ಹೊರಡಿಸಿ, ಆ ಪ್ರದೇಶದಲ್ಲಿ ಆಗುವಂಥ ನೋಂದಣಿ ಏನು ಇತ್ತು, ಅದಕ್ಕೆ ಒಂದು ಪರ್ಸೆಂಟ್ ಮಾತ್ರ ಸರ್ಚ್‌ಚಾರ್ಜ್ ಕಲೆಕ್ಟ್ ಮಾಡುವ ವ್ಯವಸ್ಥೆಯಿತ್ತು. ಆದರೆ ಇದರ ಮೇಲೆ ಶೇಕಡ ಮೂರರಷ್ಟು ಸರ್ಚ್‌ಚಾರ್ಜ್‌ನ್ನು ಕಲೆಕ್ಟ್ ಮಾಡುವ ಕೆಲಸ ಪ್ರಾರಂಭವಾಯಿತು, 1998ರವರೆವಿಗೂ ಅನಧಿಕೃತವಾಗಿ ಸುಮಾರು ಆರು ವರ್ಷಗಳ ಕಾಲ ಶೇಕಡ ಎರಡು ಭಾಗ ಸರ್ಚ್‌ಚಾರ್ಜ್‌ನ್ನು ಲಕ್ಷಾಂತರ ಜನಗಳಿಂದ ಕಲೆಕ್ಟ್ ಮಾಡಿದ್ದಾರೆ. ಅದೂ ಕೂಡ ಕಾನೂನುಬಾಹಿರ ಎಂದು ಗೊತ್ತಾದಮೇಲೂ 1998ರ ಅಕ್ಟೋಬರ್‌ವರೆವಿಗೂ ಈ ವಿಚಾರ ಸರ್ಕಾರದ ಗಮನಕ್ಕೆ ಬಂದರೂ ಆ ಜನಗಳ ಮೇಲೆ ಹೊರೆಯನ್ನು ಏರಿಸುವಂಥ ಕೆಲಸವಾಯಿತು. ಕಾನೂನಿನ ಪ್ರಕಾರ ಬಂದು ಪರ್ಸೆಂಟ್ ಕೊಡಬೇಕು. ಸರ್ಚ್‌ಚಾರ್ಜ್‌ನ್ನು ಆಯಾಯ ಸ್ಥಳೀಯ ಸಂಸ್ಥೆಗಳಿಗೆ ನೀಡುವಂಥ ಕೆಲಸವಾಯಿತು. ಒಂದು ಪರ್ಸೆಂಟ್ ಕೊಡಬೇಕು ಎಂದು ಏನು ಇತ್ತೋ ಅದನ್ನು 1998ರಲ್ಲಿ ಅಂದಿನ ಐಜಿಆರ್ ಯಾರು ಇದ್ದರು ಅವರು ಮತ್ತೆ ಶೇಕಡ 2 ಸರ್ಚ್‌ಚಾರ್ಜ್‌ನ್ನು ಯಾರು ಕಲೆಕ್ಟ್ ಮಾಡಿದ್ದರೋ ಅದನ್ನು ಸಿಎಂಸಿ ಅದಮೇಲೆ ಅಡಿಷನಲ್ ಎರಡು ಪರ್ಸೆಂಟ್ ಕೊಡಬೇಕಾಗಿದೆ, ಆ ಹಣವನ್ನು ಬಿಡುಗಡೆ ಮಾಡಿ ಎಂದು ಪತ್ರವನ್ನು ಕೊಟ್ಟರು. ಅಲ್ಲಿಂದಲೇ ಪ್ರಾರಂಭವಾಯಿತು ಈ ಹಗರಣದ ಮೊದಲನೆಯ ಓಂಕಾರ. ಆ ಪತ್ರದ ಆಧಾರದ ಮೇಲೆ ಕೆಲವು ಸಿಎಂಸಿಗಳವರು ತಮಗೆ ಬರಬೇಕಾದ ಒಂದು ಪರ್ಸೆಂಟ್ ಸರ್ಚ್‌ಚಾರ್ಜ್‌ನ್ನು ನಮಗೆ ಅಡಿಷನಲ್ ಸ್ಟಾಂಪ್ ಡ್ಯೂಟಿಯಾಗಿ ಬಿಡುಗಡೆ ಮಾಡಿ ಎಂದು 1998ರಲ್ಲಿ ಪ್ರಾರಂಭಿಸಿದರು. ಇಲ್ಲಿಂದ ಪ್ರಾರಂಭವಾದ ಹಗರಣಕ್ಕೆ ಮತ್ತೊಂದು ರೂಪಕೊಟ್ಟಿದ್ದು ಈ ಸರ್ಕಾರ ಅಧಿಕಾರಕ್ಕೆ ಬಂದಮೇಲೆ. ಒಂದು ಪರ್ಸೆಂಟ್ ಅಡಿಷನಲ್ ಬಂದಂಥ ಸರ್ಚ್‌ಚಾರ್ಜ್ ಅನ್ನು ಸಸ್‌ಪೆನ್ಸ್ ಅಕೌಂಟ್ಸ್‌ನಲ್ಲಿ ಸುಮಾರು 200 ಕೋಟಿ ರೂಪಾಯಿಗಳ ಹಣ ಇದೆ, ಅದನ್ನು ಹಂತಹಂತವಾಗಿ ಬಿಡುಗಡೆ ಮಾಡುವ ಸಲುವಾಗಿ, ಕೇವಲ ಒಂದು ಇಲಾಖೆ ಮಾತ್ರ ಭಾಗಿಯಾಗಿಲ್ಲ. ಸುಮಾರು ನಾಲ್ಕು ಇಲಾಖೆಗಳು ಇದಕ್ಕೆ ಸಹಭಾಗಿತ್ವ ಇದೆ. ಇಲ್ಲಿ ಪ್ರಮುಖವಾಗಿ ಒಂದು ಭಾಗ ಸರ್ಕಾರದ ಹಣ ಖರ್ಚಾಗಿದೆ, ಅದರೆ ಐದು ವರ್ಷಗಳ ಕಾಲದಲ್ಲಿ ಏನೂ ಗೊತ್ತಿಲ್ಲದ ಮುಗ್ಧರಿಂದ, ಲಕ್ಷಾಂತರ ಜನಗಳಿಂದ ಮೂರು ಪರ್ಸೆಂಟ್ ಅಂದರೆ ಅಡಿಷನಲ್ ಎರಡು ಪರ್ಸೆಂಟ್ ಹಣವನ್ನು, ಸುಮಾರು 200 ಕೋಟಿ ರೂಪಾಯಿಗಳಷ್ಟು ಹಣವನ್ನು ಕಲೆಕ್ಟ್ ಮಾಡುವ ಕೆಲಸ ಸರ್ಕಾರದಿಂದ ಆಗಿದೆ ಎನ್ನುವ ನೋವು ಎಲ್ಲರ ಮನಸ್ಸನ್ನು ಕಾಡುತ್ತಿದೆ. ದಿನಾಂಕ 28-10-98ರಲ್ಲಿ ಸರ್ಕಾರ ಒಂದು ಆಜ್ಞೆ ಹೊರಡಿಸಿತು. ಆ ಆಜ್ಞೆ ಬಂದ ನಂತರದಲ್ಲೂ ಕೂಡ ಶೇಕಡ 2 ಭಾಗ ಸರ್ಚ್‌ಚಾರ್ಜ್‌ನ್ನು ಕಲೆಕ್ಟ್ ಮಾಡಬೇಕೆನ್ನುವ ಅದೇಶವನ್ನು ಸರ್ಕಾರ ಕೊಡಲಿಲ್ಲ. ನಂತರದಲ್ಲೂ ಕೂಡ ಶೇಕಡ 3 ಭಾಗ ಸರ್ಚ್‌ಚಾರ್ಜ್‌ನ್ನು ಕಲೆಕ್ಟ್

ಮಾಡುವ ವ್ಯವಸ್ಥೆಯಾಯಿತು. ಮಾನ್ಯ ಸಿಂಧ್ಯಾರವರು ಆಗಲೇ ಹೇಳಿದರು, 1994 ರಿಂದ 2001-02 ಸಾಲಿನವರೆಗೆ ಬರಬೇಕಾದ ಅಡಿಷನಲ್ ಸ್ಟಾಂಪ್ ಡ್ಯೂಟಿ 57.30 ಕೋಟಿ ರೂಪಾಯಿಗಳು, ಆದರೆ ಅಡಿಷನಲ್ ಸ್ಟಾಂಪ್ ಡ್ಯೂಟಿಯನ್ನು ಬೆಂಗಳೂರು ಅರ್ಬನ್ ಡಿಸ್ಟ್ರಿಕ್ಟ್‌ನಿಂದ ಕೊಟ್ಟಿರುವುದು 297.16 ಕೋಟಿ ರೂಪಾಯಿಗಳು. ಇವತ್ತು ಏನು ಅಡಿಷನಲ್ ಆಗಿ 239.85 ಕೋಟಿ ರೂಪಾಯಿಗಳಷ್ಟು ಎಕ್ಸೆಸ್ ಪೇಮೆಂಟ್ ಆಗಿದೆ ಎನ್ನತಕ್ಕಂಥ ವಿಚಾರ ನನಗೆ ಸ್ಟೇಟ್ ಅಕೌಂಟ್ಸ್ ಡಿಪಾರ್ಟ್‌ಮೆಂಟ್‌ನಿಂದ ತಿಳಿಯಿತು. ನಾನು ತಮ್ಮ ಮೂಲಕ ಸರ್ಕಾರವನ್ನು ಕೇಳುವುದೇನೆಂದರೆ, ಇದು ಕೇವಲ ಒಂದು ಇಲಾಖೆಯಿಂದ ಆಗತಕ್ಕಂಥದ್ದಲ್ಲ. ಈ ಹಣವನ್ನು ಆಯಾಯ ಸ್ಥಳೀಯ ಸಂಸ್ಥೆಗಳ ಕಮೀಷನರ್‌ರವರು ತಯಾರು ಮಾಡಿದ ತಕ್ಕಂಥ ಬಿಲ್‌ಗೆ ಡಿಸ್ಟ್ರಿಕ್ಟ್ ರಿಜಿಸ್ಟ್ರಾರ್‌ರವರು ಸಹಿ ಮಾಡಿ ಸಂಬಂಧಪಟ್ಟ ಡೆಪ್ಯುಟಿ ಡೈರೆಕ್ಟರ್ ಟ್ರೆಜರಿಯವರಿಂದ ಪೇಮೆಂಟ್ ಆಗಿದೆ. ಇದರಲ್ಲಿ ಎಲ್ಲರ ಇನ್‌ವಾಲ್ವ್‌ಮೆಂಟ್ ಇದೆ ಎನ್ನತಕ್ಕಂಥ ವಿಚಾರ ಇದರಿಂದ ತಿಳಿಯುತ್ತದೆ. ಈ ಸಂದರ್ಭದಲ್ಲಿ ಒಂದು ಪ್ರಮುಖವಾದಂಥ ಅಂಶವನ್ನು ತಮ್ಮ ಗಮನಕ್ಕೆ ತರುವುದಕ್ಕೆ ನಾನು ಇಷ್ಟಪಡುತ್ತೇನೆ. ಅದೇನೆಂದರೆ, 69 ಓಚರ್‌ಗಳಿಗೆ ಸಂಬಂಧಪಟ್ಟಂತೆ ಸುಮಾರು 111.69 ಕೋಟಿ ರೂಪಾಯಿಗಳು ಒಂದೇ ದಿವಸದಲ್ಲಿ ಬಿಡುಗಡೆಯಾಗಿದೆ. ಯಾವ ರೀತಿಯಾದ ವ್ಯವಸ್ಥೆ ಇರಬಹುದೆಂದು ಇದರಿಂದ ತಿಳಿಯುತ್ತದೆ. ಇವತ್ತಿನದಿವಸ ಸಿಎಂಸಿಗಳು ಕೇವಲ ಟ್ರೆಜರಿಗೆ ಸಂಬಂಧಪಟ್ಟಿರುವುದಿಲ್ಲ. ಹಾಗೆಯೇ ಎರಡನೇ ಕಂತಿನ ರೂಪದಲ್ಲಿ ಮತ್ತೆ 80.14 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡತಕ್ಕಂಥ ಸಂದರ್ಭದಲ್ಲಿ ಟ್ರೆಜರಿಯಿಂದ ಆರ್ಥಿಕ ಇಲಾಖೆ ಮತ್ತು ಕಂದಾಯ ಇಲಾಖೆಗೆ ಅಪ್ರೂವಲ್‌ಗೆ ಕಳುಹಿಸಿಕೊಟ್ಟರು. ಇದಕ್ಕೆ ಆರ್ಥಿಕ ಇಲಾಖೆ ಮತ್ತು ಕಂದಾಯ ಇಲಾಖೆಯ ಅನುಮತಿ ಸಿಕ್ಕಿದೆಯೇ ? ಈ ವಿಷಯವನ್ನು ಸರ್ಕಾರದವರು ಹೇಳಬೇಕಾಗಿದೆ. ಇವತ್ತಿನ ದಿವಸ ಸ್ವಯಂ ಸನ್ಮಾನ್ಯ ಮುಖ್ಯಮಂತ್ರಿಯವರೇ ಆರ್ಥಿಕ ಇಲಾಖೆಯ ಜವಾಬ್ದಾರಿಯನ್ನು ಹೊಂದಿರುವುದರಿಂದ, ಹೆಚ್ಚುವರಿಯಾಗಿ ಕೊಟ್ಟಿರತಕ್ಕಂಥ 80.14 ಕೋಟಿ ರೂಪಾಯಿಗಳ ಗ್ರಾಂಟ್‌ಗೆ ಒಪ್ಪಿಗೆ ಕೊಡಲಾಗಿದೆಯೇ ಎನ್ನತಕ್ಕಂಥಾದ್ದನ್ನು ಈ ಸಂದರ್ಭದಲ್ಲಿ ಸ್ಪಷ್ಟಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ. ಹಾಗೆಯೇ ಮಾರ್ಚ್ 2000 ರಿಂದ ಆಗಸ್ಟ್ 2000 ವರೆಗಿನ ಅಡಿಷನಲ್ ಸ್ಟಾಂಪ್ ಡ್ಯೂಟಿಗೆ ಸಂಬಂಧಪಟ್ಟ ಸುಮಾರು 76 ಕೋಟಿ ರೂಪಾಯಿಗಳನ್ನು ರಿಲೀಸ್ ಮಾಡಬೇಕೆಂದು ಟ್ರೆಜರಿಯವರಿಗೆ ತಿಳಿಸಲಾಗಿತ್ತು. ಆದರೆ, ಹಣ ಇಲ್ಲದೇ ಇರತಕ್ಕಂಥ ಸಂದರ್ಭದಲ್ಲಿ ಹಣವನ್ನು ಎಲ್ಲಿಂದ ತರುವುದು ? ಇರುವಂಥ ಹಣವನ್ನು ರಿಲೀಸ್ ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ಟ್ರೆಜರಿಯಿಂದ ಸರ್ಕಾರಕ್ಕೆ ಒಂದು ಮನವಿ ಬಂತು. ಆದರೆ, ಆರ್.ಬಿ.ಐ ರಾಜ್ಯದ ಡೆಪಾಸಿಟ್ ಹಣದಲ್ಲಿ ಸುಮಾರು 76 ಕೋಟಿ ರೂಪಾಯಿಗಳನ್ನು ರಿಲೀಜ್ ಮಾಡಿದೆ. ಅಂದರೆ, ರಾಜ್ಯದ ಅಕೌಂಟ್‌ನಲ್ಲಿರತಕ್ಕಂಥ 76 ಕೋಟಿ ರೂಪಾಯಿಗಳನ್ನು ರಿಲೀಜ್ ಮಾಡಲಿಕ್ಕೆ ಯಾರು ಆಜ್ಞೆ ಮಾಡಿದರು ? ಇದಕ್ಕೆ ಸರ್ಕಾರದ ಮುಖ್ಯ ಕಾರ್ಯದರ್ಶಿಯವರು ಮತ್ತು ಆರ್ಥಿಕ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರು ಹಾಗೂ ಇನ್ನು ಯಾವ್ಯಾವ ಇಲಾಖೆಯ ಅನುಮತಿ ಸಿಕ್ಕಿದೆ ಎನ್ನತಕ್ಕಂಥಾದ್ದನ್ನು ರಾಜ್ಯ ಸರ್ಕಾರ ಈ ಸಂದರ್ಭದಲ್ಲಿ ತಿಳಿಸಬೇಕು. ಇನ್ನೊಂದು ಪ್ರಮುಖ ಅಂಶ ಏನೆಂದರೆ, ಸುಮಾರು 7 ವರ್ಷಗಳಿಂದ ಸಿಎಂಸಿಗಳಲ್ಲಿ ಸ್ಟಾಂಪ್ ಡ್ಯೂಟಿಯಿಂದ ರೆವಿನ್ಯೂ ಕಲೆಕ್ಷನ್ ಸುಮಾರು 256.83 ಕೋಟಿ ರೂಪಾಯಿಗಳು ಬಂದಿದೆ. ಅಂದರೆ, ಅಲ್ಲಿಂದ ಹೆಚ್ಚುವರಿಯಾಗಿ 653.66 ಕೋಟಿ ರೂಪಾಯಿಗಳು ಬಂದಿದೆ. ಇದರಿಂದ,

7 ವರ್ಷಗಳಲ್ಲಿ 155 ಪರ್ಸೆಂಟ್‌ನಷ್ಟು ಸ್ಟಾಂಪ್ ಡ್ಯೂಟಿ ಜಾಸ್ತಿಯಾಗಿದೆ. 155 ಪರ್ಸೆಂಟ್‌ನಷ್ಟು ಜಾಸ್ತಿಯಾಗಿರತಕ್ಕಂಥ ಆಧಾರದ ಮೇಲೆ ಇವರಿಗೆ ಹೆಚ್ಚುವರಿಯಾಗಿ ಇನ್ನು ಸ್ಟಾಂಪ್ ಡ್ಯೂಟಿ ಬರಬೇಕಾಗಿತ್ತು. ಆದರೆ, ಅಡಿಷನಲ್ ಆಗಿ ಸ್ಟಾಂಪ್ ಡ್ಯೂಟಿ ಟ್ರಾನ್ಸ್‌ಫರ್ ಆಗಿರತಕ್ಕಂಥಾದ್ದು ಎಷ್ಟು ಎಂದರೆ, ಕೇವಲ 25.46 ಕೋಟಿ ರೂಪಾಯಿಗಳು. ಅಂದರೆ, 247.6 ಕೋಟಿ ರೂಪಾಯಿಗಳು ಎಕ್ಸೆಸ್ ಆಗಿದೆ. ಒಟ್ಟಾರೆಯಾಗಿ 873 ಪರ್ಸೆಂಟ್‌ನಷ್ಟು ಎಕ್ಸೆಸ್ ಕೊಟ್ಟಿದ್ದಾರೆ ಎಂದರೆ, ಇವತ್ತಿನ ದಿವಸ ಸರ್ಕಾರದಲ್ಲಿ ಅಕೌಂಟಿಂಗ್ ಎಲ್ಲಿದೆ ? 155 ಪರ್ಸೆಂಟ್‌ನಷ್ಟು ರೆವಿನ್ಯೂ ಬಂದಿದ್ದರೆ, 873 ಪರ್ಸೆಂಟ್‌ನಷ್ಟು ಅಡಿಷನಲ್ ಆಗಿ ಸ್ಟಾಂಪ್ ಡ್ಯೂಟಿ ಕೊಟ್ಟಿರತಕ್ಕಂಥಾದ್ದು ಸರ್ಕಾರದ ಗಮನಕ್ಕೆ ಬಂದಿದೆಯೋ ಅಥವಾ ಇಲ್ಲವೋ ಎನ್ನತಕ್ಕಂಥಾದ್ದನ್ನು ಹೇಳಬೇಕು. ಇದಕ್ಕೆ ಸಂಬಂಧಪಟ್ಟಂತೆ ನಾನು ಈಗಾಗಲೇ ಹೇಳಿದ ಹಾಗೆ, ಬಹಳಷ್ಟು ಅವ್ಯವಹಾರ ಆಗಿರತಕ್ಕಂಥಾದ್ದು ಆರ್ಥಿಕ ಇಲಾಖೆ ಮತ್ತು ಕಂದಾಯ ಇಲಾಖೆ ಹಾಗೂ ಐಜಿಆರ್‌ರವರ ಗಮನಕ್ಕೆ ಬಂದಿದೆ. ಆದ್ದರಿಂದ ಇದರಲ್ಲಿ ಯಾರ್‍ಯಾರ ಭಾಗಿತ್ವ ಇದೆ ಎನ್ನತಕ್ಕಂಥಾದ್ದನ್ನು ತಮ್ಮ ಮೂಲಕ ಸರ್ಕಾರದವರಲ್ಲಿ ಕೇಳುವುದಕ್ಕೆ ಇಷ್ಟಪಡುತ್ತೇನೆ. ಈ ಸಂದರ್ಭದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಯವರು ಇಲ್ಲ. ಆದರೂ ಕೂಡ ಒಂದು ಪ್ರಮುಖ ಅಂಶವನ್ನು ತಮ್ಮ ಮೂಲಕ ಹೇಳುವುದಕ್ಕೆ ಇಷ್ಟಪಡುತ್ತೇನೆ. ರಾಜ್ಯದಲ್ಲಿರುವ ಲೋಕಲ್ ಬಾಡಿಗಳ ಆಡಿಟ್ ಮಾಡುವುದಕ್ಕೋಸ್ಕರ ಕಾನೂನು ಪ್ರಕಾರ ಸಿ.ಎ.ಜಿ. ರವರಿಗೆ ಇವತ್ತಿನವರೆಗೆ ಪರ್ಮಿಷನ್ ಕೊಟ್ಟಿಲ್ಲವೆಂದು ಈ ಸಂದರ್ಭದಲ್ಲಿ ಇಲ್ಲಿರತಕ್ಕಂಥ ಸನ್ಮಾನ್ಯ ಮೇಲ್ಮನೆಯ ನಾಯಕರ ಗಮನಕ್ಕೆ ತರುತ್ತೇನೆ. 50 ವರ್ಷದ ಇತಿಹಾಸದಲ್ಲಿ ಇದಕ್ಕೆ ಸಂಬಂಧಪಟ್ಟಂತೆ ಮಾನ್ಯ ಮುಖ್ಯಮಂತ್ರಿಯವರಿಗೆ ಮೊದಲನೆಯ ಬಾರಿಗೆ ದೂರುಗಳು ಬಂದವು ಹಾಗೆಯೇ ಇದರ ಬಗ್ಗೆ ಅರಿವು ಕೂಡ ಅವರಿಗೆ ಆಯಿತು. ಈ ಸಂದರ್ಭದಲ್ಲಿ ನಾನು ಸನ್ಮಾನ್ಯ ಮುಖ್ಯಮಂತ್ರಿಯವರನ್ನು ಹಾಗೂ ಅರ್ಬನ್ ಇಲಾಖೆಯ ಕಾರ್ಯದರ್ಶಿಯವರಾದ ಸನ್ಮಾನ್ಯ ಕೃಷ್ಣನ್‌ರವರನ್ನು ಅಭಿನಂದಿಸುತ್ತೇನೆ. ಏಕೆಂದರೆ, ಅರ್ಬನ್ ಡೆವೆಲಪ್‌ಮೆಂಟ್ ಇಲಾಖೆಯ ಕಾರ್ಯದರ್ಶಿಯವರು ಒಂದು ಪತ್ರವನ್ನು ಬರೆದರು. ಪತ್ರದ ಸಂಖ್ಯೆ ಏನೆಂದರೆ, ಸಂಖ್ಯೆ : ಯುಡಿಡಿ-ಟಿಎಂಕೆ 2002, ದಿನಾಂಕ 30.04.2000 ರಂದು ಸಿಎಜಿರವರಿಗೆ ಪತ್ರ ಬರೆದು ಏನು ಹೇಳಿದ್ದಾರೆ ಎಂದರೆ, 7 ಸಿಎಂಸಿಗಳಿಗೆ ಸಂಬಂಧಪಟ್ಟಂತೆ ಸೆಂಟ್ರಲ್ ಪ್ರಿನ್ಸಿಪಲ್ ಆಡಿಟರ್ ಜನರಲ್‌ರವರಿಂದ ತನಿಖೆ ಮಾಡಿಸಿ ವರದಿ ಕೊಡಬೇಕೆಂದು ತಿಳಿಸಿದರು. ಮೊಟ್ಟಮೊದಲಬಾರಿಗೆ ಜೂನ್ 3ನೇ ತಾರೀಖಿನ ದಿವಸದಿಂದ ಕೆ.ಆರ್. ಪುರಂ ಸಿಎಂಸಿಗೆ ಸಂಬಂಧಪಟ್ಟಂತೆ ಆಡಿಟ್ ಪ್ರಾರಂಭವಾಯಿತು. ಅಲ್ಲಿ ಆಡಿಟ್ ಪ್ರಾರಂಭವಾದ ನಂತರವೇ ಸಿಎಜಿರವರು ತಮ್ಮ ಫೈಂಡಿಗ್ಸ್‌ನ್ನು ಸರ್ಕಾರಕ್ಕೆ ಈಗಾಗಲೇ ಮಧ್ಯಂತರ ವರದಿಯ ರೂಪದಲ್ಲಿ ಕಳುಹಿಸಿಕೊಟ್ಟಿದ್ದಾರೆ. ಅವರ ಒಂದು ಅಬ್ಜರ್‌ವೇಷನ್ ಪ್ರಕಾರ ಎಲೆಕ್ಟ್ರಿಕಲ್ ಗೂಡ್ಸ್ ಪರ್ಚೇಸ್‌ನಲ್ಲಿ ಸುಮಾರು 19.31 ಕೋಟಿ ರೂಪಾಯಿಗಳ ಅವ್ಯವಹಾರವಾಗಿದೆ ಎನ್ನತಕ್ಕಂಥಾದ್ದನ್ನು ವರದಿಯಲ್ಲಿ ತಿಳಿಸಿದ್ದಾರೆ. 1997-1998 ಮತ್ತು 1998-1999ನೇ ಸಾಲಿನಲ್ಲಿ ಎಲೆಕ್ಟ್ರಿಕಲ್ ಗೂಡ್ಸ್ ಪರ್ಚೇಸ್ ಮಾಡಿರತಕ್ಕಂಥಾದ್ದು ಕೇವಲ 26 ಲಕ್ಷ ರೂಪಾಯಿಗಳು. ಆದರೆ, 1999-2000ನೇ ಸಾಲಿನಲ್ಲಿ 2.67 ಕೋಟಿ ರೂಪಾಯಿಗಳಷ್ಟು ಪರ್ಚೇಸ್ ಮಾಡಿದ್ದಾರೆ. ಹಾಗೆಯೇ 2000-2001ನೇ ಸಾಲಿನಲ್ಲಿ 8.79 ಕೋಟಿ ರೂಪಾಯಿಗಳಷ್ಟು ಪರ್ಚೇಸ್ ಮಾಡಿದ್ದಾರೆ. ಹಾಗೆಯೇ 2001-2002ನೇ ಸಾಲಿನಲ್ಲಿ 7.57 ಕೋಟಿ ರೂಪಾಯಿಗಳಷ್ಟು ಪರ್ಚೇಸ್ ಮಾಡಿದ್ದಾರೆ. ಮಾನ್ಯ ಅಧ್ಯಕ್ಷರೆ, ನಿಜವಾದ

ಸಮಸ್ಯೆ ಇಲ್ಲಿಂದ ಪ್ರಾರಂಭವಾಗಿದೆ. ಲೋಕಾಯುಕ್ತಾರವರು ಕೆ.ಆರ್. ಪುರಂ ಸಿಎಂಸಿ ರೈಡ್ ಮಾಡುವುದಕ್ಕೆ ಮೊದಲೇ ಸಿಎಜಿರವರು ಅವರು ಕೆ.ಆರ್. ಪುರಂಗೆ ಹೋಗಿ ಪರಿಶೀಲನೆ ಮಾಡಿದಾಗ ರಾಮಮೂರ್ತಿನಗರ ಮತ್ತು ತಂಬುಜೆಟ್ಟಿ ಪಾಳ್ಯಗಳಲ್ಲಿ ಇರತಕ್ಕಂಥ ರಸ್ತೆಗಳಲ್ಲಿ ಲೈಟಿಂಗ್ಸ್ ಮತ್ತು ಪೋಲ್‌ಗಳನ್ನು ಹಾಕಲಾಗಿದೆ ಎಂದು ರೆಕಾರ್ಡ್ಸ್‌ನಲ್ಲಿತ್ತು. ಈ ಅಂಶವನ್ನು ಅವರು ನೋಡಿದ ಮೇಲೆ ಸದರಿ ಸ್ಥಳಕ್ಕೆ ಭೇಟಿ ನೀಡಲು ಸಿಎಂಸಿಯ ಜೀಪ್‌ನಲ್ಲಿಯೇ ಹೋದಂಥ ಸಂದರ್ಭದಲ್ಲಿ ಅಲ್ಲಿದ್ದವರು ಜೀಪ್‌ನ್ನು ತಡೆದು, ಎಲ್ಲಿಗೆ ಹೋಗುತ್ತಿದ್ದೀರಿ ಎಂದು ಮತ್ತು ಇನ್ಸ್‌ಪೆಕ್ಷನ್ ಮಾಡುವುದಕ್ಕೆ ಏಕೆ ಹೋಗುತ್ತೀರಿ ಎಂದು ಕೇಳಿದ್ದಾರೆ. ಹಾಗೆಯೇ ಜೀಪ್ ಡ್ರೈವರ್‌ಗೆ ರಾತ್ರಿ ಹೊಡೆದಿದ್ದಾರೆ. ಇದರಿಂದ, ಸಿಎಜಿರವರು ಆಡಿಟ್ ಮಾಡಲಿಕ್ಕೆ ಸಾಧ್ಯವಾಗದೆ ಹಿಂದಕ್ಕೆ ಬಂದಿದ್ದಾರೆ. ಇದಕ್ಕೆ ಸಂಬಂಧ ಪಟ್ಟಂಥ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎನ್ನತಕ್ಕಂಥಾದ್ದನ್ನು ತಿಳಿಸಬೇಕು. ಯಾವ ರಸ್ತೆಯಲ್ಲಿ ಈಗಾಗಲೇ ಲೈಟ್ಸ್ ಇದೆ, ಅದೇ ರಸ್ತೆಗೆ ಮತ್ತೆ ಲೈಟ್ಸ್ ಮತ್ತು ಪೋಲ್ಸ್‌ನ್ನು ಹಾಕಲಾಗಿದೆ ಎನ್ನತಕ್ಕಂಥಾದ್ದು ಸಿಎಜಿರವರ ಗಮನಕ್ಕೆ ಬಂದನಂತರ ಸದರಿ ಸ್ಥಳವನ್ನು ಪರಿಶೀಲನೆ ಮಾಡಲು ಫಿಸಿಕಲ್ ಇನ್ಸ್‌ಪೆಕ್ಷನ್‌ಗೆ ಸಂದರ್ಭದಲ್ಲಿ ಅವರ ಮೇಲೆ ಅಲ್ಲಿ ಅಸಾಲ್ಟ್ ಮಾಡಿದ್ದಾರೆ. ಈ ಒಂದು ಹೈಟೆಕ್ ಸ್ಕ್ಯಾಂಡಲ್‌ನಲ್ಲಿ ಆರ್ಥಿಕ ಇಲಾಖೆಯ ಇನ್ವಾಲ್‌ಮೆಂಟ್ ಕೂಡ ಇದೆ. ಈಗ ಆರ್ಥಿಕ ಇಲಾಖೆಯನ್ನು ಹೊಂದಿರತಕ್ಕಂಥ ಸನ್ಮಾನ್ಯ ಮುಖ್ಯಮಂತ್ರಿಯವರು ಇದಕ್ಕೆ ಸಂಬಂಧಪಟ್ಟಂತೆ ರಾಜೀನಾಮೆ ಕೊಡಿ ಎಂದು ಕೇಳುವ ಸ್ಥಿತಿಯಲ್ಲಿ ನಾನು ಇಲ್ಲ. ಬಿಹಾರ ರಾಜ್ಯದ ಮುಖ್ಯಮಂತ್ರಿಯಾಗಿದ್ದಂಥ ಸನ್ಮಾನ್ಯ ಲಾಲೂಪ್ರಸಾದ್ ಯಾದವ್‌ರವರು ಫಾಡ್ಡ‌ರ್ ಸ್ಕ್ಯಾಂಡಲ್ ಸಂದರ್ಭದಲ್ಲಿ ಆರ್ಥಿಕ ಇಲಾಖೆಯನ್ನು ಹೊಂದಿದ್ದರು ಎನ್ನತಕ್ಕಂಥ ಕಾರಣಕ್ಕಾಗಿ ಎಲ್ಲಾ ಪ್ರಕರಣಗಳನ್ನು ಅವರು ಎದುರಿಸುತ್ತಿದ್ದಾರೆ. ಇಲ್ಲಿಯೂ ಕೂಡ ನೇರವಾದ ಇನ್ವಾಲ್‌ಮೆಂಟ್ ಇದೆ ಎನ್ನತಕ್ಕಂಥಾದ್ದು ತನಿಖೆ ಮುಖಾಂತರ ತಿಳಿದು ಬಂದಿದೆ. ಇವತ್ತಿನದಿವಸ ಯಾರ್ಯಾರಿಗೆ ಕೊಟ್ಟಿದ್ದಾರೆ ಎನ್ನತಕ್ಕಂಥಾದ್ದನ್ನು ಸನ್ಮಾನ್ಯ ಸುರೇಶ್ ಕುಮಾರ್‌ರವರು ಈಗಾಗಲೇ ಪ್ರಸ್ತಾಪ ಮಾಡಿದ್ದಾರೆ. ಆದ್ದರಿಂದ ನಾನು ಮತೊಮ್ಮೆ ಈ ವಿಷಯವನ್ನು ಹೇಳುವುದಕ್ಕೆ ಹೋಗುವುದಿಲ್ಲ. 1998 ರಿಂದ ಸಿಎಂಸಿಗಳ ಲೈಟಿಂಗ್ ವ್ಯವಸ್ಥೆಯನ್ನು ಮೈಸೂರು ಲ್ಯಾಂಪ್ಸ್‌ನವರು ನೋಡಿಕೊಳ್ಳುತ್ತಿದ್ದರು. ಮೈಸೂರು ಲ್ಯಾಂಪ್ಸ್‌ನವರು ಟರ್ನ್ ಕೀ ಬೇಸಿಸ್ ಮೇಲೆ ನೋಡಿಕೊಳ್ಳುತ್ತಿದ್ದಂಥ ಲೈಟಿಂಗ್ ವ್ಯವಸ್ಥೆಯ ವ್ಯವಹಾರವನ್ನು ಕಸಿದುಕೊಂಡವರು ಯಾರು ?

5.20 ಪಿಎಂ

ಇದರ ಬಗ್ಗೆ ಈಗಾಗಲೇ ನಿಷ್ಮಾ ಮತ್ತು ಶಿಲ್ಪಾ ಎಲೆಕ್ಟ್ರಿಕಲ್ಸ್ ಬಗ್ಗೆ, ಮಧು ಎಲೆಕ್ಟ್ರಿಕಲ್ಸ್ ಬಗ್ಗೆ ಎಲ್ಲವನ್ನು ಅವರು ಹೇಳಿದ್ದಾರೆ. ಸಂಬಂಧ ಏನು ಇದೆ ಎನ್ನುವುದನ್ನು ಅವರು ಹೇಳಿದ್ದಾರೆ, ನಾನು ಹೇಳುವುದಕ್ಕೆ ಹೋಗುವುದಿಲ್ಲ. ಸರ್ಕಾರಕ್ಕೆ ಸಿಎಜಿಯ ಒಂದು ಪಾರ್ಷಿಯಲ್ ರಿಪೋರ್ಟ್ ಸಿಕ್ಕಿದೆ. ಈ ಸಿಎಜಿ ರಿಪೋರ್ಟಿನ ಆಧಾರದ ಮೇಲೆ ಸ್ಪಷ್ಟವಾದ ರೀತಿಯಲ್ಲಿ 19 ಕೋಟಿ ರೂಪಾಯಿಗಳ ಎಲೆಕ್ಟ್ರಿಕಲ್ ಗೂಡ್ಸ್‌ಗಳನ್ನು ಪರ್ಚೇಸ್ ಮಾಡುವುದರಲ್ಲಿ ಟೆಂಡರನ್ನು ಕರೆದಿಲ್ಲ. ನೋಟಿಫಿಕೇಷನ್ ಬಗ್ಗೆ ಯಾವ ಪತ್ರಿಕೆಯಲ್ಲೂ ಕೊಟ್ಟಿಲ್ಲವೆಂದು ಸ್ಪಷ್ಟವಾಗಿ ಸಿಎಜಿ ವರದಿಯಲ್ಲಿ ಬಂದಿದೆ. ನಿಮ್ಮ ಟ್ರಾನ್ಸ್‌ಫರೆನ್ಸಿ ಆಕ್ಟ್ ಎಲ್ಲಿ ಹೋಯಿತು ? ಪ್ರತಿಯೊಂದು ವಿಚಾರದಲ್ಲಿ ಕೂಡ ಎಲ್ಲವನ್ನೂ ಎಲ್ಲರ ಮುಂದೆ ಇಡುತ್ತೇವೆಂದು ಹೇಳುವ ಹೆಗ್ಗಳಿಕೆಯನ್ನು ಇಟ್ಟುಕೊಂಡಿರುವ ಸರ್ಕಾರ

19 ಕೋಟಿ ರೂಪಾಯಿಗಳ ಹಣದಲ್ಲಿ ಖರ್ಚು ಮಾಡಿ ಪರ್ಚೇಸ್ ಮಾಡುವುದರಲ್ಲಿ ಏಕೆ ಟ್ರಾನ್ಸ್‌ಫರೆನ್ಸಿ ಇರಲಿಲ್ಲ ? ಇದರಲ್ಲಿ ಸ್ವಲ್ಪ ಟ್ರಾನ್ಸ್‌ಫೆರೆನ್ಸಿ ಇದೆ, ಯಾವ ಗೂಡ್ಸ್ ಬೇಕು ಎಂದು ಇಲ್ಲ, ಎಷ್ಟು ಕ್ವಾಂಟಿಟಿ ಎಂದು ಇಲ್ಲ, ಯಾವ ಬ್ರಾಂಡ್ ಎಂದೂ ಕೂಡ ಇಲ್ಲ, ಬೆಳಿಗ್ಗೆ ನೋಟೀಸ್ ಬೋರ್ಡಿನಲ್ಲಿ ಒಂದು ನೋಟಿಫಿಕೇಷನನ್ನು ಅಂಟಿಸಿ ಸಾಯಂಕಾಲ 6 ಗಂಟೆಗೆ ಅದನ್ನು ತೆಗೆದು ಮಾರನೇ ದಿವಸದಿಂದ ಹಿಡಿದು 5 ಜನ 5 ತಿಂಗಳುಗಳಲ್ಲಿ ಕೊಟೇಷನ್ ಕೊಟ್ಟಿರುತ್ತಾರೆ. ಬೇರೆ ಬೇರೆ ದಿನಾಂಕಗಳನ್ನು ಹಾಕಿದ್ದಾರೆ. ನನಗೆ ಸಮಯದ ಅಭಾವ ಇರುವುದರಿಂದ ಹೇಳುವುದಕ್ಕೆ ಹೋಗುವುದಿಲ್ಲ. ಸಿಎಜಿಯ ವರದಿಯಲ್ಲಿ ಒಂದು ಪದವನ್ನು ಹೇಳಿದ್ದಾರೆ, ಸಿಂಡಿಕೇಟ್ ಆಪರೇಷನ್‌ನಿಂದ ಈ ಒಂದು ಸಿಎಂಸಿಯ ಒಳಗಡೆ ಹ್ಯೂಜ್ ಎಕ್ಸ್‌ಟ್ರಾ ಎಕ್ಸ್‌ಪೆಂಡಿಚರ್‌ನ ಮುಖಾಂತರದಲ್ಲಿ ದೊಡ್ಡ ಅವ್ಯವಹಾರವಾಗಿದೆ. ಅಂದರೆ ಸಿಂಡಿಕೇಟ್ ಆಫ್ ಯಾರು ಅವರು ? ಇದರಲ್ಲಿ ಯಾರ್ಯಾರು ಇದ್ದಾರೆ ಎನ್ನುವಂತಹ ಅಂಶ ಬೆಳಕಿಗೆ ಬರಬೇಕಾದರೆ, ಇವತ್ತು ಬಹಳ ಪ್ರಮುಖವಾದಂತಹ ಅಂಶವನ್ನು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ನೋಟೀಸ್ ಬೋರ್ಡ್‌ಗೆ ಹಾಕುವಂತಹ ದಿನಾಂಕವನ್ನು ನಾನು ಹೇಳಿದೆ, ನಿಶ್ಮಾ ಕೊಟೇಷನ್‌ನನ್ನು ಕೊಟ್ಟ ದಿನಾಂಕ : 11-4-2000, ಶಿಲ್ಪಾರವರು ಕೊಟ್ಟಿರುವುದು 22-6-2000, ಒಂದೇ ಗೂಡ್ಸ್‌ಗೆ, ಮಧು ಎಂಟರ್ ಪ್ರೈಸಸ್‌ರವರು 16-7-2000, ಆದರೆ ಅಲ್ಲಿ ಕೇಳಿರುವಂತಹ 17 ಮೆಟೀರಿಯಲ್ಸ್‌ಗೂ ಕೂಡ ಒಂದೇ ರೇಟನ್ನು ನಾಲ್ಕು ಕಂಪನಿಗಳೂ ಕೋಟ್ ಮಾಡಿ ಕೊಟ್ಟಿದ್ದಾರೆ ; ಅದೂ ನಾಲ್ಕು ತಿಂಗಳುಗಳಲ್ಲಿ. ಇದರಲ್ಲಿ ಒಂದು ವ್ಯತ್ಯಾಸವಿಲ್ಲ, ಎಲ್ಲಾದರಲ್ಲೂ ಕೂಡ ಇದೇ ರೀತಿಯಾದಂತಹ ವ್ಯವಸ್ಥೆಗಳು, ನನ್ನ ಮುಂದೆ ಎಲ್ಲಾ ಡಾಕ್ಯುಮೆಂಟ್‌ಗಳು ಕೂಡ ಇವೆ. ಈಗಾಗಲೇ ಮಾನ್ಯ ಸುರೇಶ್‌ಕುಮಾರರವರು ಹೇಳಿದರು, ನಡೆದಂತಹ 12 ಮೀಟಿಂಗ್‌ಗಳಿಗೆ ಸನ್ಮಾನ್ಯ ಸಚಿವರು ಹಾಜರಿದ್ದರು, ಅಲ್ಲಿ ಹೋಗಬೇಕಾದಂತಹ ಇಬ್ಬರು ಎಂಎಲ್‌ಎಗಳು ಇರಲಿಲ್ಲ. ಇಲ್ಲಿ ಒಂದು ಸ್ವಾರಸ್ಯವನ್ನು ತಮಗೆ ಹೇಳಲು ಇಚ್ಛಿಪಡುತ್ತೇನೆ. 19-6-2002ರ ಬುಧವಾರ ಬೆಳಿಗ್ಗೆ 11 ಗಂಟೆಗೆ ಅಧ್ಯಕ್ಷರಾದಂತಹ ಶ್ರೀಮತಿ ಸಾಕಮ್ಮನವರ ಅಧ್ಯಕ್ಷತೆಯಲ್ಲಿ ಒಂದು ಸಭೆ ನಡೆಯಿತು. ಸಭೆಯಲ್ಲಿ ವಿಷಯದ ಸಂಖ್ಯೆ : 11 ಇದರಲ್ಲಿ ಎಷ್ಟು ಚೆನ್ನಾಗಿ ಆ ವಿಚಾರಗಳು ಬಂದಿವೆ ಎಂದರೆ, 2001-02ನೇ ಸಾಲಿನ ಅಧ್ಯಕ್ಷರ ಸೂಚನೆಯ ಮೇರೆಗೆ ಕೈಗೊಂಡಿರುವ 5 ಕೋಟಿ ರೂಪಾಯಿಗಳ ತುರ್ತು ಕಾಮಗಾರಿಗಳನ್ನು ಸ್ವೀಕರಿಸುವಂತಹ ವಿಚಾರ ; ಒಂದೇ ಪದದಲ್ಲಿ ಇದನ್ನು ಅಪ್ರೂವ್ ಮಾಡಲಾಯಿತೆಂದು ಹೇಳಿದಾಗ ಇದರ ಬಗ್ಗೆ ಒಬ್ಬ ಸದಸ್ಯರು ಎದ್ದು ನಿಂತು ಏನು 5 ಕೋಟಿ ರೂಪಾಯಿಗಳ ವ್ಯವಸ್ಥೆ ಇದೆಯೇ ಎಂದು ಕೇಳಿದರು. ಇಲ್ಲಿರುವಂತಹ 24 ಜನ ಸದಸ್ಯರುಗಳು ಕೇಳದೆ ಇರುವಂತಹ ಪ್ರಶ್ನೆಯನ್ನು ನೀವು ಏತಕ್ಕಾಗಿ ಕೇಳುತ್ತಿದ್ದೀರಿ ? ನೀವು ಕೇಳುವಂತಹ ಅವಶ್ಯಕತೆ ಇಲ್ಲ. ಇದು ಪಾಸಾಗಿದೆ ಎಂದು ಹೇಳಿ ಅರ್ಧ ನಿಮಿಷದೊಳಗಡೆ 5 ಕೋಟಿ ರೂಪಾಯಿಗಳನ್ನು ಈ ದಿವಸದಲ್ಲಿ ಪಾಸು ಮಾಡಿದಂತಹ ದೊಡ್ಡ ಜವಾಬ್ದಾರಿ ಆ ಕ್ಷೇತ್ರದ ಶಾಸಕರದ್ದು ಎಂದು ಹೇಳುವುದಕ್ಕೆ ಪುರಾವೆಗಳು ಬೇಕಾಗಿಲ್ಲ. 2000ನೇ ಇಸವಿಯ ಸೆಪ್ಟೆಂಬರ್ ತಿಂಗಳಿನಲ್ಲಿ ಶಿಲ್ಪಾ ಎಲೆಕ್ಟ್ರಿಕಲ್ಸ್‌ನವರು 16 ಮೀಟರ್ ಹೈಮಾಸ್ಟ್ ಲೈಟನ್ನು ಸಪ್ಲೈ ಮಾಡಿದ್ದಾರೆ. ಅವರು 16 ಲೈಟ್ಸ್‌ಗಳನ್ನು ಕೊಟ್ಟಿದ್ದಾರೆ, ಮೈಸೂರ್‌ನಲ್ಲಿ ಕೂಡ ನಗರಪಾಲಿಕೆಯಲ್ಲೂ ಕೂಡ ಪರ್ಚೇಸ್ ಮಾಡಿದ್ದೇವೆ. ಅದರ ಬೆಲೆ 3 ಲಕ್ಷದ 8 ಸಾವಿರ ರೂಪಾಯಿಗಳು. ಆದರೆ ಇಲ್ಲಿ

ಒಂದು ಲೈಟಿಗೆ ತೆಗೆದುಕೊಂಡಿರುವುದು 8 ಲಕ್ಷದ 4 ಸಾವಿರ ರೂಪಾಯಿಗಳು ! ಇದನ್ನು ನಾನು ಹೇಳುವಂತದ್ದಲ್ಲ ಸಿಎಜಿಯ ವರದಿಯ ಪ್ರಕಾರ 80 ಲಕ್ಷ ರೂಪಾಯಿಗಳ ಎಕ್ಸೆಸ್ ಪೇಮೆಂಟ್ ಈ ಒಂದು ಲೈಟ್ ಪರ್ಚೇಸ್‌ಗೋಸ್ಕರವಾಗಿ ಕೊಟ್ಟಿದ್ದಾರೆ. ಆ ಹೈಮಾಸ್ ಲೈಟ್ 16 ಮೀಟರ್‌ನದು, ಇನ್ನು ಅಕ್ಟೋಬರ್ 2000ದಲ್ಲಿ ಮಧು ಎಂಟರ್ ಪ್ರೈಸಸ್‌ನವರಿಂದ 20 ಮೀಟರ್ ಹೈಟಿನ ಹೈಮಾಸ್ಟ್ ದಿ ಲೈಟನ್ನು ತೆಗೆದುಕೊಂಡಿದ್ದಾರೆ. 20 ಲೈಟ್‌ಗಳನ್ನು ತೆಗೆದುಕೊಂಡಿದ್ದಾರೆ. ಒಂದು ಲೈಟ್‌ಗೆ ಮೈಸೂರು ಮಹಾನಗರ ಪಾಲಿಕೆಯಲ್ಲಿ ನಾವು ಕೊಟ್ಟಂತಹ ಹಣ 4 ಲಕ್ಷದ 50 ಸಾವಿರ ರೂಪಾಯಿಗಳು. ಆದರೆ ಒಂದು ಲೈಟಿಗೆ ಇವರು 9 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಇದರ ಪ್ರಕಾರದಲ್ಲಿ 90 ಲಕ್ಷ ರೂಪಾಯಿಗಳ ಎಕ್ಸ್‌ಸ್ ಪೇಮೆಂಟಾಗಿದೆ ಎಂದು ಸಿಎಜಿಯವರ ವರದಿ ತಿಳಿಸಿದೆ. ಈ ಒಂದು ಸಿಎಂಸಿಯ ವ್ಯಾಪ್ತಿ ಇರುವುದು 6,500 ಎಕರೆ ಪ್ರದೇಶ ಮಾತ್ರ. ಕೇವಲ 35 ಬೂತ್‌ಗಳ ಏರಿಯಾ, ಇಲ್ಲಿ ಅವರು ಏತಕ್ಕಾಗಿ ಜೀಪಿನ ಡ್ರೈವರ್‌ಗೆ ಹೊಡೆದರು, ಎಜಿಯವರಿಂದ ಹೋದವರನ್ನು ಏತಕ್ಕಾಗಿ ನಿಲ್ಲಿಸಿದರು ಅಂದರೆ ಅವರು ಪ್ರತಿಯೊಂದು ಲೈಟನ್ನು ಕೂಡ ಎಲ್ಲೆಲ್ಲಿ ಹಾಕಿದ್ದಾರೆಂದು ಪರೀಕ್ಷೆ ಮಾಡಲು ಹೋಗಿದ್ದರು. ಅವರ ಪ್ರಕಾರದಲ್ಲಿ ಕೇವಲ 862 ಲೈಟ್‌ಗಳು ಮಾತ್ರ ಸಿಕ್ಕಿರುವುದು. ಆದರೆ ಬಿಲ್ 7,152 ಸ್ಟ್ರೀಟ್ ಲೈಟ್‌ಗಳಿಗೆ ಮಾಡಿದ್ದಾರೆ. ಇಲ್ಲಿ ಎಕ್ಸೆಸ್ ಪೇಮೆಂಟ್ 3.39 ಕೋಟಿ ರೂಪಾಯಿಗಳಾಗಿದೆ. ನಾವೆಲ್ಲರೂ ಕೂಡ ಶ್ರೀ ಜಗದೀಶ್ ಶೆಟ್ಟರ್ ಶ್ರೀ ಭೈರೇಗೌಡರು, ಶ್ರೀ ಪಿ.ಜಿ.ಆರ್. ಸಿಂಧ್ಯಾರವರು, ಬಂದ ತಕ್ಷಣದಲ್ಲಿ ವಿರೋಧಪಕ್ಷದ ನಾಯಕರೆಲ್ಲರೂ ಚರ್ಚೆ ಮಾಡುವಂತಹ ಸಂದರ್ಭದಲ್ಲಿ ಒಂದು ಯೋಚನೆಯನ್ನು ಮಾಡಿದೆವು. ಯಾವುದರ ಬಗ್ಗೆ ಮೊದಲು ನಾವು ನಿಲುವಳಿ ಸೂಚನೆಯನ್ನು ತೆಗೆದುಕೊಳ್ಳೋಣವೆಂದು, ರಾಜ್ಯದಲ್ಲಿ ಬರಗಾಲ ಬಂದಿದೆ, ಇದರ ಬಗ್ಗೆ ನಾವೆಲ್ಲರೂ ಪಕ್ಷಾತೀತವಾಗಿ ಚರ್ಚೆ ಮಾಡಬೇಕು ಎನ್ನುವಂತಹ ವಿಚಾರವನ್ನು

(ಈ ಹಂತದಲ್ಲಿ ಶ್ರೀ ಯು.ಆರ್. ಸಭಾಪತಿಯವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಚರ್ಚೆ ಮಾಡಿ, ನಾವು ಏನು ವಿಚಾರದ ಬಗ್ಗೆ ರೈತರಿಗೆ ಕೊಡಬೇಕು ಚಿಂತನೆಯನ್ನು ಮಾಡಿದೆವು; ಚರ್ಚೆ ಮಾಡಿದೆವು. ಆದರೆ ಇಡೀ ರಾಜ್ಯಕ್ಕೆ ಬರಗಾಲ ಬಂದರೆ ಸನ್ಮಾನ್ಯ ಮಂತ್ರಿಗಳ ಕ್ಷೇತ್ರಕ್ಕೆ ಪ್ರವಾಹ ! ಇದನ್ನು ನಾನು ಹೇಳುವಂತಹ ಮಾತಲ್ಲ. ಸಿಎಜಿಯ ವರದಿಯಲ್ಲಿ ಕೊಟ್ಟಿರುವುದು ಈ ಕ್ಷೇತ್ರಕ್ಕೆ ಎಷ್ಟು ಪ್ರವಾಹ ಬಂದಿದೆ ಎಂದರೆ, ಪ್ರವಾಹ ಬಂದ ಮನೆಗಳಿಗೋಸ್ಕರವಾಗಿ AC sheets to persons whose houses collapsed due to rains. ಅವರಿಗೋಸ್ಕರವಾಗಿ 7050 ಎ.ಸಿ. ಶೀಟ್‌ಗಳನ್ನು ಮಳೆಯಲ್ಲಿ ಪ್ರವಾಹ ಬಂದು ಕೊಚ್ಚಿ ಹೋಗಿರುವಂತಹದಕ್ಕೇ ಕೊಟ್ಟಿರುವುದು. ಇದು ಒಂದು ಬಿಲ್ಲಿನಲ್ಲಿ, ಮುಂದಿನ ಬಿಲ್‌ಗಳಲ್ಲಿ 25,979 ಎ.ಸಿ. ಶೀಟ್‌ಗಳನ್ನು ಪರ್ಚೇಸ್ ಮಾಡಿದ್ದಾರೆ, ಇದರ ಬೆಲೆ ಒಟ್ಟು ಇದರ ಪ್ರಕಾರದಲ್ಲಿ ಎಕ್ಸೆಸ್ ಪೇಮೆಂಟಾಗಿರುವುದು 93.52 ಲಕ್ಷ ರೂಪಾಯಿಗಳು. ನಾನು ಇರುವಂತಹ ಪ್ರದೇಶ ಎಷ್ಟು ಎಂದು ನಾನು ಆಗಲೇ ಹೇಳಿದೆ, ಕೇವಲ 35 ಬೂತ್‌ಗಳ ಪ್ರದೇಶಗಳೇನು ಇತ್ತು ಇದಕ್ಕಾಗಿ ನಾಮಫಲಕಗಳನ್ನು ಹಾಕುವುದಕ್ಕೆ, ರೋಡ್, ಕ್ರಾಸ್ ರೋಡ್, ಇದನ್ನು ಹಾಕುವುದಕ್ಕೋಸ್ಕರವಾಗಿ ಅವರ ಪ್ರಕಾರದಲ್ಲಿ 13,720 ಬೋರ್ಡ್‌ಗಳನ್ನು ಹಾಕಿದ್ದೇವೆ, ಅದಕ್ಕಾಗಿ ಕೊಟ್ಟಿರುವಂತಹ ಹಣ 1 ಕೋಟಿ 72 ಲಕ್ಷ ರೂಪಾಯಿಗಳು. ಸಿಎಜಿಯವರ ವರದಿಯು ಏತಕ್ಕಾಗಿ ನಿಂತು ಹೋಯಿತು. ಯಾವ ಪರಿಶಿಷ್ಟ

ಜಾತಿಯವರ 18 ಪರ್ಸೆಂಟ್ ಹಣ ಇದೆ, ಅದರಲ್ಲಿ 1570 ಜನ ಮಹಿಳೆಯರಿಗೆ ಹೊಲಿಗೆ ಯಂತ್ರವನ್ನು ಕೊಟ್ಟಿದ್ದೇವೆಂದು ಹೇಳಿದರು. ಅವರು ಫಲಾನುಭವಿಗಳ ಪಟ್ಟಿಯನ್ನು ಕೊಡಿ ಎಂದು ಹೇಳಿದರು. ಇದನ್ನು ಯಾರ್‍ಯಾರಿಗೆ ಕೊಟ್ಟಿದ್ದೀರಿ, ಅಂದರೆ 70 ಲಕ್ಷದ 65 ಸಾವಿರ ರೂಪಾಯಿಗಳ ಹಣದಲ್ಲಿ ಯಾವ 18 ಪರ್ಸೆಂಟ್ ಹಣವನ್ನು ಕೇಳಿದರೋ ಅದರಲ್ಲಿ ಖರ್ಚು ಮಾಡಿರುವಂತಹ ಹಣವು ಫಲಾನುಭವಿಗಳ ಯಾರು ಎಂದು ಪಟ್ಟಿಯಲ್ಲಿ ಇಲ್ಲ. ಆ ಸಿಎಜಿಯವರ ವರದಿಗೆ ಕೇಳುವಂತಹ ಡಾಕ್ಯುಮೆಂಟ್‌ಗಳು ಇಲ್ಲ, ಈ ಒಂದು ಪ್ರದೇಶದ ವ್ಯಾಪ್ತಿಯೊಳಗಡೆ ತಳ್ಳುವ ಗಾಡಿಯೊಳಗಡೆ ನೀವು ತರಕಾರಿಯನ್ನು ಮಾರುವುದಕ್ಕೋಸ್ಕರವಾಗಿ ಬಡವರಿಗೆ ಕೊಟ್ಟಿದ್ದೇವೆಂದು ಹೇಳಿದರು. ಅವರು ಯಾರ್‍ಯಾರು ? ಅವರ ವಿಳಾಸವೇನು ಎನ್ನುವಂತಹದ್ದನ್ನು ಅವರು ಸಹಜವಾಗಿ ಅಡಿಟ್‌ನಲ್ಲಿ ಕೇಳಿದರು. ಅದಕ್ಕೆ ಯಾವುದೇ ಪಟ್ಟಿಯಿರಲಿಲ್ಲ. 1355 ಜನರಿಗೆ ಕೊಟ್ಟಿದ್ದೇವೆಂದು ಹೇಳಿ 61.65 ಲಕ್ಷ ರೂಪಾಯಿಗಳನ್ನು ಡ್ರಾ ಮಾಡಿದ್ದಾರೆ. ಇವತ್ತು ಪ್ರಮುಖವಾಗಿ ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಆಕ್ಟ್ 1964 ಸೆಕ್ಷನ್ 19(2) ಪ್ರಕಾರದಲ್ಲಿ ಯಾವುದೇ ಎಕನಾಮಿಕ್ ಪ್ರೋಗ್ರಾಮ್ ಇರಲಿ ಅದಕ್ಕೆ ಸರ್ಕಾರದ ಸ್ಯಾಂಕ್ಷನ್ ಅವಶ್ಯಕವೆನ್ನುವಂತಹದ್ದು, ಅದು ಆಕ್ಟ್‌ನಲ್ಲಿದೆ. ಈ ಎಕನಾಮಿಕ್ ಪ್ರೋಗ್ರಾಮ್ಸ್ ಎಂದು ಹೇಳಿದರಲ್ಲಾ ಹೊಲಿಗೆ ಯಂತ್ರವಿರಬಹುದು, ಬೇರೆ ಬೇರೆ ಪ್ರಕರಣಗಳೇನು ಹೇಳಿದೆ, ಇದರಿಂದಾಗಿ 3.04 ಕೋಟಿ ರೂಪಾಯಿಗಳನ್ನು ಈ ಒಂದು ಎಕನಾಮಿಕ್ ಪ್ರೋಗ್ರಾಮ್‌ಗೆ ಕೊಟ್ಟಿದ್ದೇವೆಂದು ಹೇಳಿದ್ದಾರೆ. ಸರ್ಕಾರದ ಹಣಕಾಸಿನ ಇಲಾಖೆ ಇದಕ್ಕೆ ಕನ್‌ಕರೆನ್ಸ್ ಕೊಟ್ಟಿದ್ದಾರಾ ? ಹಣಕಾಸು ಇಲಾಖೆ, ರೆವಿನ್ಯೂ ಇಲಾಖೆ ಎಲ್ಲವನ್ನೂ ನಾನೇ ಎಂದು ಅಂದುಕೊಳ್ಳುವಂತಹ ವ್ಯವಸ್ಥೆ ಈ ಸರ್ಕಾರದೊಳಗಡೆ ಆಗಿದೆಯೇ ; ಇದರ ಬಗ್ಗೆ ಸ್ಪಷ್ಟತೆಯನ್ನು ಕೊಡಬೇಕಾದ ಅವಶ್ಯಕತೆ ಇದೆ. ನಾನು ನಾಯಕರಲ್ಲಿ ಒಂದು ವಿಚಾರವನ್ನು ಹೇಳುವುದಕ್ಕೆ ಬಯಸುತ್ತೇನೆ. ಇಷ್ಟು ಹೊತ್ತು ಅವರೇನು ಹೇಳಿದರೆಂದರೆ ಹಣವನ್ನು ಎಕ್ಸೆಸ್ ಆಗಿ ಕೊಟ್ಟಿದ್ದು ಡ್ರಾ ಮಾಡಿದ್ದಾರೆ, ಪರ್ಚೇಸ್ ಆಗಿದೆ. ಅದಕ್ಕಾಗಿ ಎಕ್ಸೆಸ್ ಪೇಮೆಂಟಾಗಿದೆ, ಇದು ಒಂದು ಭಾಗವಲ್ಲ. ಇವರು 11, 15 ಕೋಟಿ ರೂಪಾಯಿಗಳನ್ನು ಆಯುಕ್ತರವರು ಡ್ರಾ ಮಾಡಿಕೊಂಡು ಬಂದರು. ಅವರು ಡ್ರಾ ಮಾಡಿಕೊಂಡು ಬಂದ ಹಣದಲ್ಲಿ ಇವತ್ತು ಬೇರೆ ಬೇರೆ ಬ್ಯಾಂಕುಗಳಲ್ಲಿ ಹಣವನ್ನು ಅವರ ಪಿ.ಡಿ. ಅಕೌಂಟ್‌ನಲ್ಲಿಟ್ಟರು, ಅವರು ಪಿ.ಡಿ. ಅಕೌಂಟ್‌ನಿಂದ ಡ್ರಾಮಾಡಿರುವುದು 9.65 ಕೋಟಿ ರೂಪಾಯಿಗಳು ; ಪ್ರಿನ್ಸಿಪಲ್ 0.46 ಕೋಟಿ ರೂಪಾಯಿಗಳು ಇಂಟರೆಸ್ಟ್, ಆದರೆ 1.5 ಕೋಟಿ ರೂಪಾಯಿಗಳು ಏನಾಯಿತು ? ಇದರ ಬಗ್ಗೆ ಯಾರಿಗೂ ಲೆಕ್ಕ ಗೊತ್ತಿಲ್ಲ, ಆ ಹಣ ಏನಾಯಿತು ? ಇದು ಯಾವುದೇ ಅಡಿಟ್‌ಗೂ ಸಿಗದೆ ಇರುವಂತಹ ಹಣ. ಸಿಎಜಿಯವರು ಅಲ್ಲಿಗೆ ಹೋದ ನಂತರದಲ್ಲಿ ಟ್ರಜರಿಯ ಕೆ.ಆರ್. ಪುರಂನಲ್ಲಿ ಸಿಗಲಿಲ್ಲ, ಟ್ರಜರಿಯಲ್ಲಿ ಏನಾಯಿತೆಂದು ಹುಡುಕುವಂತಹ ಸಂದರ್ಭದಲ್ಲಿ ದಿನಾಂಕ : 27-2-2001ರಲ್ಲಿ ಯುನೈಟೆಡ್ ಕಮರ್ಷಿಯಲ್ ಬ್ಯಾಂಕ್‌ಗೆ 5 ಚೆಕ್‌ಗಳಲ್ಲಿ 25 ಲಕ್ಷ ರೂಪಾಯಿಗಳನ್ನು ಡ್ರಾ ಮಾಡಿದ್ದಾರೆ. ಅದರೆ ಹಣವನ್ನು ಡ್ರಾ ಮಾಡಿರುವುದು, ಆ ಹಣವನ್ನು ಯಾರು ತೆಗೆದುಕೊಂಡಿದ್ದಾರೆ, ಇವತ್ತಿನವರೆಗೂ ಲೆಕ್ಕ ಗೊತ್ತಿಲ್ಲ. ದಿನಾಂಕ : 13-3-2001ರಲ್ಲಿ ಪಂಜಾಬ್ ನ್ಯಾಷನಲ್ ಬ್ಯಾಂಕ್‌ಗೆ 6 ಚೆಕ್‌ಗಳಲ್ಲಿ 30 ಲಕ್ಷ ರೂಪಾಯಿಗಳನ್ನು ಅಲ್ಲಿ ಡೆಫಾಸಿಟ್ ಮಾಡಿದ್ದಾರೆ, ಡ್ರಾ ಮಾಡಿರುವವರು ಯಾರು ? ಇದರ ಬಗ್ಗೆ ಯಾರಿಗೂ ಗೊತ್ತಿಲ್ಲ.

ದಿನಾಂಕ : 14-07-2001ರಲ್ಲಿ 4 ಚೆಕ್‌ಗಳಲ್ಲಿ 40 ಲಕ್ಷ ರೂಪಾಯಿಗಳನ್ನು ಡ್ರಾ ಮಾಡಿದ್ದಾರೆ, ಏತಕ್ಕಾಗಿ ಮಾಡಿದ್ದಾರೆ ? ಯಾರು ಮಾಡಿದ್ದಾರೆ ? ಎನ್ನುವಂತಹದ್ದರ ಬಗ್ಗೆ ಅಕೌಂಟಿಂಗ್‌ನಲ್ಲಿ ಇಲ್ಲ. ದಿನಾಂಕ : 25-7-2001ರಲ್ಲಿ ಒಂದು ಚೆಕ್‌ನಲ್ಲಿ 10 ಲಕ್ಷ ರೂಪಾಯಿಗಳು ಒಟ್ಟು ನಾನು ಆಗಲೇ ಹೇಳಿದ ಹಾಗೆ ಒಂದು ಕೋಟಿ ಐದು ಲಕ್ಷ ರೂಪಾಯಿಗಳು ; ಅದೂ ಅಲ್ಲದೆ 45 ಲಕ್ಷ ರೂಪಾಯಿಗಳನ್ನು ಯಾವುದೇ ಬ್ಯಾಂಕ್‌ನಲ್ಲಿಡದೆ ನೇರವಾಗಿ ಟ್ರಜರಿಯಿಂದ ಡ್ರಾ ಮಾಡಿರುವವರು ಯಾರು ? ಇದೊಂದು ದೊಡ್ಡ ಯಕ್ಷ ಪ್ರಶ್ನೆಯಾಗಿದೆ. ಒಂದು ಕಡೆ ಖರ್ಚನ್ನು ತೋರಿಸಿದ್ದಾರೆ, ಆದರೆ 1.5 ಕೋಟಿ ರೂಪಾಯಿಗಳನ್ನು ಡ್ರಾ ಮಾಡಿರುವವರು ಯಾರು ಎಂಬುದನ್ನು ಯಾರು ಹೇಳಬೇಕಾಗಿದೆ ? ಈ ಸದನದಲ್ಲಿ ಹಣಕಾಸಿನ ಮಂತ್ರಿಗಳಿದ್ದರೆ ಬಹಳ ಪ್ರಮುಖವಾಗಿ ಸೇಲ್ಸ್ ಟ್ಯಾಕ್ಸ್, ಕಮರ್ಷಿಯಲ್ ಟ್ಯಾಕ್ಸ್, ಎಂಟರ್‌ಟೈನ್‌ಮೆಂಟ್ ಟ್ಯಾಕ್ಸ್ ಬಗ್ಗೆ ಇವೆಲ್ಲದರ ಬಗ್ಗೆ ಬಹಳ ವಿಚಾರಗಳನ್ನು ತಿಳಿದುಕೊಳ್ಳುವುದಕ್ಕೆ ಟ್ಯಾಕ್ಸ್ ಕಮಿಷನ್ ಕೂಡ ಅಪಾಯಿಂಟ್ ಮಾಡಿದರು. ಇದನ್ನು ನಾನು ಸ್ವಾಗತ ಮಾಡಿದ್ದೇನೆ. ಯಾರೋ ಒಬ್ಬ ಸಾಮಾನ್ಯವಾದ ವ್ಯಕ್ತಿ ಸೇಲ್ಸ್ ಟ್ಯಾಕ್ಸ್‌ನ್ನು ಕೊಡಲಿಲ್ಲ ಅಂದರೆ ತಕ್ಷಣವೇ ಅವರ ಮೇಲೆ ನಾವು ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ. ನಾನು ತಮ್ಮ ಮೂಲಕ ಮಾನ್ಯ ನಾಯಕರಲ್ಲಿ ಹೇಳುವುದಕ್ಕೆ ಇಚ್ಛಿಪಡುತ್ತೇನೆ, ಈಗ ಅವರು ಉತ್ತರವನ್ನು ಹೇಳುತ್ತಾರೆ, ಯಾವ ಯಾವ ಮೆಟೀರಿಯಿಲ್‌ಗಳನ್ನು ಪರ್ಚೇಸ್ ಮಾಡಿದ್ದೇವೆ, ಎಂದು ಮಾನ್ಯ ಸುರೇಶ್‌ಕುಮಾರ್‌ರವರೇ, ನಮ್ಮ ಮನೆಯವರಿರಬಹುದು, ನಮ್ಮ ಕುಟುಂಬದವರೇ ಇರಬಹುದು, ನಾವೇ ಮೆಟೇರಿಯಲ್‌ಗಳನ್ನು ಕೊಟ್ಟಿದ್ದೇವೆ ಎಂದು ಹೇಳಬಹುದು. ಮೆಟೇರಿಯಲ್‌ಗಳೆಲ್ಲವನ್ನೂ ಕೂಡ ತಾವು ಪರ್ಚೇಸ್ ಮಾಡಿದ್ದೇ ಆದರೆ ಕಾನೂನಿನ ಪ್ರಕಾರ ಏನು ಮಾಡಬೇಕಾಗಿತ್ತು ? ಅದರ ಪ್ರಕಾರದಲ್ಲಿ ತಾವು ನಿಖರವಾಗಿ ಪರ್ಚೇಸ್ ಮಾಡಿದ್ದರೆ ಸೇಲ್ಸ್‌ಟ್ಯಾಕ್ಸ್ ಆಕ್ಟ್ 19 (ಎ) 19 (ಎಎ) ಪ್ರಕಾರದಲ್ಲಿ ಸಪ್ಲೈ, ವರ್ಕ್, ಕಂಟ್ರಾಕ್ಟ್ ಇವುಗಳಿಗೆ ಆಗಿರತಕ್ಕಂತಹ ಬಿಲ್ಲಿನ ಮೇಲೆ ಸೇಲ್ಸ್‌ಟ್ಯಾಕ್ಸ್ ಡಿಡಕ್ಷನ್ಸ್ ಆಗಬೇಕಾಗಿತ್ತು. ನಾನು ಒಂದು ಪ್ರಶ್ನೆಯನ್ನು ತಮ್ಮ ಮೂಲಕ ಮುಖ್ಯಮಂತ್ರಿಗಳಲ್ಲಿ ಕೇಳುವುದಕ್ಕೆ ಇಚ್ಛಿಪಡುತ್ತೇನೆ. ಯಾವ ಸಿಎಂಸಿಯ ವಿಚಾರವನ್ನು ಚರ್ಚೆ ಮಾಡುತ್ತಿದ್ದೇವೆ, ಕೃಷ್ಣರಾಜಪುರ, ಅಲ್ಲಿ ಕಳೆದ ನಾಲ್ಕು ವರ್ಷಗಳ ಕಾಲದಿಂದ ಏನೇನು ಪರ್ಚೇಸ್ಸ್ ಆಗಿದೆ ಅದರ ಮೂಲಕ ಎಷ್ಟು ಸೇಲ್ಸ್ ಟ್ಯಾಕ್ಸ್‌ನ್ನು ನೀವು ಪಡೆದಿದ್ದೀರಿ ? ಅದು ಸೇಲ್ ಪಾಯಿಂಟ್‌ನಲ್ಲಿರಬಹುದು, ಪರ್ಚೇಸ್ ಪಾಯಿಂಟ್‌ನಲ್ಲಿರಬಹುದು ಅಥವಾ ಸಿಎಂಸಿಯಿಂದ ಸರ್ಕಾರಕ್ಕೆ ಎಷ್ಟು ಹಣ ಬಂದಿದೆ ? ಅಲ್ಲಿ ಯಾವುದೇ ಮೆಟೇರಿಯಲ್‌ಗಳು ಪರ್ಚೇಸ್ ಆಗಿಲ್ಲ, ಅದಕ್ಕೆ ಉದಾಹರಣೆ 21, 81, 96,000-00 ರೂಪಾಯಿಗಳ ಬಿಲ್‌ಗಳನ್ನು ತೋರಿಸಿದ್ದಾರೆ. ಈ ಗೂಡ್ಸ್ ಪರ್ಚೇಸ್‌ನ ಬಿಲ್ಸ್‌ನ್ನು ಅವರು ತೋರಿಸಿದ್ದಾರೆ, ಆದರೆ ಇವತ್ತಿನವರೆಗೂ ಕೂಡ ಡ್ರಾ ಮಾಡಿರುವಂತಹ ಹಣವೆಷ್ಟು. ಇದರ ಬಗ್ಗೆ ನಿಜವಾಗಿಯೂ ಪರ್ಚೇಸ್ ಮಾಡಿದ್ದರೆ 1.99 ಕೋಟಿ ರೂಪಾಯಿಗಳ ಸೇಲ್ಸ್ ಟ್ಯಾಕ್ಸ್‌ನ್ನು ಕಂಟ್ರಾಕ್ಟರ್‌ಗಳು ಕಟ್ಟಬೇಕಾಗಿತ್ತು. ಅದನ್ನು ಕಟ್ಟಿದ್ದಾರಾ ? 1.99 ಕೋಟಿ ರೂಪಾಯಿಗಳ ಸೇಲ್ಸ್ ಟ್ಯಾಕ್ಸ್ ಏನಾಯಿತು ? ಆ ಹಣವು ಸರ್ಕಾರದ ಬೊಕ್ಕಸಕ್ಕೆ ಬಂದಿದೆಯಾ ? ಅದರ ಬಗ್ಗೆ ತಾವು ಹೇಳಬೇಕು. ಯಾರು 1.99 ಕೋಟಿ ರೂಪಾಯಿಗಳ ಸೇಲ್ಸ್ ಟ್ಯಾಕ್ಸ್‌ನ್ನು ಕಟ್ಟಿಲ್ಲ ಅವರ ಮೇಲೆ ಕಾನೂನಿನ ಪ್ರಕಾರ ಏನೇನು ಕ್ರಮವನ್ನು ತೆಗೆದುಕೊಂಡಿದ್ದೀರಿ ಎನ್ನುವಂತಹ ಅಂಶವನ್ನು ಕೂಡ ತಾವು ಹೇಳಬೇಕು.

ಇದನ್ನು ನಾನು ಹೇಳುವಂತಹ ಮಾತಲ್ಲ, ಸಿಎಜಿಯ ವರದಿಯಲ್ಲಿ ಕೇವಲ ಒಂದು ತಿಂಗಳ ವರದಿಯಲ್ಲಿ ಏನು ಹೇಳಿದ್ದಾರೆ ಎಂಬುದನ್ನು ನಾನು ಹೇಳುತ್ತಿದ್ದೇನೆ. ಅವರ ಪ್ರಕಾರದಲ್ಲಿ 'Undue favour to contractors entrusted with disposal of municipal solid waste' ಎಲ್ಲಾ ವಿಚಾರವನ್ನು ಹೇಳುತ್ತಾರೆ. ಈ ಕಂಟ್ರಾಕ್ಟ್ ಸಿಕ್ಕಿರುವುದು ಯಾರಿಗೆ ? ಸನ್ಮಾನ್ಯ ನಾಗರಾಜುರವರಿಗೆ ಸಿಕ್ಕಿದೆ. 1999ರಲ್ಲಿ ಈ ಚಿಕ್ಕ ಪ್ರದೇಶಕ್ಕೆ ಒಂದು ತಿಂಗಳಿಗೆ 2 ಲಕ್ಷ ರೂಪಾಯಿಗಳ ಪ್ರಕಾರದಲ್ಲಿ ಈ ವೇಸ್ಟೇಜ್‌ನ್ನು ಸಾಗಿಸಲಿಕ್ಕೆ ಕಂಟ್ರಾಕ್ಟ್ ಇತ್ತು. ಬೇರೆ ಯಾರಿಗೋ ಪ್ರಾಮಾಣಿಕನಾದವನಿಗೆ ಇತ್ತು, ಆ ನಂತರದಲ್ಲಿ ಬದಲಾವಣೆಯಾದ ಮೇಲೆ, ಆದರೆ ಅಶ್ಚರ್ಯವಾಗುತ್ತದೆ 2 ಲಕ್ಷ ರೂಪಾಯಿಗಳ ಟೆಂಡರ್ ಆದರ ಮೊತ್ತ 1.53 ಕೋಟಿ ರೂಪ್ಪಾಯಿಗಳು, 2 ಲಕ್ಷ ರೂಪಾಯಿಗಳ ಟೆಂಡರ್ ಯಾರೋ ಒಬ್ಬರಿಗೆ ಇತ್ತು, ಅದನ್ನು ಸನ್ಮಾನ್ಯ ನಾಗರಾಜುರವರಿಗೆ ಕೊಟ್ಟನಂತರ ಆದರ ಮೊತ್ತ ಎಷ್ಟಾಯಿತೆಂದರೆ, 1.53 ಕೋಟಿ ರೂಪಾಯಿಗಳಾಯಿತು. ಇದು ಕೇವಲ ನಾನು ಹೇಳಿದ ಹಾಗೆ 7,362 ಎಕರೆ ಪ್ರದೇಶದಲ್ಲಿರುವಂತಹ ರಸ್ತೆಯನ್ನು ಗುಡಿಸಲಿಕ್ಕೋಸ್ಕರವಾಗಿ ; ಇದು ಎರಡೂ ಕಾಕತಾಳೀಯ ; ಬೋರ್‌ವೆಲ್‌ನ್ನು ಡ್ರಿಲ್ ಮಾಡುವುದಕ್ಕೋಸ್ಕರವಾಗಿ ಕೊಟ್ಟಿದ್ದೇವೆಂದು ಹೇಳಿದ್ದಾರೆ. ಇವರು 271 ಬೋರ್‌ವೆಲ್‌ಗಳ ಬಗ್ಗೆ ಬಿಲ್ಲನ್ನು ಕೊಟ್ಟಿದ್ದಾರೆ. ಆದರೆ ಇವರು ಲೋಕಾಯುಕ್ತಕ್ಕೆ 325 ಬೋರ್‌ವೆಲ್‌ಗಳನ್ನು ತೋಡಿದ್ದೇವೆಂದು ವಿವರ ಕೊಟ್ಟಿದ್ದಾರೆ. ಆದರ ಮೊತ್ತ 1,54,27,836 ರೂಪಾಯಿಗಳು ಯಾವಾಗ ಎಂದರೆ ಕೇವಲ 2 ವರ್ಷಗಳ ಕಾಲದಲ್ಲಿ ಆವರು ಬೋರ್‌ವೆಲ್‌ನ್ನು ತೋಡಿದಂತಹ ಕಂಟ್ರಾಕ್ಟ್‌ದಾರನಿಗೆ ನೀಡಿದ ಮೊತ್ತ ಇಷ್ಟಾಗಿದೆ. ಆದರೆ ಸಿಎಜಿಯ ವರದಿಗೆ ಬೋರ್‌ವೆಲ್‌ಗಳು ಎಲ್ಲಿದೆ ಎಂಬುದು ಗೊತ್ತಾಗಿಲ್ಲ. ಮಾನ್ಯ ಸುರೇಶ್‌ಕುಮಾರ್‌ರವರು ಹೇಳುವಾಗ ಬೋರವೆಲ್‌ಗಳನ್ನು ಕೂಡ ನುಂಗಿರುವುದನ್ನು ಆ ಸಂದರ್ಭದಲ್ಲಿ ನಾನು ಹೇಳಬೇಕಾಗಿತ್ತು. ಬಾಹ್ಯವಾಗಿರುವುದನ್ನೆಲ್ಲಾ ನುಂಗಿದ್ದೇವೆ, ಆದರೆ ಭೂಮಿಯೊಳಗಡೆ ಇರುವಂತಹದ್ದನ್ನು ನುಂಗುವಂತಹ ವ್ಯವಸ್ಥೆಗಳು ಹೇಗಾಗಿದೆ ; ಈ ಭಾಗ್ಯಜ್ಯೋತಿ ಯೋಜನೆ, ಇದು ಯಾರ ಯೋಜನೆ, ಮಾನ್ಯ ಪಾರ್ಲಿಮೆಂಟರಿ ಸಚಿವರು ಸದನದಲ್ಲಿದ್ದಾರೆ, ಈ ಸ್ಕೀಮ್ ಯಾರದ್ದು ? ತಾವು ಪರಿಶಿಷ್ಠ ಜಾತಿಯ ಬಂಧುಗಳು ಯಾರಿದ್ದಾರೆ, ಬಡವರು ಯಾರಿದ್ದಾರೆ, ಅವರ ಮನೆಗೆ ಭಾಗ್ಯಜ್ಯೋತಿಯ ಕನೆಕ್ಷನ್ ಕೊಟ್ಟು ಅದಕ್ಕೆ ಪ್ರೈವೇಟ್ ಡೆಫಾಸಿಟ್‌ನ್ನು ಮಾಡುತ್ತೀರಿ, ಆ ಹಣವನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿ ಅದರ ಮೂಲಕ ತಾವು ಹಣವನ್ನು ಪಡೆಯುತ್ತಿದ್ದೀರಿ. ಈ ಕಾರ್ಯಕ್ರಮವನ್ನು ಬಹಳ ಯಶಸ್ವಿಯಾಗಿ ರಾಜ್ಯದಲ್ಲಿ ಮಾಡಿದ್ದೀರಿ, ನಾನು ಇಲ್ಲವೆಂದು ಹೇಳುತ್ತಿಲ್ಲ. ಆದರೆ ನಿಮಗಿಂತ ಯಶಸ್ವಿಯಾಗಿ ಮಾಡಿದ್ದಾರಲ್ಲಾ, ಭಾಗ್ಯಜ್ಯೋತಿ ಹಣವನ್ನು ಯಾರು ಪರಿಶಿಷ್ಠ ಜಾತಿ ವರ್ಗದವರಿಗೆ 18 ಪರ್ಸೆಂಟ್ ಹಣವನ್ನು ಖರ್ಚು ಮಾಡಬೇಕಾಗಿತ್ತೋ ಆ ಹಣದಲ್ಲಿ 27 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಕೇಂದ್ರ ಸರ್ಕಾರದವರು ಕೊಡುವ ಒಂದು ಭಾಗವಿರಲಿ.

ಶ್ರೀ ಎ. ರಾಮದಾಸ್ :- (ಮುಂದು)

ಕೃಷ್ಣರಾಜಪುರದ ಸಿಎಂಸಿಯವರು 27 ಕೋಟಿ ರೂಪಾಯಿಗಳ ಹಣವನ್ನು ಭಾಗ್ಯಜ್ಯೋತಿ ಗೋಸ್ಕರವಾಗಿ ಖರ್ಚು ಮಾಡಿದ್ದಾರೆ. ಆದರೆ ನಾನು ಏತಕ್ಕಾಗಿ ಇಷ್ಟು ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದೇನೆಂದರೆ, ಒಂದು ಕಡೆ ನಾನು ಅಭಿನಂದನೆಗಳನ್ನು ಮಾನ್ಯ ಮುಖ್ಯಮಂತ್ರಿಗಳಿಗೆ

ಸಲ್ಲಿಸಿದೆ. ತಾವು ಸಂವಿಧಾನದಲ್ಲಿರತಕ್ಕಂತಹ 149, 150, 151 ಇದರ ಪ್ರಾವಿಜನ್ ಪ್ರಕಾರವಾಗಿ ತಾವು ಕನ್ಸೆಂಟ್‌ನ್ನು ಕೊಟ್ಟು ಸಿಎಜಿಯವರನ್ನು ಈ ಒಂದು ಲೋಕಲ್ ಬಾಡಿಗಳೂ ಕೂಡ ಪ್ರಾಮಾಣಿಕವಾಗಿ ಕೆಲಸವನ್ನು ಮಾಡಬೇಕೆಂದು ತಾವು ಆರ್ಡರ್ ಮಾಡಿದ್ದೀರಿ. ಇದು ರಾಜ್ಯದಲ್ಲಿ ಮೊದಲನೆಯದಾಗಿದೆ ; ಇದು ಯಾವಾಗ ಪ್ರಾರಂಭವಾಗಿಯಿತೆಂದರೆ 3ನೇ ತಾರೀಖಿನಂದು ಕೊನೆಯಾಗಿದ್ದು ಯಾವಾಗ ಎಂದರೆ ಜೂನ್ 30, ಕೇವಲ ಒಂದು ತಿಂಗಳೊಳಗಾಗಿ ಒಂದು ಸಿಎಂಸಿ ಯೊಳಗಡೆ, ಎಲೆಕ್ಟ್ರಿಕಲ್ ಗೂಡ್ಸ್‌ಗಳು ಏನಿವೆ ಇವುಗಳಿಗೆ ಸಂಬಂಧಪಟ್ಟ ಹಗರಣಗಳನ್ನು ಬೀದಿಗೆಳೆದ ಮೇಲೆ ಇದರ ಬಗ್ಗೆ ಸರ್ಕಾರಕ್ಕೆ ಅರ್ಥವಾಯಿತು. ಇನ್ನು 7 ಸಿಎಂಸಿಗಳಲ್ಲಿ ಎಷ್ಟು ಹಣವಾಗಬಹುದು ? ಇನ್ನು ಸಿವಿಲ್ ವರ್ಕ್ಸ್‌ಗಳನ್ನು ತೆಗೆದುಕೊಂಡರೆ ವ್ಯವಸ್ಥೆಗಳೇನು ? ಕೆ.ಆರ್. ಪುರಂನಲ್ಲಿ ಸಿವಿಲ್‌ಗೋಸ್ಕರವಾಗಿ ಖರ್ಚು ಮಾಡಿದಂತಹ ಹಣ 31,56,76,600-00 ರೂಪಾಯಿಗಳು, ಅದು ಯಾವ ಯಾವ ರೀತಿಯಲ್ಲಿ ಖರ್ಚಾಗಿದೆ ಎಂಬುದರ ಬಗ್ಗೆ ವರದಿಯನ್ನು ಸಿಎಜಿಯವರು ಕೊಡುವುದಕ್ಕೆ ಮುಂಚೆ ಇನ್ನೂ ತನಿಖೆಯು ಪ್ರಾರಂಭವಾಗುವಂತಹ ಸಂದರ್ಭದಲ್ಲಿ, ಆ ತನಿಖೆಯನ್ನು ಅರ್ಧದಲ್ಲಿ ನಿಲ್ಲಿಸಿದವರು ಯಾರು ? ಇದನ್ನು ಏತಕ್ಕಾಗಿ ನಿಲ್ಲಿಸಿದರು ? ಈ ವಿಚಾರಗಳು ಮುಂದೆ ಬರಬೇಕಾಗುತ್ತದೆ. ಈ ದೃಷ್ಟಿಯಲ್ಲಿ ಸಮಗ್ರವಾಗಿ ಏನು ಟ್ರಾನ್ಸ್‌ಫರೆನ್ಸಿ ಎಂದು ಈ ಸರ್ಕಾರ ಹತ್ತಾರು ಬಾರಿ ಹೇಳುತ್ತಿದ್ದಿರೋ ಈ ಪಾರದರ್ಶಕತೆಯ ವ್ಯವಸ್ಥೆಯನ್ನು ಒಂದು ಕಡೆ ಲೋಕಾಯುಕ್ತರವರು ತನ್ನದೇ ಆದಂತಹ ತನಿಖೆಯನ್ನು ಮಾಡಲಿ, ಆದರ ಜೊತೆಯಲ್ಲಿ ಸಿಎಜಿಯವರು ಏನು ಪ್ರಾರಂಭ ಮಾಡಿದ್ದರೋ ಆ ಒಂದು ಫಿಸಿಕಲ್ ಸರ್ವೆ ಮತ್ತು ಅಕೌಂಟ್‌ನ್ನು ಏನು ನೋಡುತ್ತಿತ್ತೋ ಅದನ್ನು ಮತ್ತೆ ಮುಂದುವರಿಸಬೇಕು. ಇದಕ್ಕೆ ಅವಕಾಶವನ್ನು ಮಾಡಿಕೊಡಬೇಕು, ಸೆಂಟ್ರಲ್ ಆಡಿಟ್ ಟೀಮ್‌ನವರು ಏನು ಕೆಲಸವನ್ನು ಪ್ರಾರಂಭ ಮಾಡಿದ್ದರೋ ಅದನ್ನು ಅರ್ಧಕ್ಕೆ ನಿಲ್ಲಿಸುವಂತಹ ಕೆಲಸವೇನಾಗಿದೆ, ಇದಾಗಬಾರದು. ರಾಜ್ಯದ ಹಿತದೃಷ್ಟಿಯಿಂದ ಆಗಬಾರದೆಂಬ ಅಂಶವನ್ನು ಹೇಳುತ್ತಾ ನಾನು ಇದಕ್ಕೆ ಸಂಬಂಧಪಟ್ಟಹಾಗೆ ಹಣಕಾಸಿನ ಇಲಾಖೆಯ ಅಧಿಕಾರಿಗಳು, ರೆವಿನ್ಯೂ ಇಲಾಖೆಯ ಅಧಿಕಾರಿಳು, ಐಜಿಆರ್‌ರವರು ಮತ್ತು ಸಂಬಂಧಪಟ್ಟ ಕ್ಷೇತ್ರದ ಶಾಸಕರುಗಳು ಮತ್ತು ಮಂತ್ರಿ ಇವರುಗಳ ಪಾಲು ಇರುವ ದೃಷ್ಟಿಯಿಂದ, ಮೊದಲೇ ಪಿ.ಜಿ.ಆರ್. ಸಿಂಧ್ಯಾರವರು ಪ್ರಸ್ತಾಪ ಮಾಡಿದ ಹಾಗೆ ಇದರಲ್ಲಿ ಲೋಯರ್ ಆಫೀಸರ್‌ಗಳು ಹೋಗಿ ಇನ್‌ವೆಸ್ಟಿಗೇಟ್ ಮಾಡಿಕೊಂಡು ಬರಲು ತುಂಬಾ ಕಷ್ಟವಾದ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಈ ಒಂದು ತನಿಖೆಯನ್ನು ಸಿಬಿಐಗೆ ವಹಿಸಬೇಕು, ಆದರ ಜೊತೆಯಲ್ಲಿ ಇದಿಷ್ಟು ಇನ್‌ವಾಲ್ವ್‌ಮೆಂಟ್, ಇದರ ಕೇವಲ ನಾನು ನಿಂತು ಬೇರೆ ಪಕ್ಷದವನಾಗಿ ಭಾಷಣವನ್ನು ಮಾಡಿದರೆ ಅದನ್ನು ನಾನು ಪೊಲಿಟಿಕಲ್ ಆಗಿ ತೆಗೆದುಕೊಂಡೆ ಎನ್ನಿಸುತ್ತದೆ. ಆದರೆ ಕೇಂದ್ರದ ಸಿಎಜಿಯವರೇ ಮಂತ್ರಿಗಳ ಇನ್‌ವಾಲ್ವ್‌ಮೆಂಟ್ ಇದು ವಿಚಾರವನ್ನು ಇದರಲ್ಲಿ ಒಂದು ದೊಡ್ಡ ಸಿಂಡಿಕೇಟ್ ಇರುವಂತಹ ಎಲ್ಲಾ ಅಂಶಗಳನ್ನು ಇಲ್ಲಿ ತಂದಿರುವಂತಹ ವಿಚಾರ ಇರುವುದರಿಂದ ದಯಮಾಡಿ ಅವರ ರಾಜೀನಾಮೆಯನ್ನು ಮಾನ್ಯ ಮುಖ್ಯಮಂತ್ರಿಗಳು ತೆಗೆದುಕೊಳ್ಳಬೇಕು. ಇದಕ್ಕೆ ಸಂಬಂಧಪಟ್ಟ ತನಿಖೆಯನ್ನು ನಾನು ಆಗಲೇ ಪ್ರಸ್ತಾಪ ಮಾಡಿದಹಾಗೆ, ಇದನ್ನು ಕೇಂದ್ರದ ಒಂದು ಸಂಸ್ಥೆಗೆ ವಹಿಸುವಂತಹ ಕೆಲಸವಾಗಬೇಕು, ಆದರ ಮೂಲಕ ತಾವು ಟ್ರಾನ್ಸ್‌ಫರೆನ್ಸಿ ಎಂದು ಹೇಳಿಕೊಳ್ಳುತ್ತಿದ್ದೀರಿ, ಅದು ಪ್ರಾಮಾಣಿಕವಾಗಿ ಬೆಳಕಿಗೆ ಬರುವುದಕ್ಕೆ ವ್ಯವಸ್ಥೆಯಾಗಬೇಕೆಂಬ

ಅಂಶವನ್ನು ಪ್ರಸ್ತಾಪ ಮಾಡುತ್ತಾ ನೀವು ನನಗೆ ಈ ಒಂದು ವಿಚಾರಗಳನ್ನು ಹೇಳುವುದಕ್ಕೆ ಅವಕಾಶವನ್ನು ಮಾಡಿಕೊಟ್ಟಿದ್ದಕ್ಕೋಸ್ಕರವಾಗಿ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ ; ನಮಸ್ಕಾರ.

ಶ್ರೀ ಬಿ.ಎನ್. ಬಚ್ಚೇಗೌಡ (ಹೊಸಕೋಟೆ) :- ಮಾನ್ಯ ಛೇರ್ಮನ್‌ರವರೆ, ಲೋಕಾಯುಕ್ತದ ಧಾಳಿಯಾದ ಮೇಲೆ ಇವತ್ತು 7 ನಗರಸಭೆಗಳು ಮತ್ತು ಪುರಸಭೆ, ನಮ್ಮ ಬೆಂಗಳೂರು ನಗರದ ವ್ಯಾಪ್ತಿಯಲ್ಲಿ ಬರತಕ್ಕಂತಹ ಈ ನಗರಸಭೆಗಳಲ್ಲಿ ಇವತ್ತು ಈ ಒಂದು ದೊಡ್ಡ ಕರ್ಮಕಾಂಡ, ಇದರಲ್ಲಿ ಯಾವ ಪದವನ್ನಾದರೂ ಕೂಡ ಬಳಸಬಹುದು ; ಅಥವಾ ಹಗಲು ದರೋಡೆ, ಲೂಟಿಯಾಗಿರುವುದು. ಸರ್ಕಾರ ಇವತ್ತು ಖಜಾನೆಯನ್ನು ಲೂಟಿ ಮಾಡಿ 250 ಕೋಟಿ ರೂಪಾಯಿಗಳನ್ನು ಅಕ್ರಮವಾಗಿ ಪಡೆದು ಖರ್ಚು ಮಾಡಿದ್ದಾರೆ. ಇದರ ಬಗ್ಗೆ ಮಾನ್ಯ ಸದಸ್ಯರು ಕೇಳಬೇಕು, ಇದು ರಾಜ್ಯದಲ್ಲಿ ಪ್ರಥಮ ಬಾರಿಗೆ ಇಂತಹ ಒಂದು ದೊಡ್ಡ ಹಗರಣ, ಹಣಕಾಸಿನ ಅವ್ಯವಹಾರ ಆಗಿರುವುದು, ಯಾವ ರೀತಿನೀತಿಗಳನ್ನು ಅಳವಡಿಸದೇ ಇವತ್ತು ಹಣವನ್ನು ಖರ್ಚು ಮಾಡಿರತಕ್ಕಂಥಾದ್ದು, ಅದನ್ನು ನಾವು ಕಂಡಿರತಕ್ಕಂತಹ ವಿಷಯವಾಗಿದೆ. ನಾನು ಅಂದುಕೊಂಡಿದ್ದೇನೆ, ಕರ್ನಾಟಕದ ರಾಜಕೀಯದ ಇತಿಹಾಸದಲ್ಲಿ ಇಷ್ಟು ದೊಡ್ಡ ಹಗರಣ ಯಾವುದು ಆಗಿರಲಿಲ್ಲ. ಕಾರಣವೇನೆಂದರೆ, ಅವರಿಗೆ ಇಷ್ಟು ಹೆಚ್ಚು ಹಣ ಬಂತು. ನಮಗೆಲ್ಲಾ ಬಂದಿದ್ದರೆ ಅದನ್ನು ನಾವು ಖರ್ಚು ಮಾಡುತ್ತಿದ್ದೆವು. ನಮ್ಮ ನಮ್ಮ ತಾಲ್ಲೂಕಿನಲ್ಲಿ ಅಭಿವೃದ್ಧಿಪಡಿಸುತ್ತಿದ್ದೆವು, ಆದರೆ ನಗರಜಿಲ್ಲೆಯ ವ್ಯಾಪ್ತಿಯಲ್ಲಿ ಇದು ಬಂದಂತಹ ಹಣವೆಂದು ಹೇಳಿ ಈಗಾಗಲೇ ಮಾನ್ಯ ಸುರೇಶ್‌ಕುಮಾರ್‌ರವರು ಮಾತನಾಡಿದರು. ಇವತ್ತು ಸಿಎಜಿ ರಿಪೋರ್ಟ್ ಏನಿದೆ ಎಂದರೆ 23 ಕೋಟಿ ರೂಪಾಯಿಗಳು ಪಡೆಯಬೇಕಾಗಿರುವಂತಹದ್ದು, ಸುಮಾರು 263 ಕೋಟಿ ರೂಪಾಯಿಗಳನ್ನು ಪಡೆದಂತಾದ್ದರಿಂದ, ಇಂತಹ ಅವ್ಯವಹಾರಗಳಿಗೆ ಕಾರಣವಾಯಿತು, ಎಲ್ಲಾ ನಿಯಮಗಳನ್ನು ಗಾಳಿಗೆ ತೂರಿ ನಡೆದುಕೊಂಡಂತಹ ರೀತಿಗಳನ್ನು ಸಾಕಷ್ಟು ವಿಧದಲ್ಲಿ ಇವತ್ತು ಮಾನ್ಯ ಸದಸ್ಯರಾದ ಶ್ರೀ ಎ. ರಾಮದಾಸ್‌ರವರು ಹೇಳಿದರು, ಮಾನ್ಯ ಸುರೇಶ್‌ಕುಮಾರ್‌ರವರು, ಶ್ರೀ ಪಿ.ಜಿ.ಆರ್. ಸಿಂಧ್ಯಾರವರು ಇದರ ಬಗ್ಗೆ ನಮ್ಮ ನಾಯಕರೂ ಸಹ ತಿಳಿಸಿದ್ದಾರೆ. ಇವತ್ತು 80 ಕೋಟಿ ರೂಪಾಯಿಗಳಷ್ಟು ಅವ್ಯವಹಾರ ಕೃಷ್ಣರಾಜಪುರ ಮತ್ತು ಮಹದೇವಪುರದಲ್ಲಿ ಖರೀದಿಗಳಲ್ಲಿ ಆಗಿದೆ. ಈಗ ಮಾಡಿರತಕ್ಕಂಥ ಖರೀದಿಗಳಲ್ಲಿ ಹೆಚ್ಚು, ಈಗಾಗಲೇ ಮಾನ್ಯ ರಾಮದಾಸ್‌ರವರು ತಿಳಿಸಿದಹಾಗೆ, ಸುಮಾರು 16 ಕೋಟಿ ರೂಪಾಯಿಗಳಷ್ಟು ವಿದ್ಯುಚ್ಛಕ್ತಿ ಮೆಟೀರಿಯಲ್ಸ್ ಪರ್ಚೇಸ್‌ಗೆ ಹೋಗಿರುವುದು, ಅದು ಹೋಗಿರುವುದು ಇಬ್ಬರಿಗೆ. ಅವರ್‍ಯಾರೆಂದರೆ, ಶ್ರೀ ಅರುಣ್‌ಕುಮಾರ್ ಮತ್ತು ಶ್ರೀ ಲೋಕೇಶ, ಶಿಲ್ಪಾ ಎಲೆಕ್ಟ್ರಿಕಲ್ಸ್ ಎಂಬುವವರಿಗೆ ಕೊಟ್ಟಿರುವುದು. ಅವರಿಗೆ 16 ಕೋಟಿ ರೂಪಾಯಿಗಳಷ್ಟು ಸಾಮಾನು, ಅದರಲ್ಲಿ 30 ವಾರ್ಡುಗಳಿಗೆ 44 ಹೈಮಾಸ್ಟ್ ಲೈಟ್‌ಗಳನ್ನು ಅಂದರೆ ನನ್ನ ಅಂದಾಜು ಅನ್ನಿಸುತ್ತದೆ ಬೆಂಗಳೂರು ಸಿಟಿಯಲ್ಲೂ ಅಷ್ಟು ಇಲ್ಲ ; ಅದನ್ನು ಹಾಕಿದ್ದಾರೆ, ಅದಕ್ಕೆ ಕೊಟ್ಟಿರುವಂತಹ ಬೆಲೆ ಎಂದರೆ ಮಾನ್ಯ ರಾಮದಾಸ್‌ರವರು ಹೇಳಿದಹಾಗೆ 3,50,000-00 ರೂಪಾಯಿಗಳು. ಇದಕ್ಕೆ 8 ರಿಂದ 9 ಲಕ್ಷ ರೂಪಾಯಿಗಳನ್ನು ಕೊಟ್ಟು ಅದನ್ನು ಅಳವಡಿಸಿರತಕ್ಕಂಥದ್ದು, ಅದು ಇವತ್ತು ಅಲ್ಲಿರತಕ್ಕಂತಹ ವಿಶೇಷವಾಗಿದೆ. ಆದರ ಜೊತೆಗೆ ಐರನ್ ಪೋಲ್ಸ್ ಅಂತ....

ಶ್ರೀ ಎಂ.ಪಿ. ಅಪ್ಪಚ್ಚುರಂಜನ್ :- ಅದು ಏನಾದರೂ ಚಿನ್ನದ ಲೈಟ್ ಎಂಬುದನ್ನು ಚೆಕ್ ಮಾಡಿದರೆ ಒಳ್ಳೆಯದಿತ್ತು. ಅವರು ಚಿನ್ನದ್ದು ಹಾಕಿದ್ದರೆ.

ಶ್ರೀ ಬಿ.ಎನ್. ಬಚ್ಚೇಗೌಡ :- ಅದನ್ನು ತಿಳಿದುಕೊಳ್ಳಬೇಕು. ಐರನ್ ಪೋಲ್ಸ್ ಎಂದು ಹೇಳಿ, ಸಿಮೆಂಟ್ ಪೋಲ್ಸ್‌ನ್ನು ಬದಲಾಯಿಸಿ ಅದನ್ನು ಸ್ಥಳಾಂತರಿಸುವುದು ಬೇಕಾಗಿಲ್ಲವೆಂದು ಎಲ್ಲಾ ಕಡೆಯೂ ಐರನ್ ಪೋಲ್‌ಗಳನ್ನು ಹಾಕಿಕೊಂಡು ಮೈಸೂರು ಲ್ಯಾಂಪ್ಸ್ ಫಿಟ್ಟಿಂಗ್ಸ್, ಆ ಫಿಟಿಂಗ್ಸ್ ಎಂದು ಹೇಳಿ ಒಂದಕ್ಕೆ ನಾಲ್ಕು ಪಟ್ಟಿನಷ್ಟು 40 ರಿಂದ 50 ಸಾವಿರ ರೂಪಾಯಿಗಳ ಒಂದು ಫಿಟಿಂಗ್ಸ್ ಅದನ್ನು ಕೊಡುತ್ತೇವೆಂದು ಕೊಂಡುಕೊಂಡು ಅಳವಡಿಸಿದರು. ಅದರಲ್ಲಿ ಈಗ ಅವ್ಯವಹಾರಗಳಾಗಿವೆ, ಇದರ ಜೊತೆಗೆ ಬೋರವೆಲ್ ಡ್ರಿಲ್ಲಿಂಗ್ ಮತ್ತು ಮೆಟೀರಿಯಲ್ಸ್ ಕೊಟ್ಟಿರುವುದು, ಇದರ ಬಗ್ಗೆ ಕೇಳಬೇಕು ಸುಮಾರು ಒಂದೂವರೆ ಕೋಟಿ ರೂಪಾಯಿಗಳು ಬೋರವೇಲ್‌ನ್ನು ಡ್ರಿಲ್ ಮಾಡಿರುವುದು ಮತ್ತು ಮೆಟೀರಿಯಲ್ಸ್ ಪರ್ಚೇಸ್‌ಗೆ ಒಂದೂವರೆ ಕೋಟಿ ರೂಪಾಯಿಗಳ ಹಣವನ್ನು ಕೊಟ್ಟಿದ್ದಾರೆ. ಇವತ್ತು ಮಾನ್ಯ ಮುಖ್ಯಮಂತ್ರಿಗಳು ಆ ಕ್ಷೇತ್ರಕ್ಕೆ ಬಂದಿದ್ದರು, ಅವರು ಬಂದಿದ್ದಕ್ಕೆ ಖರ್ಚು ಹಾಕಿರುವುದು 11 ಲಕ್ಷ ರೂಪಾಯಿಗಳು. ಡಿಸೆಂಬರ್‌ನಲ್ಲಿ 3,83,865-00 ರೂಪಾಯಿಗಳಿಗೆ ಒಂದು ಬಿಲ್ ಮತ್ತೊಂದು ಬಿಲ್ 1,70,000-00 ರೂಪಾಯಿಗಳು, 3,56,475-00 ರೂಪಾಯಿಗಳು ಒಂದು ಬಿಲ್, ಇದರ ಜೊತೆಗೆ ಅವರ ಒಂದು ಸ್ವಂತ ಸೌತ್ ಈಸ್ಟ್ ಏಷಿಯಾ ಕಾಲೇಜು ಎಂದು ಅವರ ವಿದ್ಯಾಸಂಸ್ಥೆ ಇದೆ, ಅಲ್ಲಿ ಒಂದು ರಾಷ್ಟ್ರೀಯ ಬಾವೈಕ್ಯತಾ ಕಾರ್ಯಕ್ರಮಕ್ಕೆ ಮಾನ್ಯ ಮುಖ್ಯಮಂತ್ರಿಗಳು ಹೋಗಿದ್ದರು. ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳ ಹೆಸರಿನಲ್ಲಿ 1,89,600-00 ರೂಪಾಯಿಗಳ ಬಿಲ್‌ನ್ನು ಹಾಕಿದ್ದಾರೆ. ಟಿಎಂಸಿ ಬಿಲ್, ಸಿಎಂಸಿಗಳು ಕೊಟ್ಟಿರತಕ್ಕಂತಹ ಬಿಲ್, ಮಾನ್ಯ ಮುಖ್ಯಮಂತ್ರಿಗಳು ಬಂದಿದ್ದಕ್ಕೆ ಪೆಂಡಾಲ್ ಹಾಕಿರುವಂತಹದ್ದು, ಶಾಮಿಯಾನ ವೇದಿಕೆ ನಿರ್ಮಾಣಕ್ಕಾಗಿ ಖರ್ಚು ಮಾಡಿದ್ದಾರೆ. ಇದನ್ನು ನಾವು ಎಲ್ಲಿಯಾದರೂ ಕೇಳಿದ್ದೇವಾ ? ಇದನ್ನು ಮಂತ್ರಿಗಳು ಮಾಡಿಕೊಳ್ಳಬೇಕು, ಇದನ್ನು ಯಾರಾದರೂ ಕಾರ್ಯಕರ್ತರುಗಳು ಮಾಡಿಕೊಳ್ಳಬೇಕು. ಇದನ್ನು ಸಿಎಂಸಿಗೆ ಚಾರ್ಜ್ ಮಾಡಿ ಸುಮಾರು 11 ಲಕ್ಷ ರೂಪಾಯಿಗಳನ್ನು ಖರ್ಚು ತೋರಿಸಿದ್ದಾರೆ. ಅದನ್ನು ಅವರ ಸಂಬಂಧೀಕರಿಗೆ ಶಾಮಿಯಾನವನ್ನು ಹಾಕಲು ಕೊಟ್ಟು ಇದನ್ನು ಹಾಕಿಸಿದ್ದಾರೆ. ಅಲ್ಲಿ ಯಾವ ರೀತಿಯಾಗಿ ಇದನ್ನು ಪಾಸ್ ಮಾಡಿಸಿ 11 ಲಕ್ಷ ರೂಪಾಯಿಗಳನ್ನು ಕೊಡುವುದಕ್ಕಾಗುತ್ತದೆಯೇ ? ಇದಕ್ಕೆ ಅಲ್ಲಿಯ ಸಿಎಂಸಿಯಿಂದ ಪೇಮೆಂಟ್ ಕೊಟ್ಟಿರುತ್ತಾರೆ. ಇದರ ಜೊತೆಗೆ ವಾಟರ್ ಮೆಟೀರಿಯಲ್‌ಗಳನ್ನು ಪರ್ಚೇಸ್ ಮಾಡಿರುವ ಬಗ್ಗೆ ಮಾನ್ಯ ಸದಸ್ಯರು ಈಗಾಗಲೇ ತಿಳಿಸಿದ್ದಾರೆ. ಒಂದು ಕಡೆ 2,10,000-00 ರೂಪಾಯಿಗಳನ್ನು ಪರ್ಚೇಸ್ ಆಫ್ ವಾಟರ್ ಮೆಟೇರಿಯಲ್ಸ್, ಇದು ನೀರಿಗಾಗಿ ಬೇಕಾಗಿರುವುದು. ಒಂದು ಕಡೆ ಬೋರ್‌ವೆಲ್ ಡ್ರಿಲ್ಲಿಂಗ್ ಎಂದು ಹೇಳಿ, ಅದಕ್ಕೆ ಒಂದೂವರೆ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಇತ್ತ ಕಡೆ ವಾಟರ್ ಮೆಟೇರಿಯಲ್ಸ್ ಪರ್ಚೇಸ್ ಎಂದು ಹೇಳಿ, ಅದಕ್ಕೆ 3 ಕೋಟಿ ರೂಪಾಯಿಗಳು, ಒಟ್ಟು ನಾಲ್ಕೂವರೆ ಕೋಟಿ ರೂಪಾಯಿಗಳು. ಬೋರ್‌ವೆಲ್ ಡ್ರಿಲಿಂಗ್ ಎಂದು ಅವರೇ ರುಜು ಮಾಡಿ ಲೋಕಾಯುಕ್ತಕ್ಕೆ ವರದಿಯನ್ನು ಕೊಟ್ಟಿದ್ದಾರೆ. ಅದೇನೆಂದರೆ, ಡ್ರಿಲ್ ಮಾಡಿರುವ ಪಂಪ್ಸ್ ಎಷ್ಟು ಎಂದು ಹೇಳಿ ವರದಿಯನ್ನು ಕೊಟ್ಟಿದ್ದಾರೆ. ಕೊಳವೆ ಬಾವಿಗಳನ್ನು 324 ಮಾಡಿರುವುದು, ಇದಕ್ಕೆ ಖರ್ಚಾಗಿರುವ ಹಣ

ನಾಲ್ಕೂವರೆ ಕೋಟಿ ರೂಪಾಯಿಗಳು. 325 ಬೋರ್‌ವೆಲ್ ಹಾಕಲಿಕ್ಕೆ ಒಂದೂವರೆ ಕೋಟಿ ರೂಪಾಯಿಗಳ ಖರ್ಚು. ಪರ್ಚೇಸ್ ಆಫ್ ವಾಟರ್ ಮೆಟೇರಿಯಲ್ಸ್‌ಗೆ 3 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಲೋಕಾಯುಕ್ತ ಧಾಳಿಯಾದ ಮೇಲೆ ನಮ್ಮದೇನೂ ತಪ್ಪಿಲ್ಲವೆಂದು ಅವರೇ ಕಮಿಟ್ ಮಾಡಿಕೊಂಡಿದ್ದಾರೆ. ಇಲ್ಲದಿದ್ದರೆ ನಮಗೂ ಇಷ್ಟು ಮೆಟೇರಿಯಲ್‌ಗಳು ಸಿಗುತ್ತಿರಲಿಲ್ಲ.

5.50 ಪಿ.ಎಂ.

ಇವತ್ತು 25 ಸಾವಿರ ರೂಪಾಯಿಗಳ ಎ.ಸಿ. ಶೀಟ್‌ಗಳಿಗೆ ಅವರು ಕೊಟ್ಟಿರತಕ್ಕಂಥಾದ್ದು 60 ಲಕ್ಷ ರೂಪಾಯಿಗಳು. ವಾಸ್ತವವಾಗಿ ಅದಕ್ಕೆ ಬೇಕಾಗಿರತಕ್ಕಂಥಾದ್ದು ಆರೂವರೆ ಲಕ್ಷ ರೂಪಾಯಿಗಳು ಮಾತ್ರ. 10 x 3ಗೆ ಮುನ್ನೂರು ರೂಪಾಯಿ ಅಂದುಕೊಂಡರೂ ಅಷ್ಟಿಲ್ಲ. ಅದಕ್ಕೆ 250 ರೂಪಾಯಿಗಳಿಂದ 260 ರೂಪಾಯಿ ಇದೆ. ಆದರೆ 25 ಸಾವಿರ ರೂಪಾಯಿಗಳು ಅಂತ ಕೊಟ್ಟಿದ್ದಾರೆ ಸ್ವಾಮಿ. ಅದರ ಪ್ರಕಾರ ಲೆಕ್ಕ ಹಾಕಿದರೆ ಅಂದಾಜು 7 ಲಕ್ಷ ಬರುತ್ತದೆ. 7 ಲಕ್ಷಕ್ಕೆ ಇವರು ಖರ್ಚು ಮಾಡಿರುವಂಥಾದ್ದು 1 ಕೋಟಿ 45 ಲಕ್ಷ 32 ಸಾವಿರದ 78 ರೂಪಾಯಿಗಳು. ಅಂದರೆ ಒಂದೂವರೆ ಕೋಟಿ ರೂಪಾಯಿಗಳ ಹಣವನ್ನು 25 ಎ.ಸಿ. ಶೀಟ್‌ಗಳಿಗೆ ಕೊಟ್ಟಿರತಕ್ಕಂಥಾದ್ದು. ಹೀಗಾಗಿ ಇವತ್ತು ಪ್ರತಿಯೊಂದರಲ್ಲೂ ಅವ್ಯವಹಾರ ಆಗಿದೆ. ಮಾನ್ಯ ಮುಖ್ಯಮಂತ್ರಿಗಳು ಇವತ್ತು ಸಭೆಗೆ ಬಂದಿದ್ದಾರೆ. ತಮ್ಮ ಒಂದು ದೊಡ್ಡ ಸಭೆ ಅಲ್ಲಿ ಆಯಿತು. ಹತ್ತು ನಾಮಫಲಕಗಳನ್ನು ಅಲ್ಲಿ ಹಾಕಲಾಯಿತು. ತಾವು ಬಂದಿದ್ದೀರಿ ಎಂದು ಹೇಳಿ ಆ ಯೋಜನೆಗಳನ್ನು ಒಂದೇ ಕಡೆ ಉದ್ಘಾಟನೆ ಮಾಡಿರತಕ್ಕಂಥಾದ್ದಕ್ಕೆ ಒಂದು ಲಕ್ಷ 75 ಸಾವಿರ ರೂಪಾಯಿಗಳ ಚಾರ್ಜ್ ಮಾಡಿದ್ದಾರೆ. ಮುಖ್ಯಮಂತ್ರಿಗಳು ಬಂದಿದ್ದಾರೆ, ಉದ್ಘಾಟನೆ ಆಗಿರುವುದಕ್ಕೆ, ಹತ್ತು ಕಲ್ಲುಗಳಿಗೆ 1 ಲಕ್ಷ 75 ಸಾವಿರ ರೂಪಾಯಿಗಳನ್ನು ಕೊಟ್ಟಿದ್ದಾರೆ. ಅವರು ಬಂದಿದ್ದಕ್ಕೆ ಸಮಾರಂಭದ ಖರ್ಚು ಎಂದು 11 ಲಕ್ಷ ರೂಪಾಯಿಗಳನ್ನು ತೆಗೆದುಕೊಂಡಿದ್ದಾರೆ. ಮುಖ್ಯಮಂತ್ರಿಗಳ ಹೆಸರಿನಲ್ಲಿ ಸಿ.ಎಂ.ಸಿ.ಗೆ ಚಾರ್ಜ್ ಮಾಡಿರತಕ್ಕಂಥಾದ್ದು, ಅದು ಯಾರ್‍ಯಾರಿಗೆ ಕೊಟ್ಟಿರತಕ್ಕದ್ದು ಎಂದು ಆಮೇಲೆ ನಾನು ಹೇಳುತ್ತೇನೆ. ಆದಾದನಂತರ ಅವರೇ ಒಪ್ಪಿಕೊಂಡಿರುವ ಪ್ರಕಾರ ಬಡ ಮಹಿಳೆಯರಿಗೆ ಹೊಲಿಗೆ ಯಂತ್ರಗಳನ್ನು 1500 ಕೊಟ್ಟಿದ್ದಾರೆ. 2 ಸಾವಿರದಿಂದ 2800 ರೂಪಾಯಿಗಳವರೆಗೆ ಉಷಾ, ಮಾರ್ಟಿನ್ ಮುಂತಾದ ಹೊಲಿಗೆ ಯಂತ್ರಗಳಿಗೆ ಬೆಲೆ ಇರತಕ್ಕಂಥಾದ್ದು. ಈ ಹೊಲಿಗೆ ಯಂತ್ರಗಳು ಎಂದರೆ ಟೈಲರಿಂಗ್ ಮೆಷಿನ್ಸ್‌ಗೆ ಕೊಟ್ಟಿರತಕ್ಕಂಥಾದ್ದು 64 ಲಕ್ಷ ರೂಪಾಯಿಗಳು. ಆ ಮೆಷಿನ್ನುಗಳು ಒಂದೂ ಕೂಡ ಮಾರನೇ ದಿವಸ ಓಡಲಿಲ್ಲ, ಫಲಾನುಭವಿಗಳು ಯಾರು ಎಂದು ಯಾರಿಗೂ ಗೊತ್ತಿಲ್ಲ. ಇವತ್ತಿನವರೆಗೂ ಆ ಹೊಲಿಗೆಯಂತ್ರಗಳು ಯಾರ ಹತ್ತಿರ ಇದೆಯೆಂದು ಗೊತ್ತಿಲ್ಲ. ನಂತರ ವೆಜಿಟೆಬಲ್ ವೆಂಡರ್ಸ್‌ಗಳಿಗೆ ನಾಲ್ಕು ಸೈಕಲ್ ಚಕ್ರಹಾಕಿ ಹಲಸಿನ ಮರದಲ್ಲಿ ತಳ್ಳುವ ಗಾಡಿಗಳನ್ನು ಕೊಟ್ಟಿದ್ದಾರೆ, ಅವುಗಳಲ್ಲಿ ತರಕಾರಿ ಇಟ್ಟು ಮಾರಾಟ ಮಾಡುವುದಕ್ಕೆ ಕೊಟ್ಟಿರುವಂಥಾದ್ದು. ಅವರು ಕೊಟ್ಟಿರತಕ್ಕಂಥ ವರದಿಯಲ್ಲಿ ಅಂಗವಿಕಲರಿಗೆ ಅಥವಾ ತರಕಾರಿ ಮಾರಾಟಗಾರರು ಎಂದು 1300 ಜನರಿಗೆ ಕೊಟ್ಟರು. ಅದಕ್ಕೆ ಕೊಟ್ಟಿರತಕ್ಕಂಥ ಹಣ 9 ಲಕ್ಷ 55 ಸಾವಿರ ರೂಪಾಯಿಗಳು. ಆ ತಳ್ಳುವ ಗಾಡಿಗಳು ಎಲ್ಲಿವೆಯೋ ಗೊತ್ತಿಲ್ಲ. ಏಕೆಂದರೆ ಈ ರೀತಿ 80 ಕೋಟಿ ರೂಪಾಯಿಗಳ ಹಣ ಬಂತಲ್ಲಾ ; ಇದು ಮುಖ್ಯ ಮಂತ್ರಿಗಳಿಗೆ

ಗೊತ್ತಿದೆಯೋ ಇಲ್ಲವೋ. ಮಂಜೂರಾತಿ ಮಾಡಿಸಿಕೊಂಡು ಸಿ.ಎ.ಜಿ. ಯಿಂದ 250 ಕೋಟಿ ರೂ. ಪಡೆದಂಥಾದ್ದು ಖರ್ಚಾಗಬೇಕಲ್ಲಾ ? ಇವರು 1999-2000ಕ್ಕೆ ಬಜೆಟ್ ಮಾಡಿದ್ದು 12 ಕೋಟಿ ರೂ. ಗಳಿಗೆ ಅದನ್ನು ದಿಢೀರನೆ 40 ಕೋಟಿ ರೂ. ಗಳಿಗೆ ಅದೇ ವರ್ಷ ಮಾಡಿಕೊಂಡರು. ಮಾರನೇ ವರ್ಷ 71 ಕೋಟಿ ರೂ. ಗೆ ಮಾಡಿಕೊಂಡರು. ಇದೇ ಕೃಷ್ಣರಾಜಪುರಂನಲ್ಲಿ 12 ಕೋಟಿ ರೂ. ಮೊದಲು ಮಾಡಿಕೊಂಡು ನಂತರ ಅದೇ ಆದಾಯಕ್ಕೆ ಬಜೆಟ್‌ನ್ನು 40 ಕೋಟಿ ರೂ. ಎಂದು ಮಾಡಿಕೊಂಡರು. ಮಾರನೇ ವರ್ಷ ಅದು 71 ಕೋಟಿ ರೂ. ಆಯಿತು. ಇವರು ಟ್ಯಾಕ್ಸ್ ಹಾಕಿದ್ದು ಎಷ್ಟು, ಮನೆಕಂದಾಯ ಏನು ಬಂತು, ಯಾವುದು ವಸೂಲಿ ಮಾಡಿದ್ದಾರೆ ಎಂಬ ಬಗ್ಗೆ ಏನೂ ಇಲ್ಲ. ಟ್ರೆಜರಿಯಲ್ಲಿ ಆಫೀಸರುಗಳನ್ನು ಹಿಡಿದುಕೊಂಡಿದ್ದು ಹಣ ಬಂತು. ಆದರಲ್ಲಿ ಬರುವಂಥ ವರಮಾನದಲ್ಲಿ ಮಂತ್ರಿಗಳು ಹಣ ಖರ್ಚು ಮಾಡಬೇಕು, ಕ್ಷೇತ್ರಾಭಿವೃದ್ಧಿ ಮಾಡಬೇಕು, ಸಿ.ಎಂ.ಸಿ. ಗಳು ಮಾಡಬೇಕು. ಆದರೆ ಇದು ಈ ರೀತಿ ಹೆಚ್ಚು ಹಣ ಪಡೆದು ಖರ್ಚು ಮಾಡಿರತಕ್ಕಂಥಾದ್ದು ಆಗಿದೆ. ಎ.ಸಿ. ಶೀಟುಗಳು ಆಯಿತು, ಆದಾದ ಮೇಲೆ ವೆಜಿಟೆಬಲ್ ವೆಂಡರ್ಸ್‌ದ್ದು ಆಯಿತು. ನಂತರ ಟೈಲರಿಂಗ್ ಮೆಷಿನ್ಸ್ ಆಯಿತು. ಆಮೇಲೆ ಎಲೆಕ್ಟ್ರಿಕಲ್ ಟೈಮರ್ಸ್ ಎಂದು ಹೇಳಿ ಅದೇ ಆರಿಹೋಗುತ್ತದೆ ಮತ್ತು ಅದೇ ಹತ್ತಿಕೊಂಡು ಉರಿಯುವಂಥಾದ್ದು. ಅದಕ್ಕೆ 1 ಕೋಟಿ 17 ಲಕ್ಷ 40 ಸಾವಿರ ರೂಪಾಯಿಗಳನ್ನು ಕೊಟ್ಟಿದ್ದಾರೆ. ಈ ಟೈಮರ್‌ಗಳು ಅದೇ ತಾನಾಗಿಯೇ ಉರಿತಾನೇ ಇರುತ್ತದೆ. ಅದು ಉರೀತಾ ಇದ್ದರೆ 'ಕೃಷ್ಣಪ್ಪನವರ ದೀಪ' ಎಂದು ಮನಸಿನಲ್ಲೇ ಅಂದುಕೊಳ್ಳುವುದು ; ನನ್ನ ಕ್ಷೇತ್ರಕ್ಕೆ ಹೋಗುತ್ತಾ ಇದ್ದಾಗ ಅಲ್ಲಿ ಓಡಾಡುತ್ತಾ ಇದ್ದರೆ. ಟೈಮರ್ಸ್ ಅಳವಡಿಸುವುದಕ್ಕೆ ಅವರು ಇಷ್ಟು ಕೊಟ್ಟಿರತಕ್ಕಂಥಾದ್ದು. ಆಮೇಲೆ ನೇಮ್‌ಬೋರ್ಡ್ಸ್ ಅಂತ.....

ಶ್ರೀ ಎ. ಕೃಷ್ಣಪ್ಪ :- ನಿಮ್ಮ ಕ್ಷೇತ್ರದಲ್ಲಿ 'ಬಚ್ಚೇಗೌಡರ ದೀಪ' ಅಂತಾನೂ ಹೇಳಿ.

ಶ್ರೀ ಬಿ.ಎನ್. ಬಚ್ಚೇಗೌಡ :- ದೀಪಗಳನ್ನು ಹಾಕಬೇಕು, ಹಾಕೋಣ. ನಾನು ಅದನ್ನು ಮಾತನಾಡುವುದಿಲ್ಲ.

ಶ್ರೀ ಎ. ಕೃಷ್ಣಪ್ಪ :- ನಿಮ್ಮ ಕ್ಷೇತ್ರದಲ್ಲಿ ನಾಲ್ಕು ವಾರ್ಡುಗಳಲ್ಲಿ ಮಾಡಲಾಗಿದೆ ಅದಕ್ಕೆ 'ಬಚ್ಚೇಗೌಡರ ದೀಪ' ಎಂದು ಹೇಳುತ್ತೀರಾ ?

ಶ್ರೀ ಬಿ.ಎನ್. ಬಚ್ಚೇಗೌಡ :- ಕೆಲಸ ಮಾಡಿದ್ದೇನೆ, ಮಾಡಿಲ್ಲ ಎನ್ನುವುದಿಲ್ಲ. ಸಭೆಯ ಗಮನಕ್ಕೆ ಈ ವಿಷಯವನ್ನು ನಾನು ತಿಳಿಸುತ್ತಿದ್ದೇನೆ. ಇದರಲ್ಲಿ ಅಕ್ರಮ ಇದ್ದರೆ ತಾವು ಹೇಳಿ. ನೀವು ಹೊಡೆದಿದ್ದೀರಿ ಅಂತಾಗಲೀ ಬೇರೆ ರೀತಿಯಿಂದ ನಾನು ಹೇಳುತ್ತಿಲ್ಲ. ಇವತ್ತು ಒಂದು ದೀಪಕ್ಕೆ ಮೂರು ಲಕ್ಷ ರೂಪಾಯಿ ಎಂದರೆ ....

ಶ್ರೀ ಎ. ಕೃಷ್ಣಪ್ಪ :- 'ನೀವು ಹೊಡೆದಿಲ್ಲ' ಎಂದು ಹೇಳಿದ್ದಕ್ಕೆ ಥ್ಯಾಂಕ್ಸ್.

ಶ್ರೀ ಬಿ.ಎನ್. ಬಚ್ಚೇಗೌಡ :- ನೀವು ದುಡ್ಡೆಲ್ಲಾ ಎತ್ಕೊಂಡು ನಿಮ್ಮ ಮನೆಗೆ ಹೋಗಿಬಿಟ್ಟಿರಿ ಎಂದು ಹೇಳುವಂಥವನು ನಾನಲ್ಲ. ಇದು ಈ ರೀತಿಯಾಗಿ ಅವ್ಯವಹಾರ ಆಗಿದೆ ಎಂದು ಸಭೆಯ ಗಮನಕ್ಕೆ ಮತ್ತು ಸರ್ಕಾರದ ಗಮನಕ್ಕೆ ತರುವಂಥಾದ್ದು. ದೀಪಗಳ ವಿಚಾರದಲ್ಲಿ ಇಷ್ಟೊಂದು ಅವ್ಯವಹಾರ ಆಗಿದೆ. ಮೂರು ಲಕ್ಷ ರೂ. ಇರುವಲ್ಲಿ 9 ಲಕ್ಷ ರೂಪಾಯಿ ಕೊಟ್ಟರೆ,

ಆರು ಲಕ್ಷ ರೂ. ಎಲ್ಲಿ ಹೋಯಿತು ಎಂದು ನಾನು ಕೇಳುವಂಥಾದ್ದು. 1500 ಗಾಡಿಗಳನ್ನು ಕೊಟ್ಟಿದ್ದೀರಿ, ಒಂದು ಗಾಡಿಯೂ ಇಲ್ಲ. ಅದಕ್ಕೆ ಒಂದು ಕೋಟಿ ರೂ. ಕೊಟ್ಟಿದ್ದೀರಲ್ಲಾ, ಅದು ಏನಾಯಿತು ? ಹೊಲಿಗೆ ಯಂತ್ರ ಕೊಟ್ಟಿದ್ದು ಏನಾಯಿತು ? 25 ಸಾವಿರ ಎ.ಸಿ. ಶೀಟ್‌ಗಳಿಗೆ ತೆಗೆದುಕೊಂಡು ಹೋಗಿ 70 ಲಕ್ಷ ರೂ. ಕೊಟ್ಟಿದ್ದಾರಲ್ಲಾ ಅದು ಏನಾಯಿತು ? ಅದು ಬರೇ ಆರು ಲಕ್ಷ ರೂಪಾಯಿ ಕೊಡುವಂಥಾದ್ದು. ಇಂತಹ ಅವ್ಯವಹಾರ ಆಗಿರುವುದರ ಬಗ್ಗೆ ವಿಚಾರಣೆಯಾಗಬೇಕು. ಇದು ಬಹಳ ಅನ್ಯಾಯ ಆಗಿರತಕ್ಕಂಥಾದ್ದು. ಮುಖ್ಯಮಂತ್ರಿಗಳು ಇದರ ಬಗ್ಗೆ ಗಮನಕೊಡಬೇಕಾದಂಥಾದ್ದು ಇದೆ. ಸುಮಾರು 80 ಕೋಟಿ ರೂಪಾಯಿಗಳ ಅವ್ಯವಹಾರ ಆಗಿರತಕ್ಕಂಥಾದ್ದು ಏನಿದೆ ಇದನ್ನು ಸಭೆಯ ಗಮನಕ್ಕೆ ತರುತ್ತಿದ್ದೇವೆ, ಇದು ಹಗಲು ದರೋಡೆಯಾಗಿದೆ. ಜಿಲ್ಲಾ ಟ್ರೆಜರಿ ಆಫೀಸಿನವರು ಅದನ್ನು ರಿಲೀಸ್ ಮಾಡಿರತಕ್ಕಂಥವರು ಯಾರಿದ್ದಾರೆ ಅವರನ್ನು ಮಾತ್ರ ಇವತ್ತು ಅಮಾನತ್ತಿನಲ್ಲಿಡತಕ್ಕಂಥ ಆದೇಶವನ್ನು ಹೊರಡಿಸಿದ್ದಾರೆ. ಅದು ಆದೇಶವಾಗಿದೆ. ಲಕ್ಷ್ಮಯ್ಯ ಮತ್ತು ಇನ್ನಿತರರು ಎಂದು ಒಂದು ಆದೇಶವಾಗಿದೆ. ಸುಂದರಮೂರ್ತಿ, ನಾಗರಾಜು ಎಂಬ ಕೆಲವು ಅಧಿಕಾರಿಗಳನ್ನು ಮಾತ್ರ ಅಮಾನತ್ತಿನಲ್ಲಿಟ್ಟಿದ್ದಾರೆ. ಬೇರೆ ಅಧಿಕಾರಿಗಳು ಎಂತೆಂಥವರು ಅಲ್ಲಿ ಬಂದಿದ್ದರು ಎಂದರೆ ಅವರು ಬೇಕಾದಷ್ಟು ಬೇರೆ ಕಡೆ ಎಲ್ಲಾ ಅವ್ಯವಹಾರ ಮಾಡಿರತಕ್ಕಂಥವರು ಅಲ್ಲಿ ಇವತ್ತು ಕಮಿಷನರ್ ಆಗಿ ಹಾಕಿರತಕ್ಕಂಥಾದ್ದು. ಮಹದೇವಪುರದಲ್ಲಿ ಹಾಕಿರತಕ್ಕಂಥವರು ಅಂತಹವರು. ಅಲ್ಲಿಗೆ ಬಂದಂಥ ಇಂಜಿನಿಯರುಗಳು, ಅಲ್ಲಿ ಕೆಲಸ ಮಾಡಿರತಕ್ಕಂಥವರು ಯಾವ ಟೆಂಡರ್, ನೀತಿ ನಿಯಮ ಯಾವುದೂ ಇಲ್ಲದೆ ವೋಚರ್ ಕಾಪಿಯನ್ನು ಟೆಂಡರ್ ಎಂದು ಕೊಂಡಿದ್ದಂಥವರು. ಇವತ್ತು ಅವರಿಗೆ ಕೆಲಸ ಕಾರ್ಯಗಳನ್ನು ಕೊಟ್ಟಿದ್ದಾರೆ.

ಛೇರ್ಮನ್ :- ರಿಪಿಟೇಷನ್ ಮಾಡಬೇಡಿ. ಇದು ಇವತ್ತೇ ಮುಗಿಸಬೇಕು.

ಶ್ರೀ ಬಿ.ಎನ್. ಬಚ್ಚೇಗೌಡ :- ಹೀಗೆ ಇವತ್ತು ಸಿ.ಎಂ.ಸಿ. ಕ್ಲೀನಿಂಗ್ ಇರಬಹುದು. ಈಗಾಗಲೇ ಕೊಂಡುಕೊಂಡಂಥವರು ಯಾರು, ಅದರ ಬಗ್ಗೆ ತಿಳಿಸಿದ್ದಾರೆ. ಅದೇರೀತಿ ಬೋರ್‌ವೆಲ್ ಮತ್ತು ಪೈಪ್‌ಫಿಟ್ಟಿಂಗ್ ಬಗ್ಗೆ ತಿಳಿಸಿದ್ದಾರೆ. ಅದೇರೀತಿ ಎಲೆಕ್ಟ್ರಿಕಲ್ ವರ್ಕ್ಸ್ ಯಾರಿಗೆ ಕೊಟ್ಟಿರತಕ್ಕಂಥಾದ್ದು ಮತ್ತು ಸಿವಿಲ್ ವರ್ಕ್ಸ್ ಅಂತ ಹೇಳಿ ಮಾಡಿರತಕ್ಕಂಥಾದ್ದು. ಇದು ಸುಮಾರು 31 ಕೋಟಿ ರೂಪಾಯಿಗಳು. ಸಿವಿಲ್ ವರ್ಕ್ಸ್ ಎಂದು ತೋರಿಸಿರುವುದರ ಜೊತೆಗೆ ಅಸ್ಫಾಲ್ಟಿಂಗ್ ಎಂದು ಹೇಳಿ ಸುಮಾರು 8-9 ಕೋಟಿ ರೂ. ನಲ್ಲಿ 60 ಕಿಲೋ ಮೀಟರ್ ಮಾಡಲಾಗಿದೆ ಎಂದು ತೋರಿಸಿದ್ದಾರೆ. ಸುಮಾರು 60 ಕಿಲೋಮೀಟರ್ ಅಸ್ಫಾಲ್ಟಿಂಗ್ - ಡಾಂಬರೀಕರಣ ಎಂದು ತೋರಿರತಕ್ಕದ್ದು. ಚರಂಡಿ ವ್ಯವಸ್ಥೆ, ಜಲ್ಲಿ ವ್ಯವಸ್ಥೆ ಎಂದು ಇವೆಲ್ಲಾ ಅವರೇ ಕೊಟ್ಟಿದ್ದಾರೆ. ಈ ದೃಷ್ಟಿಯಿಂದ ಇವತ್ತು ಅಕ್ರಮವಾಗಿ ಸರ್ಕಾರದಿಂದ ಪಡೆದಿರತಕ್ಕಂಥ ಹೆಚ್ಚು ಹಣ ದಾಸರಹಳ್ಳಿ ಮತ್ತು ಬ್ಯಾಟರಾಯನಪುರ ಈ ನಗರಸಭೆಗಳು ಇವೆ. 60 ಕೋಟಿ ರೂ. ನಲ್ಲಿ 30 ಕೋಟಿ ರೂ. ಹಣವನ್ನು ಇದೇ ರೀತಿ ಪರ್ಚೇಸಿಂಗ್‌ಗೆ ಎಂದು ಉಪಯೋಗಿಸಿದ್ದು ಇವತ್ತು ಲೋಕಾಯುಕ್ತರು ಹೋದಾಗ ಅನೇಕ ಅಧಿಕಾರಿಗಳು ಸಿಗಲಿಲ್ಲ, ಅವರು ಓಡಿಹೋಗಿದ್ದಾರೆ. ಕೆಲವು ದಾಖಲೆಗಳನ್ನು ಸುಟ್ಟು ಹಾಕಿದ್ದಾರೆ. ಸುಟ್ಟುಹೋಗಿರತಕ್ಕಂಥ ದಾಖಲೆಗಳನ್ನು ಅವರು ಎತ್ತಿಕೊಂಡಿದ್ದಾರೆ. ಅಧಿಕಾರಿಗಳು ಬೇಕೆಂತಲೇ ಗೈರುಹಾಜರಾಗಿದ್ದಾರೆ. ಯಲಹಂಕ ಮತ್ತು ಬ್ಯಾಟರಾಯನಪುರ ಈ ಸಿ.ಎಂ.ಸಿ. ಗಳು ಮತ್ತು ಪಟ್ಟಣಗೆರೆ - ಇವೆಲ್ಲಾ ಸುಮಾರು 250 ಕೋಟಿ ರೂ. ಯಷ್ಟು

ಅವ್ಯವಹಾರ ಆಗಿರುವುದು ಮೇಲ್ನೋಟಕ್ಕೆ ಗೊತ್ತಾಗಿದೆ. ಇದರಲ್ಲಿ ಒಂದು ಲೆಕ್ಕಾಚಾರ ಪ್ರಕಾರ ಅರ್ಧ-ಮುಕ್ಕಾಲು ಭಾಗದಷ್ಟು ಅದನ್ನು ಅವ್ಯವಹಾರ ಮಾಡಿದ್ದಾರೆ. ಅದು ಇವತ್ತು ವಿಚಾರಣೆಯಾಗಬೇಕು ಮತ್ತು ಇದರ ಬಗ್ಗೆ ಸಮಗ್ರವಾಗಿ ತನಿಖೆಯಾಗಬೇಕು. ಲೋಕಾಯುಕ್ತದವರು ಇದನ್ನು ಮಾಡುತ್ತಿದ್ದಾರೆ. ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ಮೇಲ್ಮನೆಯಲ್ಲಿ ಹೇಳಿದ್ದಾರೆ. ಅವರ ತನಿಖಾ ವರದಿ ಬರಲಿ ನೋಡೋಣ ಎಂದು ಹೇಳಿದ್ದಾರೆ. ಮುಖ್ಯಮಂತ್ರಿಗಳು ಸಾಕಷ್ಟು ಬಲವನ್ನು ಲೋಕಾಯುಕ್ತಕ್ಕೆ ಕೊಟ್ಟಿದ್ದಾರೆ. ಅದಕ್ಕೆ ಶಾಸನ ರೂಪದಲ್ಲಿ ಇನ್ನಷ್ಟು ಶಕ್ತಿ ಕೊಡುತ್ತೇವೆ, ಅದರ ಹಲ್ಲುಗಳನ್ನು ಇನ್ನೂ ಶಕ್ತಿಯುತವಾಗಿ ಮಾಡುತ್ತೇವೆ ಎಂದು ಹೇಳಿದ್ದಾರೆ. ಅದರೆ ಒಂದು ವಿಚಾರ ನಾನು ಅಂದುಕೊಂಡಿದ್ದೇನೆ. ತಾವು ಅನೇಕ ಸರ್ಕಾರದ ತೀರ್ಮಾನಗಳನ್ನು ತೆಗೆದುಕೊಳ್ಳದೆ ಇವತ್ತು ಕೋರ್ಟುಗಳಿಂದ ಬಂದಂಥ ಆದೇಶಗಳನ್ನು ತೀರ್ಮಾನ ಎಂದು ಸ್ವೀಕರಿಸುವ ಪರಿಸ್ಥಿತಿ ನಿರ್ಮಾಣ ಆಗುತ್ತಾ ಇರತಕ್ಕಂಥಾದ್ದು ಇದೆ. ಇವತ್ತು ಸರ್ಕಾರ ನಮ್ಮದು ಇದೆ. ಮಂತ್ರಿಗಳು ನಿರ್ಣಯ ಮಾಡಿ ಆಡಳಿತ ಮಾಡುವವರು ನಾವೆಲ್ಲಾ. ಮಾನ್ಯ ಚಂದ್ರೇಗೌಡರೇ ; ನಾವು ನಿಯಂತ್ರಣ ಮಾಡಿ ನಡೆಸುವಂತಾದ್ದು, ಇವತ್ತು ನಾವು ನಡೆಸುವಂತಾದ್ದು, ನಾವು ತೆಗೆದುಕೊಳ್ಳುವ ತೀರ್ಮಾನಗಳು ಸರಿ ಎಂದು ತಿಳಿದುಕೊಳ್ಳುವುದಾದರೆ, ಲೋಕಾಯುಕ್ತರು ಒಬ್ಬರು ಧಾಳಿ ಮಾಡಿ, ಇವತ್ತು ಇಂಥಾದ್ದು ನಡೆಯುತ್ತಿದೆ ನಿಮ್ಮ ಇಲಾಖೆಗಳಲ್ಲಿ ಎಂದು ಹೇಳಿದರೆ ಅದು ನಾವು ತಲೆಬಗ್ಗಿಸುವಂತಹ ಪರಿಸ್ಥಿತಿ ಸ್ವಾಮಿ, ನಿಜವಾಗಿಯೂ ಇದೊಂದು ನಮಗೆ ಅಪಮಾನ. ಇವತ್ತು ಮಂತ್ರಿಗಳು ಇಲಾಖೆಗಳಲ್ಲಿ ಇರುತ್ತಾರೆ. ಮೊದಲನೆಯದಾಗಿ ಆರೋಗ್ಯ ಇಲಾಖೆ. ಅಲ್ಲಿ ಡಾಕ್ಟರ್ಸ್ ಭ್ರಷ್ಟಾಚಾರ, ಹಣ ತೆಗೆದುಕೊಳ್ಳುತ್ತಾರೆ, ಇವತ್ತು ರೋಗಿಗಳ ಹತ್ತಿರ ಹಣ ತೆಗೆದುಕೊಳ್ಳುತ್ತಾರೆ, ಅವರ ಮೇಲೆ ಲೋಕಾಯುಕ್ತರ ಧಾಳಿ ಆಯಿತು. ಅದಾದ ಮೇಲೆ ಸಾರಿಗೆ ಇಲಾಖೆ, ಅಲ್ಲಿ ಭ್ರಷ್ಟಾಚಾರ ನಡೆದಿದೆ, ಲೂಟಿ, ಹಗಲು ದರೋಡೆ ಆಯಿತು ಅದರ ಬಗ್ಗೆ ವರದಿ ; ಅದಾದ ಮೇಲೆ ಸಬ್ ರಿಜಿಸ್ಟ್ರಾರ್‌ಗಳು, ಆ ಬಾತ್ ರೂಮ್ಸ್ ಟಾಯ್‌ಲೇಟ್‌ಗಳಲ್ಲಿ ದುಡ್ಡು ಬಿಸಾಕಿ ಓಡಿ ಹೋದರು. ಅದು ಧಾಳಿ. ಆ ಇಲಾಖೆಯ ಮಂತ್ರಿಗಳು ಅವರು ಇರುವಂತಹ ವ್ಯವಸ್ಥೆ, ಅದಾದ ಮೇಲೆ ಹಾಸ್ಟಲ್‌ಗಳಲ್ಲಿ ಧಾಳಿ, ಅದಾದ ಮೇಲೆ ಸ್ಟ್ಯಾಂಪ್ ಪೇಪರ್, ಹಾಸ್ಟಲ್‌ಗಳಲ್ಲಿ ಮಕ್ಕಳಿಗೆ ಸರಿಯಾದ ಊಟ ಕೊಡದೇ ಅದರಲ್ಲಿ ದುಡ್ಡು ಹೊಡೆಯುವಂತಾದ್ದು ಮತ್ತು ಬಾಲಭವನದಲ್ಲಿ ಟಿಕೇಟ್ ಕಳ್ಳತನ. ಅರ್ಧಕ್ಕೆ ಅರ್ಧ ಅವರು ದುಡ್ಡು ಲೂಟಿ ಹೊಡೆಯುವಂತಾದ್ದು ಮತ್ತು ಆಹಾರ ದಾಸ್ತಾನು ಮಳಿಗೆಗಳು ಚಿತ್ರದುರ್ಗದಲ್ಲಿ ದಾಸ್ತಾನು ಇಲ್ಲ. ಎಲ್ಲಾ ಲೂಟಿ ಮಾಡಿದ್ದರು. ಈ ರೀತಿ ಅದರೆ ನಾವು ಏಕೆ ಇರಬೇಕು ಸರ್ಕಾರ ನಡೆಸಿಕೊಂಡು, 45-50 ಜನ ಮಂತ್ರಿಗಳು ಇಟ್ಟುಕೊಂಡು ಅವರು ಇಲಾಖೆಗಳನ್ನು ನಡೆಸುತ್ತೇವೆಂದು ಹೇಳಿ....

ಶ್ರೀ ಕರಿಯಣ್ಣ :- ನಿಮ್ಮ ಕಾಲದಲ್ಲಿ ನಡೆದವುಗಳನ್ನು ನಾವು ಈಗ ಹಿಡಿಸುತ್ತಿದ್ದೇವೆ. ನಿಮ್ಮ ಆಡಳಿತದಲ್ಲಿಯೂ ಇದೇ ಇದ್ದದ್ದು. ನೀವು ಈಗ 45 ಜನ ಮಂತ್ರಿಗಳ ಬಗ್ಗೆ ಹೇಳುತ್ತೀರಿ.

ಶ್ರೀ ಬಿ.ಎನ್. ಬಚ್ಚೇಗೌಡ :- ನಮ್ಮ ಕಾಲದಲ್ಲಿ ನಾವು ಐದು ವರ್ಷ ಯಾವ ಹಗರಣಕ್ಕೂ ಸಿಕ್ಕಿಲ್ಲ ಸ್ವಾಮಿ.

ಶ್ರೀ ಕರಿಯಣ್ಣ :- ನಾವೇ ಲೋಕಾಯುಕ್ತರನ್ನು ಕಳುಹಿಸಿ ನಮ್ಮ ಮುಖ್ಯ ಮಂತ್ರಿಗಳು ಇಂತಹವರನ್ನು ಹಿಡಿಸುತ್ತಿದ್ದೇವೆ, ಅದಕ್ಕೆ ನೀವು ಸಂತೋಷ ಪಡಬೇಕು. ಕಳ್ಳರನ್ನೆಲ್ಲಾ ಹಿಡಿಸುತ್ತಿದ್ದೇವೆ.

ಶ್ರೀ ಬಿ.ಎನ್. ಬಚ್ಚೇಗೌಡ :- 250 ಕೋಟಿ ರೂಪಾಯಿ ತಿಂದರೆ ಸಂತೋಷ ಪಡಿ ಎಂದು ಹೇಳುತ್ತಿದ್ದಾರೆ. ನೋಡಿ ಹೇಗಿದೆ ಅವರು ಹೇಳುವಂಥಾದ್ದು.

ಶ್ರೀ ಕರಿಯಣ್ಣ :- ತಿಂದವರನ್ನು ಹಿಡಿಸಿದ್ದೇವೆ. ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತಾರೆ. ನಿಮ್ಮ ಕಾಲದಲ್ಲಿ ಹಿಡಿಸಲು ಆಗಲಿಲ್ಲ. ನಮ್ಮ ಕಾಲದಲ್ಲಿ ನಾವು ಹಿಡಿಸಿದ್ದೇವೆ.

ಶ್ರೀ ಡಿ.ಕೆ. ಶಿವಕುಮಾರ್ :- ಮಾನ್ಯ ಬಚ್ಚೇಗೌಡರು ವೈಜನಾಥ ಪಾಟೀಲರ ವರದಿ ನೋಡಿಲ್ಲ ಎಂದು ಕಾಣುತ್ತದೆ.

ಶ್ರೀ ಬಿ.ಎನ್. ಬಚ್ಚೇಗೌಡ :- ಇರಲಿ, ಆ ವರದಿಗಳನ್ನೆಲ್ಲಾ ನೋಡಿದ್ದೇನೆ. ಇದು ಏಕೆ ಅಂದರೆ

(ಗೊಂದಲ)

ಶ್ರೀ ಎಸ್.ಎಸ್. ಭೋಸರಾಜ :- ನಿಮ್ಮ ಸರ್ಕಾರ ಇದ್ದಾಗ 245 ಕೋಟಿ ರೂಪಾಯಿಗಳ ಬಿಲ್ ಒಂದೇ ರಾತ್ರಿ ಪಾಸ್ ಮಾಡಿದರು ತುಂಡು ಗುತ್ತಿಗೆಗಳಲ್ಲಿ. ಇದು ಗೊತ್ತಿಲ್ಲವೇ ?

(ಗೊಂದಲ)

(ಛೇರ್ಮನ್) :- ಮಾನ್ಯ ಬಚ್ಚೇಗೌಡರೇ, ಬೇಗ ಮುಗಿಸಿ.

(ಗೊಂದಲ)

ಶ್ರೀ ಬಿ.ಎನ್. ಬಚ್ಚೇಗೌಡ :- ನಿಮ್ಮ ಕಾಲದಲ್ಲಿ ಹಗರಣಗಳು ಆಯಿತು ಅಂದರು. ಮಾನ್ಯ ಖರ್ಗೆಯವರು ಅಗ ಇಲ್ಲಿದ್ದರು. ಆವರು ಆಗ ಹೇಳಬಹುದಿತ್ತು. ಅವರು ಹೇಳಲಿ ಈಗ ನಾನು ಏನು ಹಗರಣ ಮಾಡಿದ್ದೇನೆಂದು.

(ಗೊಂದಲ)

ಛೇರ್ಮನ್ :- ಬಚ್ಚೇಗೌಡರೇ ತಾವು ಬೇಗ ಮುಗಿಸಿ.

ಶ್ರೀ ಸಿ. ಭೈರೇಗೌಡ :- ಮಾನ್ಯ ಅಧ್ಯಕ್ಷರೇ, ಮಾನ್ಯ ಕರಿಯಣ್ಣನವರು ಮಾತನಾಡುತ್ತಾ ನಿಮ್ಮ ಕಾಲದಲ್ಲಿ ನಡೆದಿದ್ದು ಎಂದು ಹೇಳುತ್ತಾರೆ. ಈಗ ಪ್ರತಿಯೊಂದು ಅಧಿಕಾರ ಕೂಡ ಸರ್ಕಾರದ ಕೈಯಲ್ಲಿದೆ. ನಮ್ಮ ಕಾಲದಲ್ಲಿ ಏನೇನು ಹಗರಣಗಳು ನಡೆದಿವೆ, ಏನೇನು ಆಗಿವೆ ಎಲ್ಲವನ್ನೂ ಸಹ ಒಂದು ಗುಂಡು ಸೂಜಿಯನ್ನೂ ಸಹ ಪತ್ತೆ ಹಚ್ಚಲಿ. ಪತ್ತೆ ಹಚ್ಚಿ ಈ ವಿಧಾನ ಸೌಧದ ಮುಂದೆಯೇ ಅಂತಹವರನ್ನು ನೇಣು ಹಾಕಿ. ನಾವು ಖುಷಿ ಪಡುತ್ತೇವೆ. ಆ ಕೆಲಸ ನಿಮ್ಮ ಸರ್ಕಾರದಿಂದ ಮಾಡಲಿ. ಅಂತಹವರನ್ನು ವಿಧಾನ ಸೌಧದ ಮುಂದೆ ನೇಣು ಹಾಕಲಿ. ಅದು

ಬಿಟ್ಟು ಈ ರೀತಿ ಆರೋಪ ಮಾಡುವಂತಾದ್ದು ಸರಿಯಲ್ಲ. ನಾವು ಇವತ್ತು ಹೇಳುತ್ತಿದ್ದೇವೆ. ಅವರು ಹೇಳಲಿ ನೋಡೋಣ.

ಶ್ರೀ ಕರಿಯಣ್ಣ :- ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು 1993 ರಿಂದ ಹಿಡಿದು 2001ರ ವರೆಗೂ ಆಗಿರತಕ್ಕಂಥ ಹಗರಣಗಳ ಬಗ್ಗೆ ಅವರು ಅಂಕಿಅಂಶಗಳನ್ನು ಕೊಟ್ಟು ಹೇಳಿದ್ದಾರೆ. ಹಾಗಾದರೆ 1993 ರಿಂದ 2001ರವರೆಗೂ ಯಾವ ಸರ್ಕಾರ ಇತ್ತು ಸ್ವಾಮಿ ? ಆ ಅಂಕಿಅಂಶಗಳು ಹೊರಗಡೆ ಬಂದಿರತಕ್ಕಂಥ ದುರುಪಯೋಗಗಳನ್ನು ಇವತ್ತು ನಮ್ಮ ಮಾನ್ಯ ಮುಖ್ಯಮಂತ್ರಿಗಳು ಲೋಕಾಯುಕ್ತರನ್ನು ಕಳುಹಿಸಿ ಹಿಡಿಸಿದ್ದಾರೆ. ಇದಕ್ಕೆ ಅವರು ಅಪ್ರೀಷಿಯೇಟ್ ಮಾಡಬೇಕಾಗಿತ್ತು. ತನಿಖೆ ಮಾಡಿಸುವುದಕ್ಕೆ ಬೆಂಬಲ ಕೊಡಬೇಕಾಗಿತ್ತು. ಇವತ್ತು ಅವರ ಸರ್ಕಾರದಲ್ಲಿ ಆಗಿರತಕ್ಕಂಥ ಕೆಲವು ಲೋಪದೋಷಗಳು ಇವೆ. ಆ ಬಗ್ಗೆ ಲೋಕಾಯುಕ್ತರು ವರದಿ ಕೊಡುತ್ತಾರೆ, ಯಾರು ಯಾವ ಯಾವ ಕಾಲದಲ್ಲಿ ಏನೇನು ಮಾಡಿದ್ದಾರೆಂದು. ಆದ್ದರಿಂದ ತಾವು ಅಲ್ಲಿಯವರೆಗೂ ಕಾಯಬೇಕು. ಅದು ಬಿಟ್ಟು 45 ಜನ ಮಂತ್ರಿಗಳು ಇದ್ದು ನೀವು ಇಂತಹ ಹಗರಣಗಳನ್ನು ಮಾಡಿದ್ದೀರಿ ಎಂದು ಹೇಳಿದರೆ ಯಾವ ಧರ್ಮ ಸ್ವಾಮಿ ಇದು. ನೀವೇ ಹೇಳಿ.

ಶ್ರೀ ಬಿ.ಎನ್. ಬಚ್ಚೇಗೌಡ :- ಅವರನ್ನು ಮಂತ್ರಿ ಮಾಡಲಿಲ್ಲ ಆದಕ್ಕೆ ಬೇಜಾರಾಗಿ ಅವರು ಹೇಳುತ್ತಿದ್ದಾರೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ :- ನಮ್ಮ ಸರ್ಕಾರದಲ್ಲಿ ಅನ್ಯಾಯವಾಗಿದ್ದರೆ ಅದನ್ನು ಸರ್ಕಾರ ತನಿಖೆ ಮಾಡಲಿ ಎಂದು ನಮ್ಮ ಮಾನ್ಯ ಭೈರೇಗೌಡರು ಹೇಳಲಿಲ್ಲವೇ ? ನಾವು ಮುಚ್ಚಿ ಹಾಕಿ ಎಂದು ಹೇಳುವುದಿಲ್ಲ.

ಛೇರ್ಮನ್ :- ಕೃಷ್ಣಮೂರ್ತಿಯವರೇ, ತಾವು ಕುಳಿತುಕೊಳ್ಳಿ. ತಾವು ಈ ರೀತಿ ಮಾತನಾಡಿದರೆ ಅದು ರೆಕಾರ್ಡ್‌ಗೆ ಹೋಗುವುದಿಲ್ಲ. ಬಚ್ಚೇಗೌಡರೇ, ತಾವು ಮುಗಿಸಿ, ಬೇರೆಯವರು ಮಾತನಾಡುವುದಕ್ಕೆ ಇದೆ.

ಶ್ರೀ ಎನ್.ಎಸ್. ಭೋಸರಾಜ :- ಅವರ ಕಾಲದಲ್ಲಿ 800 ಕೋಟಿ ರೂ. ಗಳನ್ನು ಹೊಡೆದರು. ಆಗ ಮಂತ್ರಿಗಳು ಏನು ಮಾಡುತ್ತಿದ್ದರು ? ಈಗ 45 ಜನ ಮಂತ್ರಿಗಳ ಬಗ್ಗೆ ಮಾತನಾಡುತ್ತಾರೆ. ಆಗ ಮಾನ್ಯ ಬಚ್ಚೇಗೌಡರು ಮಂತ್ರಿಗಳಾಗಿದ್ದರು. ಅವರು ಏನು ಮಾಡಿದರು ? ಅದು ಲೂಟಿ ಅಲ್ಲವೇನು ?

ಶ್ರೀ ಪಿ.ಜಿ.ಆರ್. ಸಿಂಧ್ಯಾ :- ಮಾನ್ಯ ಅಧ್ಯಕ್ಷರೇ, ಮಾನ್ಯ ಕರಿಯಣ್ಣನವರು ತಪ್ಪು ಮಾಹಿತಿಯನ್ನು ತಿಳಿದುಕೊಂಡಿದ್ದಾರೆ. ನಾನು ರೆಕಾರ್ಡ್ ಸರಿ ಮಾಡುವುದಕ್ಕೆ ಹೇಳುತ್ತಿದ್ದೇನೆ.

ಶ್ರೀ ಕರಿಯಣ್ಣ :- ನಾನು ತಮ್ಮ ಬಗ್ಗೆ ಹೇಳಲಿಲ್ಲ. ತಮ್ಮಲ್ಲಿ ಒಬ್ಬೊಬ್ಬರು ಒಂದೊಂದು ರೀತಿ ಮಾತನಾಡಿ ಅಂಕಿಅಂಶಗಳನ್ನು ಕೊಟ್ಟಿದ್ದೀರಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ :- ಹಣ ರಿಲೀಜ್ ಆಗಿರತಕ್ಕಂಥಾದ್ದು ನಾನು ಹೇಳಿದ್ದು, ಅವರ ಗಮನಕ್ಕೋಸ್ಕರ ತರುತ್ತಿದ್ದೇನೆ. ಎಕ್ಸೆಸ್ ಅಲ್ಲ, ಶಾರ್ಟ್‌ಫಾಲ್. ಕಡಿಮೆ ಹಣ ಬಿಡುಗಡೆ ಆಗಿದೆ. ಎರಡನೆಯದು ಮಾನ್ಯ ಸದಸ್ಯರಾದ ಭೋಸರಾಜುರವರು ಕಾಂಗ್ರೆಸ್‌ನಲ್ಲಿ ಹಿರಿಯ

ನಾಯಕರು. ಕಳೆದ ಸಲ ಅವರು ವಿಧಾನ ಸಭೆಗೆ ಪ್ರವೇಶ ಮಾಡಿರಲಿಲ್ಲ ಕಾರಣಾಂತರಗಳಿಂದ. ಈಗ ಅವರು ವಿಧಾನ ಸಭೆ ಪ್ರವೇಶ ಮಾಡಿದ್ದಾರೆ, ಸಂತೋಷ. ಮಾನ್ಯ ಅಧ್ಯಕ್ಷರೇ, ನಾನು ಕೇಳುವುದು ಏನೆಂದರೆ, ಅವರು ಮಾತನಾಡುತ್ತಾ ಹೇಳಿದರು ನಿಮ್ಮ ಸರ್ಕಾರವಿದ್ದಾಗ 800 ಕೋಟಿ ರೂಪಾಯಿಗಳನ್ನು ತುಂಡು ಗುತ್ತಿಗೆಗಳಲ್ಲಿ ಅವ್ಯವಹಾರ ನಡೆಯಿತು ಎಂದು ಹೇಳಿದರು. ಅವ್ಯವಹಾರ ನಡೆಯಿತು ಎಂದು ಹೇಳಿದ ಮೇಲೆ ಅದಾದ ಮೇಲೆ ಮಾನ್ಯ ಮುಖ್ಯಮಂತ್ರಿಗಳು ಅಧಿಕಾರ ಸ್ವೀಕಾರ ಮಾಡಿದರು. ಅವರು ಯಾವುದೇ ರೀತಿಯ ತನಿಖೆ ಮಾಡಲು ಅವಕಾಶ ಇತ್ತು. ತನಿಖೆಗೆ ಕೊಡಲಿಲ್ಲ ಮತ್ತು ಆ ಸಂದರ್ಭದಲ್ಲಿ ಈ ಮನೆಯಲ್ಲಿ ಮಾನ್ಯ ಖರ್ಗೆಯವರು ಆ ಮನೆಯಲ್ಲಿ ಮಾನ್ಯ ಹೆಚ್.ಕೆ. ಪಾಟೀಲರು ವಿರೋಧಪಕ್ಷದ ನಾಯಕರಾಗಿದ್ದರು. ಅವರ ಬಾಯಿಗೆ ನಾವು ಆಗ ಬೀಗ ಹಾಕಿರಲಿಲ್ಲ, ಇದನ್ನು ಹೇಳುವುದಕ್ಕೆ ಅವರು ಏಕೆ ಹೇಳಿರಲಿಲ್ಲ ? ನಾವೀಗ ವಿರೋಧಪಕ್ಷದಲ್ಲಿದ್ದೇವೆ ನಾವು ಹೇಳುತ್ತೇವೆ. ಆಗ ನೀವೂ ಮಾತನಾಡಬಹುದಿತ್ತಲ್ಲಾ ? ನಿಮ್ಮ ನಾಯಕರುಗಳು ಆಗ ಏಕೆ ಮಾತನಾಡಲಿಲ್ಲ ? ಏನು ಕಾರಣದಿಂದ ಮಾತನಾಡಲಿಲ್ಲ ? ತುಂಡು ಗುತ್ತಿಗೆ ಪರವಾಗಿದ್ದರಾ ಆಗ ಅವರು ಹಾಗಾದರೆ ? ಅದನ್ನು ನಾನು ಹೇಳುತ್ತಿಲ್ಲ. ಏಕೆ ಮಾತನಾಡಲಿಲ್ಲ ? ಅದ್ದರಿಂದ ಮಾನ್ಯ ಅಧ್ಯಕ್ಷರೇ, ಇವತ್ತು ಏನು ಮಾನ್ಯ ಬಚ್ಚೇಗೌಡರು ಹೇಳುತ್ತಿದ್ದಾರೆ ಈ ರಾಜ್ಯದಲ್ಲಿ ಇಂತಹ ಒಂದು ಭ್ರಷ್ಟಾಚಾರದ ಹಗರಣ ಈ ರಾಜ್ಯದಲ್ಲಿ ಆಗಬಾರದು, ಟ್ರೆಜರಿಗಳಲ್ಲಿ ಇಂಥಾದ್ದಕ್ಕೆ ದುಡ್ಡು ರಿಲೀಜ್ ಮಾಡುವುದು ಸ್ಟಾಪ್ ಆಗಬೇಕು ಅದಕೋಸ್ಕರವಾಗಿ ನಾವು ಇದನ್ನು ಪ್ರಸ್ತಾಪ ಮಾಡುತ್ತಿದ್ದೇವೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) :- ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಶ್ರೀ ಸಿಂಧ್ಯಾಜೀಯವರು ಹೇಳಿದರು, ಅವರ ಕಾಲದಲ್ಲಿ ಏನಾದರೂ ಆಗಿದ್ದರೆ, ಆ ಕಡೆಯಲ್ಲಿ ಕುಳಿತಂಥವರು ನಾವು ಏಕೆ ಮಾತನಾಡಲಿಲ್ಲ ಎಂದು ಹೇಳಿದ್ದಾರೆ. ನಿಮ್ಮ ಬಾಯಿ ಮುಚ್ಚಿ ಹೋಗಿತ್ತೇ ಎಂಬಿತ್ಯಾದಿಯಾಗಿ ಹೇಳಿದರು. ನಾವು ಏನೇನು ಹೇಳಬೇಕಾಗಿತ್ತು ಆ ಜಾಗದಲ್ಲಿ ಕುಳಿತು ಹೇಳಿದ್ದೇವೆ ; ಬರವಣಿಗೆಯಲ್ಲಿ ಕೊಟ್ಟಿದ್ದೇವೆ. ಪುಸ್ತಕ ಮಾಡಿ ಹಂಚಿದ್ದೇವೆ, ಇದೆಲ್ಲವೂ ಜನರಿಗೆ ಗೊತ್ತಾದ ಮೇಲೆಯೇ ಜನರು ನಿಮ್ಮನ್ನು ಆ ಕಡೆಯಲ್ಲಿ ಕುಳ್ಳಿರಿಸಿದ್ದು. ಅದರೆ ಅದನ್ನು ನಾನು ಈಗ ಹೇಳಲು ನಿಂತಿಲ್ಲ ; ಸಂದರ್ಭ ಬಂದಾಗ ಹೇಳೋಣ. ಮಾನ್ಯ ಬಚ್ಚೇಗೌಡರು ಅನೇಕ ಇಲಾಖೆಗಳಲ್ಲಿ ಭ್ರಷ್ಟಾಚಾರ ನಡೆದಿದ್ದು ಅದನ್ನು ಹಿಡಿದಿದ್ದಾರೆ ಎಂದು ಹೇಳಿದ್ದಾರೆ. ನಿಮ್ಮ ಎದೆಯ ಮೇಲೆ ಕೈ ಇಟ್ಟುಕೊಂಡು ಹೇಳಿ. ಯಾವ ಕಾಲದಲ್ಲಿ ಸಬ್‌ರಿಜಿಸ್ಟ್ರಾರ್ ಕಚೇರಿಯಲ್ಲಿ ವಕೀಲರೇ ಇರಲಿ, ಬೇರೆಯವರೇ ಇರಲಿ, ಹೋದಂಥವರು ಹಣ ಕೊಡದೇ ವಾಪಸ್ ಬಂದಿರುವುದು ಇದೆಯೇ ? ಅಂದರೆ ನಾನು ಅದನ್ನು ಸಮರ್ಥನೆ ಮಾಡುತ್ತಿದ್ದೇನೆ ಎಂದು ಅಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯಾ :- ನೀವು ಏನು ಬೇರೆ ಅರ್‌ಗ್ಯೂಮೆಂಟ್ ಮಾಡಲು ಆಗುತ್ತದೆ ? You have no other argument to make ; that is why you have to make this argument.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ವಿಲೇಜ್ ಅಕೌಂಟೆಂಟ್‌ನಿಂದ ಹಿಡಿದು ಮೇಲಿನತನಕ ಏನು ನಡೆಯುತ್ತದೆ ಎಂಬುದು ಮಂತ್ರಿಗಳಾಗಿ, ಬಚ್ಚೇಗೌಡರು ಹಳ್ಳಿಯ ಗೌಡರಾಗಿ, ರೈತರಾಗಿ,

ಏನು ನಡೆಯುತ್ತಿದೆ ಎಂಬುದು ಗೊತ್ತಿದೆ. ಅದನ್ನು ಬಿಟ್ಟು ಸಂಬಂಧಪಟ್ಟಂತೆ ಮಾತನಾಡಿದರೆ ಅದಕ್ಕೆ ಉತ್ತರವನ್ನು ಕೊಕಡುತ್ತಾರೆ. ಅದನ್ನು ಬಿಟ್ಟು ಅಲ್ಲಿ ಹೋದರು ಹೀಗಾಯಿತು, ಹಾಸನಕ್ಕೆ ಹೋದರು ಹೀಗಾಯಿತು, ಎನ್ನುವ ಬದಲು

**SRI P.G.R. SINDHIA :-** How can you question the conduct of Lokayukta ? ಲೋಕಾಯುಕ್ತ ಕಾಂಡಕ್ಟ್‌ನ್ನು ನಾವು ಬದಲಿ ಮಾಡಿದ್ದೇವೋ ? ಇಲ್ಲಿ...

ಶ್ರೀ ಮಲ್ಲಿಕಾರ್ಜುನ ಖರ್ಗೆ :- ನಮ್ಮ ಕಾಲದಲ್ಲಿ ಇವೆಲ್ಲಾ ಹಗರಣಗಳು ಬರಲಿ, ಆಡಳಿತವು ಸ್ವಚ್ಛವಾಗಲಿ, ಹೀಗೆ ಪ್ರತಿಯೊಂದು ಇಲಾಖೆಯಲ್ಲಿ ಖುದ್ದಾಗಿ ನೋಡಿಕೊಂಡು ಹೋದರೆ ಸರಿಹೋಗುತ್ತದೆ ಎಂದು ಅವರಿಗೆ ಸಂಪೂರ್ಣವಾದಂಥ ಬೆಂಬಲವನ್ನು ಮಾನ್ಯ ಮುಖ್ಯಮಂತ್ರಿಯವರು ಕೊಟ್ಟಿದ್ದಾರೆ. ಒಂದು ಸಾರಿಯಲ್ಲ, ಅನೇಕ ಸಾರಿ ಪಬ್ಲಿಕ್ ಭಾಷಣದಲ್ಲಿ ಅವರು ಹೇಳಿದ್ದಾರೆ ಅವರಿಗೂ ಕೂಡ ಇದು ಗೊತ್ತಿದೆ. ಇವೆಲ್ಲಾ ಗೊತ್ತಿದ್ದೂ ಕೂಡ ಆ ಒಂದು ರೀತಿಯಿಂದ ಆಪಾದನೆ ಮಾಡತಕ್ಕಂಥಾದ್ದು ಸರಿಯಲ್ಲ, ಫಂಡ್ಸ್ ಏನಾದರೂ ಮಿಸ್ ಅಪ್ಲಿಕೇಷನ್ ಆದರೆ, ಮಿಸ್ ಅಪ್ರೋಪ್ರಿಯೇಷನ್ ಆದರೆ ಅಥವಾ ಬರತಕ್ಕಂಥ ಹಣ, ಕೊಡಬೇಕಾದಂಥ ಹಣ ಕಡಿಮೆಯಿದ್ದು, ಕೋಟ್ಯಾಂತರ ರೂಪಾಯಿಗಳ ಹಣವನ್ನು ತೆಗೆದುಕೊಂಡಿದ್ದಾರೆಂದು ನೀವು ಆಪಾದನೆ ಮಾಡುತ್ತಿದ್ದೀರಿ. ಅದಕ್ಕೆ ಸೂಕ್ತವಾದಂಥ ಉತ್ತರವನ್ನು ಅವರು ಕೊಡುತ್ತಾರೆ. ಆದರೆ ನೀವು ಪ್ರತಿಯೊಂದೂ ಇಲಾಖೆಯಲ್ಲಿ ಹೋಗಿ ಭ್ರಷ್ಟಾಚಾರವನ್ನು ಸರಿಪಡಿಸಿ ಎಂದು ನಾವು ಬೆಂಬಲ ಕೊಡುವುದು ತಪ್ಪೇ ? ನೀವು ಅಂಥ ಒಳ್ಳೆಯ ಕೆಲಸವನ್ನು ಅಪ್ರೀಷಿಯೇಟ್ ಮಾಡಲೇ ಇಲ್ಲವಲ್ಲಾ ? ನಾನು ಇಲ್ಲಿಯತನಕ ಇಲ್ಲಿ ತಮ್ಮ ಭಾಷಣ, ಮಾನ್ಯ ಬಚ್ಚೇಗೌಡರ ಭಾಷಣ, ಮಾನ್ಯ ಸುರೇಶ್‌ಕುಮಾರ್‌ರವರ ಭಾಷಣ, ಎಲ್ಲರ ಮಾತನ್ನು ಕೇಳಿಕೊಂಡಿದ್ದೇನೆ. ನಾನು ಎಲ್ಲಿಯೂ ಹೋಗದೆ ಇಲ್ಲೇ ಇದ್ದೇನೆ. ಹೀಗಿರುವಾಗ ನೀವು ನಾವು ಮಾಡಿದ ಒಳ್ಳೆಯ ಕೆಲಸವನ್ನು ಪ್ರಶಂಶಿಸಿ. ಯಾವುದು ತಪ್ಪು ಇದೆ ಎಂದು ಕಂಡರೆ ಅದನ್ನು ಸರಿ ಮಾಡಿಕೊಳ್ಳೋಣ ಅಥವಾ ಅದನ್ನು ಸಮರ್ಥನೆ ಮಾಡಿಕೊಳ್ಳುವ ಶಕ್ತಿ ಇದ್ದರೆ ಅದನ್ನೂ ಕೂಡ ನಿಮಗೆ ಹೇಳುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ :- ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ನಾಯಕರು, ಮಾನ್ಯ ಸಿಂಧ್ಯಾರವರು, ಮಾನ್ಯ ರಾಮದಾಸ್‌ರವರು, ಮಾನ್ಯ ಸುರೇಶ್‌ಕುಮಾರ್‌ರವರು ಮಾತನಾಡಿದಾಗ ಸಭೆಯು ಗಂಭೀರವಾಗಿ ಯಾವುದೇ ಮಧ್ಯೆ ಪ್ರವೇಶ ಇಲ್ಲದ ಹಾಗೆ ಚರ್ಚೆ ನಡೆದಿತ್ತು. ಶ್ರೀಮಾನ್ ಬಚ್ಚೇಗೌಡರು ಇದಕ್ಕೆ ರಾಜಕೀಯ ವಿಷಯವನ್ನು ಬೆರೆಸುವುದಕ್ಕೆ ಪ್ರಯತ್ನ ಮಾಡಿದರು ಆಗ....

(ಗೊಂದಲ)

ನೀವು ಹೇಳಿದ್ದನ್ನು ಮಾತ್ರ ಕೇಳಲು ನಾವು ಇಲ್ಲಿ ಬಂದಿಲ್ಲ.... ನಾನು ಮಾತನಾಡಲು ನಿಂತಿದ್ದೇನೆ.... I am on my legs.

(ಗೊಂದಲ)

ನಾನು ಹೇಳುವುದನ್ನು ಪೂರ್ತಿ ಕೇಳಿ.. ಇಷ್ಟು ವಿಚಾರಗಳನ್ನು ಅವರು ಹೇಳಿದ ವಿಚಾರಗಳನ್ನು ಏಕೆ ಗಂಭೀರವಾಗಿ ಕೇಳಿದ್ದೇವೆ ಅಂದರೆ, ಸರಕಾರಕ್ಕೆ ಕೂಡ ಕೆಲವು ಮಾಹಿತಿಗಳು ಬೇಕಾಗಿತ್ತು. ಇಲ್ಲಿ ನಡೆದಿರತಕ್ಕಂಥ ಅವ್ಯವಹಾರಗಳು, ಜಗಜ್ಜಾಹೀರ ಆಗಬೇಕು, ಇದಕ್ಕೆ ಪರಿಹಾರಗಳನ್ನು ಕಂಡುಕೊಳ್ಳಬೇಕು, ಎಂದು ; ಆದರೆ ಶ್ರೀಮಾನ್ ಬಚ್ಚೇಗೌಡರು ಏನು ಹೇಳಿದರು ? ಮುಂತಾಗಿ ಪ್ರಸಂಗಗಳನ್ನು ಅವರು ಪ್ರಸ್ತಾಪ ಮಾಡಿದ್ದರಿಂದ ಗಲಾಟೆ ಪ್ರಾರಂಭವಾಯಿತು. ದಯವಿಟ್ಟು ಇಂಥ ಪ್ರಸ್ತಾಪಗಳನ್ನು ಮಾನ್ಯ ಅಧ್ಯಕ್ಷರು ಕಡತದಿಂದ ತೆಗೆದು ಹಾಕಿಸಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇದಕ್ಕೂ ಸರಕಾರಕ್ಕೂ ಯಾವ ಸಂಬಂಧವೂ ಇಲ್ಲ. ಅದನ್ನು ಮಾನ್ಯ ಮುಖ್ಯಮಂತ್ರಿಯವರು ಸಾಕಷ್ಟು ಹೇಳಿದ್ದಾರೆ. ಇದರ ಅರ್ಥ ಏನಾಗುತ್ತದೆ ಅಂದರೆ, ಈ ರೀತಿಯಿಂದ ನಾವು ಇಂಥ ಕೆಲಸಗಳನ್ನು ಮಾಡಿದ್ದೇವೆ ಎಂಬ ಅಭಿಪ್ರಾಯವು ಬರುತ್ತದೆ. ಹಾಗೆಯೇ ಮಾನ್ಯ ಶಿವಕುಮಾರ್‌ರವರ ಹೆಸರು ಹೇಳಿ... ನೀವು ಮಾಡಿದ್ದೀರಿ ಎಂದರು. ಈ ವಿಚಾರಗಳು ಚರ್ಚೆಯಲ್ಲಿ ದಾಖಲಾಗ ಕೂಡದು. ದಯಮಾಡಿ ಇಂಥ ವಿಚಾರಗಳನ್ನು ಪ್ರಸ್ತಾಪ ಮಾಡಿ ಗಂಭೀರವಾದ ಚರ್ಚೆಯನ್ನು ಡೈಲ್ಯೂಟ್ ಮಾಡಲು ಹೋಗಬೇಡಿ. ಯಾವಾಗ ನೀವು ಇಂಥ ಪ್ರಸ್ತಾಪ ಮಾಡಿದ್ದರಿಂದ ನಾವು ಹೇಳಬೇಕಾಯಿತೇ ಹೊರತು ಇಲ್ಲವಾದಲ್ಲಿ ಹೇಳುತ್ತಿರಲಿಲ್ಲ. ಆದ್ದರಿಂದ ಮಾನ್ಯ ಖರ್ಗೆಯವರು ಹೇಳಿದ ಹಾಗೆ ಏನಾದರೂ ಅನ್ಯಾಯವಾಗಿದ್ದರೆ ಅಪಚಾರಗಳು ಮತ್ತು ಡಿಫಾಲ್‌ಕೇಷನ್ಸ್ ಆಗಿದ್ದರೆ, ಅದನ್ನು ಯಾವರೀತಿಯಲ್ಲಿ ಅನ್‌ಅರ್ತ್ ಮಾಡಬೇಕು ಮತ್ತು ಪರಿಹಾರವನ್ನು ಕಂಡುಹಿಡಿಯಬೇಕೆಂದು ಆಲೋಚನೆ ಮಾಡಬೇಕೇ ಹೊರತು, ಈ ರೀತಿಯಲ್ಲಿ ರಾಜಕೀಯ ವಿಷ ಬೆರೆಸತಕ್ಕಂಥ ಒಂದು ಸನ್ನಿವೇಶವನ್ನು ನಿರ್ಮಾಣ ಮಾಡಿ, ಇಲ್ಲಿ ಎಲ್ಲಾ ಮಣ್ಣು ತೆಗೆದು ಸರಕಾರದ ಮೇಲೆ ಹಾಕುವ ಪ್ರಯತ್ನ ಯಾವುದಿದೆ ಅದಕ್ಕೆ ಅಷ್ಟೇ ಅವರು ತೃಪ್ತರಾಗುವುದಾದರೆ ನಮ್ಮದೇನೂ ಅಭ್ಯಂತರ ಇಲ್ಲ.

ಛೇರ್ಮನ್ :- ಮಾನ್ಯ ಬಚ್ಚೇಗೌಡರು ವಿಷಯಕ್ಕೆ ಸೀಮಿತವಾಗಿರಿ... ವಿಷಯ ಬದಲಾಯಿಸಬೇಡಿ.

ಶ್ರೀ ಡಿ.ಬಿ. ಚಂದ್ರೇಗೌಡರು :- ನಾವೂ ಕೂಡ ಅಲ್ಲಿ ಕುಳಿತು ಮಾತನಾಡಿದ್ದೇವೆ. ಆದರೆ ನಿಮ್ಮ ಹಾಗೆ ಮಾತನಾಡಿಲ್ಲ.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ :- ನಾನು ಆಗ ಮಾತನಾಡಿದಾಗ "ಮಲಗಿದ್ದರೇನು ?" ಎಂಬ ಪದವನ್ನು ಬಳಸಿದಾಗ ಇಲ್ಲಿ ಚರ್ಚೆ ನಡೆಯಿತು. ನಾನು ಆ ಅರ್ಥದಲ್ಲಿ ಹೇಳಲಿಲ್ಲ. ಈ ಲೋಕಾಯುಕ್ತರು ಬಂದ ಮೇಲೆ ಹೆಚ್ಚಿನ ರೀತಿಯಲ್ಲಿ ಕೆಲಸ ಮಾಡುತ್ತಾ ಇದ್ದಾರೆ ಎನ್ನತಕ್ಕಂಥ ದೃಷ್ಟಿಯಿಂದ ಹೇಳಿದ್ದೇನೆಯೇ ಹೊರತಾಗಿ ಲೋಕಾಯುಕ್ತ ಸಂಸ್ಥೆಗೆ ಅವಮಾನ ಮಾಡಬೇಕೆಂಬ ದೃಷ್ಟಿಯಿಂದ ಹೇಳಿಲ್ಲ. ಅಂಥ ಏನಾದರೂ ಶಬ್ದಗಳು ಇದ್ದರೆ ಅದನ್ನು ಮಾನ್ಯ ಅಧ್ಯಕ್ಷರು ದಯವಿಟ್ಟು ಕಡತದಿಂದ ತೆಗೆದು ಹಾಕಬೇಕೆಂದು ಪ್ರಾರ್ಥಿಸುತ್ತೇನೆ.

(ಮಾನ್ಯ ಸಭಾಧ್ಯಕ್ಷರು (ಶ್ರೀ ಎಂ.ವಿ. ವೆಂಕಟಪ್ಪನವರು) ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ಶ್ರೀ ಪಿ.ಜಿ.ಆರ್. ಸಿಂಧ್ಯ :- ಮಾನ್ಯ ಖರ್ಗೆಯವರು ಹಿರಿಯ ಸದಸ್ಯರು ಮತ್ತು ಗೃಹ ಇಲಾಖಾ ಸಚಿವರು. ಮೂವತ್ತು ವರ್ಷಗಳಿಂದ ಸದನದಲ್ಲಿದ್ದೀರಿ. ಲೋಕಾಯುಕ್ತದ ಬಗ್ಗೆ ತಾವುಗಳು....

(ಗೊಂದಲ)

ಈ ರೀತಿಯಾಗಿ ಕಿರಿಚಾಡಿದರೆ ನಮಗೂ ಕಿರಿಚಾಡಲು ಬರುತ್ತದೆ. ನಾವು ಇಲ್ಲಿ ಕಿರಿಚಾಡಲು ಬಂದಿಲ್ಲ. ಮಾತನಾಡಲು ಬಂದಿದ್ದೇವೆ. ಈ ರೀತಿ ಕಿರಿಚಾಡುವುದು ಸರಿಯಲ್ಲ. ತಾವುಗಳು ಸಭಾನಾಯಕರಾಗಿ ಅವರಿಗೆ ಹೇಳಬೇಕಾಗುತ್ತದೆ.

**SRI D.B. CHANDRE GOWDA :-** Not a single member has interfered. Why should he bring in politics ?

**SRI P.G.R. SINDHIA :-** I have never said it. I have apreciated it, ನಾನು ಏನು ಹೇಳುತ್ತಿದ್ದೇನೆ, the people should know. ಲೋಕಾಯುಕ್ತ ಆಕ್ಟ್ ಪ್ರಕಾರವಾಗಿ, Lokayukta is a creature of this House. ಲೋಕಾಯುಕ್ತರವರು ಯಾರನ್ನು ರೈಡ್ ಮಾಡಬೇಕು, ಹೇಗೆ ರೈಡ್ ಮಾಡಬೇಕು, ಯಾವ ತರಹ ರೈಡ್ ಮಾಡಬೇಕು ಎಂಬುದನ್ನು ಮುಖ್ಯಮಂತ್ರಿಗಳಾಗಲೀ, ಸರಕಾರವಾಗಲೀ, ಹೇಳುವುದಕ್ಕೆ ಆಗುವುದಿಲ್ಲವೆಂಬುದನ್ನು ನಾನು ಸ್ಪಷ್ಟಪಡಿಸಬಯಸುತ್ತೇನೆ. ಇದು ಎಲ್ಲರಿಗೂ ಗೊತ್ತಿರುವ ವಿಚಾರವಾಗಿದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಇವೊತ್ತು ಲೋಕಾಯುಕ್ತ ಬಹಳ ಚುರುಕಾಗಿ ಕೆಲಸ ಮಾಡುತ್ತಾ ಇದೆ, ಅದಕ್ಕೆ ಪೂರ್ಣ ಬೆಂಬಲವನ್ನು ಕೂಡ ಸರಕಾರವು ಕೊಡುತ್ತಾ ಇದೆ, ಮಾನ್ಯ ಮುಖ್ಯಮಂತ್ರಿಗಳೂ ಕೂಡ ಅನೇಕ ಸಾರಿ ಹೇಳಿದ್ದಾರೆ ಎನ್ನುವ ಮಾತನ್ನು ನಾನು ಹೇಳಿದ್ದೇನೆಯೇ ಹೊರತಾಗಿ, ಆ ಒಂದು ಸಂಸ್ಥೆಗೆ ಯಾವುದೇ ರೀತಿಯಿಂದ ಅಗೌರವ ತರಬೇಕೆಂಬುದು ಅಲ್ಲ ಎಂಬುದನ್ನು ಸ್ಪಷ್ಟಪಡಿಸಬಯಸುತ್ತೇನೆ.

ಶ್ರೀ ಬಿ.ಎನ್. ಬಚ್ಚೇಗೌಡ :- ಮಾನ್ಯ ಅಧ್ಯಕ್ಷರೇ, ಮಾನ್ಯ ಖರ್ಗೆಯವರು ಏನು ಹೇಳಿದರು, ಅವರ ಹಗರಣಗಳ ಬಗ್ಗೆ ಪ್ರಸ್ತಾಪ ಬಂದು ಸಾಕಷ್ಟು ಚರ್ಚೆಯಾಯಿತು. ಅದನ್ನು ನಾನು ಪುನಃ ಪ್ರಸ್ತಾಪಿಸುವುದಿಲ್ಲ. ಮಾನ್ಯ ಖರ್ಗೆಯವರು ಹೇಳಿದರು, ನೀವು ಅದನ್ನು ಮಾಡಿ ಈ ಕಡೆಗೆ ಕುಳಿತುಕೊಂಡಿದ್ದೀರಿ, ನಾವು ಆ ಕಡೆಗೆ ಬಂದಿದ್ದೇವೆ ಎಂದರು. ಅದಕ್ಕೆ ಈಗ 250 ಕೋಟಿ ರೂಪಾಯಿಗಳ ಹಗರಣವನ್ನು ಮಾಡಿ ಅವರು ಈ ಕಡೆಗೆ ಬರುತ್ತಾರೆ, ನಾವು ಆ ಕಡೆಗೆ ಹೋಗುತ್ತೇವೆ. ಅದನ್ನು ತಾವುಗಳು ಅವರಿಗೆ ಹೇಳಬೇಕು.

ಅಧ್ಯಕ್ಷರು :- ಆಯಿತು.... ದಯವಿಟ್ಟು ಕನ್‌ಕ್ಲೂಡ್ ಮಾಡಿ...

ಶ್ರೀ ಬಿ.ಎನ್. ಬಚ್ಚೇಗೌಡ :- ಮಾನ್ಯ ಅಧ್ಯಕ್ಷರು ಅದಕ್ಕೆ ಒಪ್ಪಿಗೆ ಕೊಟ್ಟರು....

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಮಾನ್ಯ ಅಧ್ಯಕ್ಷರು ರೂಲಿಂಗ್‌ನ್ನು ಕೊಟ್ಟರು....

ಶ್ರೀ ಡಿ.ವಿ. ಸದಾನಂದಗೌಡ :- ಮಾನ್ಯ ಅಧ್ಯಕ್ಷರಿಗೂ ಕೆಲವು ಸಾರಿ ಇಂಥ ಸ್ವಾರಸ್ಯಕರ ಘಟನೆಗಳಲ್ಲಿ ಭಾಗವಹಿಸುವಂಥ ಒಂದು ಅಭ್ಯಾಸವು ಬಂದು ಬಿಟ್ಟಿದೆ.... ಅವರು ತತ್‌ಕ್ಷಣವೇ ನಿಮ್ಮ ಹೇಳಿಕೆ ಪ್ರಕಾರ ಆಗಲಿ ಎಂದರು.

ಅಧ್ಯಕ್ಷರು :- ಸದಾನಂದಗೌಡರೇ, ಯಾರು ಯಾವ ಕಡೆಯಲ್ಲಿ ಯಾವಾಗ ಕುಳಿತುಕೊಳ್ಳಬೇಕೆಂದು ದೇವರೇ ಬಲ್ಲ.... ಈಗ ಏಕೆ ಕನಸು ಕಾಣುತ್ತಾ ಇದ್ದೀರಿ ? ಸುಮ್ಮನಿರಿ...

(ಗೊಂದಲ)

ಶ್ರೀ ಬಿ.ಎನ್. ಬಚ್ಚೇಗೌಡ :- ಇಂಥ ಹಗರಣದಲ್ಲಿ ಭಾಗಿಗಳಾಗಿರತಕ್ಕಂಥ ಅಧಿಕಾರಿಗಳು ಯಾರಿದ್ದಾರೆ ಅವರು ನಮ್ಮನ್ನು ದಾರಿ ತಪ್ಪಿಸುತ್ತಾರೆ. ನಾವೂ ಕೂಡ ಆ ಕಡೆ ಇದ್ದು ಸಚಿವರಾಗಿ ಕೆಲಸ ಮಾಡಿದ್ದೇವೆ. ದಾರಿತಪ್ಪಿಸಿ ಇಂಥದಕ್ಕೆಲ್ಲಾ ಕಾರಣ ಮಾಡಿಕೊಡುತ್ತಾರೆ. ನಿಯಮಗಳೆಲ್ಲಾ ಗಾಳಿಗೆ ತೂರಿಸುತ್ತಾರೆ. ಸರಿಯಾದ ಮಾಹಿತಿ ತೆಗೆದುಕೊಂಡು ಸರಿಯಾದ ಮಾರ್ಗದಲ್ಲಿ ತೆಗೆದುಕೊಂಡು ಹೋಗದೇ ಇರತಕ್ಕಂಥ ಕಾರಣಗಳು, ವ್ಯವಸ್ಥೆಗಳು ಇದರಲ್ಲಿವೆ. ಆ ದೃಷ್ಟಿಯಿಂದ ಆ ಅಧಿಕಾರಿಗಳಿಗೆ ಜಾಗ ಬದಲಾಯಿಸಿ ಒಳ್ಳೆಯ ಕಡೆ ಹೋಗಿದ್ದಾರೆಂದು ಪತ್ರಿಕೆಗಳಲ್ಲಿ ಓದಿದ್ದೇವೆ. ಇಲ್ಲಿ ಕಾಗೋಡು ತಿಮ್ಮಪ್ಪನವರು ಇಲ್ಲ, ಅವರ ಆರೋಗ್ಯ ಇಲಾಖೆಯನ್ನು ಲೋಕಾಯುಕ್ತರು ರೈಡ್ ಮಾಡಿದಾಗ ಅವರು ಪ್ರಾಥಮಿಕ ವರದಿಯನ್ನೂ ಸರ್ಕಾರಕ್ಕೆ ಸಲ್ಲಿಸದಿದ್ದಾಗಲೇ ಅವರ ವಿರುದ್ಧ ನಾನು ಕ್ರಮ ತೆಗೆದುಕೊಂಡಿದ್ದೇನೆ ಎಂದಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಮಾತನಾಡುವ ಸಮಯದಲ್ಲಿ ಅಲ್ಲಿಂದ ವರದಿ ಬಂದನಂತರ ನಾನು ನೋಡಿ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ ಎಂದಿದ್ದಾರೆ. ಇಷ್ಟೆಲ್ಲಾ ಪುರಾವೆಗಳನ್ನು ನಾವು ಕೊಟ್ಟಿದ್ದೇವೆ. ಯಾವುದೇ ಅಧಿಕಾರ ಮೇಲೆ ಪ್ರೈಮಾಫೇಸಿ ಕೇಸು ಇದ್ದಾಗ ಅವು ಒಟ್ಟು ನಗರಸಭೆಗಳಿರಬಹುದು, ಸಿಎಂಸಿ ಇರಬಹುದು ಅವುಗಳಲ್ಲಿನ ಇಂಜಿನಿಯರಿಂಗ್ ಇಲಾಖೆ ಇರಬಹುದು, ತಾಂತ್ರಿಕ ಇಲಾಖೆ ಅಥವಾ ಆಡಳಿತ ಮಾಡುವ ಇಲಾಖೆ ಇರಬಹುದು - ಎಲ್ಲರೂ ಸೇರಿರುವ ಈ ವ್ಯವಸ್ಥೆಯಲ್ಲಿ ಸಂಪೂರ್ಣವಾಗಿ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಇಲ್ಲದೇ ಇದ್ದರೆ ಸಾರ್ವಜನಿಕರಲ್ಲಿ ಒಂದು ಕೆಟ್ಟ ಅಭಿಪ್ರಾಯ ಬರುತ್ತದೆ. ಅವರು ಏನು ಬೇಕಾದರೂ ಮಾಡಿಕೊಂಡು ಹೋಗಲಿ, ನಡೆದುಕೊಂಡು ಹೋಗುತ್ತದೆ ಅಂತ, ಸರ್ಕಾರ ಕೂಡಲೇ ಆಕ್ಟ್ ಮಾಡಬೇಕು. ಮಾನ್ಯ ಮುಖ್ಯಮಂತ್ರಿಗಳು ಕೂಡಲೇ ತಪ್ಪಿತಸ್ಥ ಅಧಿಕಾರಿಗಳು ಯಾರಿದ್ದಾರೆ ಕಮಿಷನರಸ್ಸ್ ಎಂದು ಏನಿದ್ದಾರೆ ಅಥವಾ ಐಎಎಸ್ ಆಫೀಸರ್ಸ್ ಎಂದು ಏನಿದ್ದಾರೆ ಯಾವರೀತಿ 250 ಕೋಟಿ ರೂ. ಗಳು ಮುಖ್ಯಮಂತ್ರಿಗಳ ಗಮನಕ್ಕೇ ಬರದೆ ಹೋಗುವಂತಹ ವ್ಯವಸ್ಥೆ ಇವತ್ತು ಟ್ರೆಜರಿಯಲ್ಲಿ ಮ್ಯಾನೇಜ್ ಮಾಡುತ್ತಾರೆ ಅಂದರೆ ಇದು ಬಹಳ ಪ್ರಭಾವಿ ಇರುವವರು ಮಾಡುವಂತಹ ಕಾರ್ಯ. ಸಾಮಾನ್ಯವಾಗಿ ಖಜಾನೆಯಿಂದ ಹಣ ತರಲಿಕ್ಕೆ ಸಾಧ್ಯವಾಗುವುದಿಲ್ಲ, ಡಿಸ್ಟ್ರಿಕ್ಟ್ ಟ್ರೆಜರಿ ಇರಬಹುದು ; ತಾಲ್ಲೂಕಾ ಟ್ರೆಜರಿ ಇರಬಹುದು ಅಥವಾ ಸ್ಟೇಟ್ ಟ್ರೆಜರಿ ಇರಬಹುದು ಅದಕ್ಕೆ ಸರ್ಕಾರದ, ಮಂತ್ರಿಗಳ ಪ್ರಭಾವ ಈರೀತಿ ಇರದೇ ಇದ್ದರೆ ಹಣವಂತೂ ಬರುವುದಕ್ಕೆ ಸಾಧ್ಯವಿಲ್ಲ. ಅದರಲ್ಲೂ 250 ಕೋಟಿ ರೂ. ಎಕ್ಸೆಸ್ ಹಣ ಬರುವಂಥದು. ಅವರು ನಿಯಮಗಳನ್ನು ಗಾಳಿಗೆ ತೂರಿರುವುದರಿಂದ ಇವತ್ತು ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಮಾನ್ಯ ಮುಖ್ಯಮಂತ್ರಿಗಳನ್ನು ಕೇಳುವಂಥದ್ದು, ಮಾನ್ಯ ಕೃಷ್ಣಪ್ಪನವರು ತಪ್ಪು ತಿಳಿದುಕೊಳ್ಳಬಾರದು, ಏನಪ್ಪ ನಾವೆಲ್ಲಾ ಪಕ್ಕಪಕ್ಕದಲ್ಲೇ ಇದ್ದೇವೆ, ಪಕ್ಕದ ಪಕ್ಕದ ಕ್ಷೇತ್ರ ಅಂತ. ಇಂಥದೆಲ್ಲಾ ಆಗಿದೆ. ಅವರು ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದಾರೆ ಅವರನ್ನು ಉಪಯೋಗಿಸಿಕೊಂಡೇ ಮಾಡಿಕೊಂಡಿದ್ದಾರೋ ಅಥವಾ ಯಾವ ಇನ್‌ಫ್ಲೂಯೆನ್ಸ್ ಇದರ ಬಗ್ಗೆ ಪ್ರಭಾವ ಬೀರಿದೆಯೋ ಅದಕ್ಕಾಗಿ ನಿಷ್ಪಕ್ಷಪಾತವಾದ

ತನಿಖೆಯಾಗಬೇಕಾದರೆ ಅವರು ರಾಜೀನಾಮೆ ಕೊಡಬೇಕು. ನೈತಿಕ ಹೊಣೆ ಹೊತ್ತು ರಾಜೀನಾಮೆ ಕೊಟ್ಟು ಅವರು ಮಾದರಿ ಆಗಬೇಕು, ಆ ಕಡೆ ಇರುವಂಥವರಿಗೆ, ನೋಡಿ ಇಂಥ ಅವ್ಯವಹಾರ ಅಕ್ರಮ ನಡೆದಾಗ ನಾನು ಇದರಲ್ಲಿ ಈಚೆ ಬರುತ್ತೇನೆ, ನನ್ನದೇನೂ ಪಾತ್ರವಿಲ್ಲ ಎಂದು ತೋರಿಸಬೇಕಾದರೆ ಲೋಕಾಯುಕ್ತಕ್ಕೆ ಸಹಾಯ ಮಾಡಬೇಕಾಗುತ್ತದೆ. ನಾನೂ ಕ್ರಿಮಿನಲ್ ಲಾಯರಾಗಿ ಕೆಲಸ ಮಾಡಿರುವವನು. ಫೇರ್ ಎನ್‌ಕ್ವೆರಿಯಾಗಬೇಕಾದರೆ ಅಧಿಕಾರದಲ್ಲಿದ್ದ ಒಬ್ಬ ಮಂತ್ರಿಗಳ ಮೇಲೇನೇ ಅಲ್ಲಿನ ಅಧಿಕಾರಿಗು, ಪೊಲೀಸ್ ಅಧಿಕಾರಿಗಳು ಯಾವ ರೀತಿ ಕ್ರಮ ತೆಗೆದುಕೊಳ್ಳುವುದಕ್ಕೆ ಆಗುತ್ತದೆ, ಯಾವ ರೀತಿ ವಿಚಾರಣೆ ಮಾಡಲು ಆಗುತ್ತದೆ ? ಸದನದಲ್ಲಿ ನಮ್ಮ ಮಾನ್ಯ ಸೋಮಶೇಖರ್‌ರವರ ಮೇಲೆ ಒಂದು ಅಪವಾದ ಬಂದಾಗ ರಾಜೀನಾಮೆ ಕೊಟ್ಟು ಹೋಗಿ ಮತ್ತೆ ಕಂದಾಯ ಸಚಿವರಾದರು. ಹಾಗೇ ಹಿಂದೆ ನಾವು ನೋಡಿದ್ದೇವೆ ; ಸಿ.ಎಂ. ಇಬ್ರಾಹಿಂ ಮೇಲೂ ಬಂದಿತ್ತು, ಶಿವಪ್ಪನವರ ಮೇಲೆ ; ಅನೇಕ ಸಚಿವರು ಆ ಮಾರ್ಗದರ್ಶನ ಮಾಡಿಹೋಗಿದ್ದಾರೆ. ದಯವಿಟ್ಟು ಮಂತ್ರಿಗಳು ಇವತ್ತು ಆ ಕೆಲಸ ಮಾಡಬೇಕಾಗುತ್ತದೆ. ಇದರಲ್ಲಿ ಅವರ ಇನ್‌ವಾಲ್‌ವೆಂಟ್ ಇಲ್ಲವೆಂದು ತೋರಿಸಿಕೊಳ್ಳಬೇಕಾಗುತ್ತದೆ. ಇಲ್ಲದಿದ್ದರೆ ಅವರ ನೇರ ಇನ್‌ವಾಲ್ವ್‌ಮೆಂಟಿನಿಂದ ಇದೆಲ್ಲಾ ಆಗಿದೆಯೆಂದು ಪಬ್ಲಿಕ್‌ಗೆ ಅರ್ಥವಾಗುತ್ತದೆ.

ಶ್ರೀ ಕೆ.ಎಚ್. ರಂಗನಾಥ್ (ಅರಣ್ಯ ಸಚಿವರು) :– ತಾವು ಹೇಳಿದಿರಿ ನಾನೇನೂ ಅವರ ಮೇಲೆ ಅಪಾದನೆ ಮಾಡುತ್ತಿಲ್ಲ ಎಂದು ತಿರುಗಿ ಏಕೆ ರಾಜೀನಾಮೆ ಕೇಳುತ್ತೀರಿ ?

ಶ್ರೀ ಬಿ.ಎನ್. ಬಚ್ಚೇಗೌಡ :– ನಾವು ಆಪಾದನೆ ಮಾಡಿದರೆ ತಾವು ಎದ್ದು ಹೇಳುತ್ತೀರಿ ಎಂದು ನನಗೂ ಗೊತ್ತು ; ಅದನ್ನು ಅವರು ಸಾಬೀತು ಮಾಡಲು ಮೊದಲು ಅವರಿಗೆ ನೋಟೀಸ್ ಕೊಡಬೇಕು ಅವರು ರಿಪ್ಲೈಕೊಡಬೇಕು ಅಂತ. ಆದಕ್ಕೆ ನಾವು ಮೊಗುಮ್ಮಾಗಿ ಮಾತನಾಡುತ್ತಿದ್ದೇವೆ. ನೀವು ಸುಮ್ಮನೆ ಇರುವುದಿಲ್ಲ, ನಮಗೆ ಗೊತ್ತು ರಂಗನಾಥರು ಏನು ಮಾಡುತ್ತೀರಿ ಅಂತ.

ಶ್ರೀ ಪ್ರಕಾಶ್ ಬಿ. ಹುಕ್ಕೇರಿ :– ತಾವು ವಿದೇಶಿ ಪ್ರವಾಸದಲ್ಲಿದ್ದಿರಿ, ಇದೆಲ್ಲಾ ನಿಮಗೆ ಹೇಗೆ ಗೊತ್ತಾಯಿತು ಎಂದು ನಾವು ಕೇಳುತ್ತಿದ್ದೇವೆ.

ಶ್ರೀ ಬಿ.ಎನ್. ಬಚ್ಚೇಗೌಡ :– ಪಾಪ ಅವರಿಗೆ ಗೊತ್ತಿಲ್ಲ, ನಾನು ಕೆ.ಆರ್. ಪುರ ಹಾಗೂ ಮಹಾದೇವಪುರ ಎರಡೂ ನಗರಸಭೆಗಳ ಸದಸ್ಯ. ಮಾನ್ಯ ಮುಖ್ಯಮಂತ್ರಿಗಳು ಲೋಕಾಯುಕ್ತರಿಂದ ವರದಿ ಬರುವುದಕ್ಕೆ ಮೊದಲೇ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಂಡು,ಆಮೇಲೆ ನಮ್ಮ ಮಂತ್ರಿಗಳು ರಾಜೀನಾಮೆ ಸಲ್ಲಿಸಿ ನಿಷ್ಪಕ್ಷಪಾತ ತನಿಖೆಗೆ ಅವಕಾಶ ಮಾಡಿಕೊಡಬೇಕೆಂದು ಕೇಳಿ ಅವಕಾಶ ಕೊಟ್ಟಿದ್ದಕ್ಕೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು :– ಇನ್ನೂ ನಾಲ್ಕು ಜನರಿದ್ದಾರೆ, ನಾಲ್ವರೂ ಐದೈದು ನಿಮಿಷ ಕೊಡಿ ಸಾಕು ಎಂದು ಕೇಳುತ್ತಿದ್ದಾರೆ. ಯಾರ್‍ಯಾರು ಚೀಟಿ ಕಳುಹಿಸಿಕೊಟ್ಟಿದ್ದಾರೋ ಅವರಿಗೆ ಮಾತ್ರ ನಾನು ಅಲೋ ಮಾಡುತ್ತೇನೆ. ಇಷ್ಟಬಂದಹಾಗೆಲ್ಲಾ ಎದ್ದುನಿಂತರೆ ಆಗುವುದಿಲ್ಲ.

ಶ್ರೀ ಸಿ. ಭೈರೇಗೌಡ :– ರುಜು ಮಾಡಿರುವವರಿಗೆ ಆದ್ಯತೆ ಕೊಡಿ.

ಅಧ್ಯಕ್ಷರು :- ರುಜು ಮಾಡಿರುವವರು 15 ಜನರಿದ್ದಾರೆ. ಇದು ನಿಲುವಳಿ ಸೂಚನೆ. ಇದನ್ನು ನಿಯಮ 69ಕ್ಕೆ ಪರಿವರ್ತಿಸಲಾಗಿದೆ. ನಮ್ಮ ಚೇಂಬರ್‌ನಲ್ಲಿ ಮಾತನಾಡಿರುವಂತೆ ಇವತ್ತು ಏನೇ ಆಗಲಿ ಈ ಚರ್ಚೆಯನ್ನು ಮುಗಿಸಬೇಕಾಗಿದೆ, ಮುಖ್ಯಮಂತ್ರಿಗಳು ರಿಪ್ಲೈ ಕೊಡಬೇಕಾಗಿದೆ. ಆದ್ದರಿಂದ ಐದೈದು ನಿಮಿಷದಲ್ಲಿ ಮಾತನಾಡಿ.

ಶ್ರೀ ಬಿ. ಸೋಮಶೇಖರ್ (ಮಳವಳ್ಳಿ) :- ಅಧ್ಯಕ್ಷರೇ ಈ ವಿಚಾರದಲ್ಲಿ ನನಗಿಂತ ಮುಂಚೆ ಮಾತನಾಡಿದ ಮಾನ್ಯ ಸುರೇಶ್‌ಕುಮಾರ್, ಮಾನ್ಯ ಸಿಂಧ್ಯಾ, ಮಾನ್ಯ ಬಚ್ಚೇಗೌಡ ಮತ್ತು ಮಾನ್ಯ ರಾಮದಾಸರು ಬಹಳ ವಿವರವಾಗಿ ಹೇಳಿದ್ದಾರೆ. ಅವರು ಏನೇನು ಹೇಳಿದ್ದಾರೋ ಅದನ್ನು ನಾನು ಮತ್ತೆ ಪ್ರಸ್ತಾಪಿಸಲು ಹೋಗುವುದಿಲ್ಲ. ಅಡಿಷನಲ್ ಸರ್‌ಚಾರ್ಜ್ ಸ್ಟಾಂಪ್ ಡ್ಯೂಟಿ ಮೇಲಿನದು ಕೊಡತಕ್ಕಂತಹ ತೀರ್ಮಾನ, 14-1-99ರಲ್ಲಿ ಅವಾಗ ನಾನು ಕಂದಾಯ ಮಂತ್ರಿಯಾಗಿದ್ದೆ. ಸುಮಾರು 1994-95 ರಿಂದ 2000-01ರ ವರೆಗೂ ಎಷ್ಟು ಹೆಚ್ಚುವರಿ ಸ್ಟಾಂಪ್ ಡ್ಯೂಟಿಯನ್ನು ಬಿಡುಗಡೆ ಮಾಡಿದ್ದಾರೆಂಬುದನ್ನು ನಮ್ಮ ನಾಯಕರಾದ ಮಾನ್ಯ ಸಿಂಧ್ಯಾರವರು ಹೇಳಿದ್ದಾರೆ. ಅದರಲ್ಲಿ ಹೆಚ್ಚು ಕೊಟ್ಟಂತಹ ವರ್ಷ 1998-99, ಅದು 6 ಕೋಟಿ ರೂ. ಆ ವರ್ಷ ನಾನು ಕಂದಾಯ ಮಂತ್ರಿಯಾಗಿದ್ದೆ. ನನಗೆ ಆಶ್ಚರ್ಯ ಕುತೂಹಲಗಳುಂಟಾಗಿವೆ, ಯಾವಾಗ ಎಷ್ಟು ಬಿಡುಗಡೆಯಾಯಿತು ಎಂದು ತಿಳಿದುಕೊಳ್ಳಲು. ಏಕೆಂದರೆ ನನ್ನ ಅವಧಿಯಲ್ಲಿ, ನಾನು ಯಾವಾಗಲೂ, ಏನಾದರೂ ಒಂದು ಆರೋಪ ಬಂದರೆ ನಾನು ಅಧಿಕಾರದಿಂದ ಇಳಿದಿರುವುದು. ಅಂದರೆ ನಾನು ಒಂದು ಕ್ಲಾರಿಫಿಕೇಷನ್ ಸರ್ಕಾರದವರಿಂದ ಕೇಳುತ್ತಿದ್ದೇನೆ ; ಅಂದರೆ 1998-99ರಲ್ಲಿ 6 ಕೋಟಿ ರೂ. ಎಕ್ಸೆಸ್ ಹಣ ಯಾವಾಗ ರಿಲೀಸಾಯಿತು ? ಅದನ್ನು ಈ ಸದನದ ಗಮನಕ್ಕೆ ಕೊಡಬೇಕು. ನಾನು ಅಧಿಕಾರದಲ್ಲಿದ್ದ ಸಂದರ್ಭದಲ್ಲಿ ನಾನೇನಾದರೂ ಬಿಡುಗಡೆ ಮಾಡಿದ್ದರೆ ನಾನು ಅದಕ್ಕೆ ಸಹಿ ಹಾಕದೇ ಇದ್ದರೂ ಅದರ ನೈತಿಕ ಜವಾಬ್ದಾರಿ ನಾನು ಹೊರುತ್ತೇನೆಂಬ ಸ್ಪಷ್ಟ ವಿಶ್ವಾಸವನ್ನು ನಾನು ಹೊಂದಿದ್ದೇನೆ. ಸುಮಾರು 240 ಕೋಟಿ ರೂ. ಗಳ ಅವ್ಯವಹಾರ ಹೇಗಾಯಿತೆಂದು ಹೇಳಿದ್ದಾರೆ. ಟ್ರೆಜರಿಯಲ್ಲಿ ಯಾರು ಕೌಂಟರ್ ಸೈನ್ ಮಾಡುತ್ತಾರೆ, ಯಾರು ಚೆಕ್ಕಿಗೆ ಸೈನ್ ಮಾಡುತ್ತಾರೆ ಇದನ್ನು ನಾವು ನೋಡಿದಾಗ ಅಧ್ಯಕ್ಷರೇ, ಬಟವಾಡೆ ಮಾಡುವ ಅಧಿಕಾರ ದೃಢೀಕರಣ ಪತ್ರ ಎಂದು ಒಂದಿದೆ, ಟ್ರೆಜರಿಯಲ್ಲಿ ಡ್ರಾಯಿಂಗ್ ಬಿಲ್ ಎಂದು ಕೊಡುತ್ತಾರೆ. ಅದರಲ್ಲಿ 4 ಕಾಲಮ್ ಇದೆ. ಒಂದು ವಿವರವಾದ ಶೀರ್ಷಿಕೆ ಹೆಸರು ಯಾವ ಹೆಡ್‌ನಲ್ಲಿ ಹಣವನ್ನು ಬಿಡುಗಡೆ ಮಾಡುತ್ತಿರುವುದು, ಮತ್ತೊಂದು ಚಾಲ್ತಿ ವರ್ಷದ ಹಂಚಿಕೆ ಮೊತ್ತ, ಆ ವರ್ಷ ಎಷ್ಟು ಎಲಿಜಿಬಿಲಿಟಿ ಇದೆ ; ಮೂರನೆಯದು ಈ ಬಿಲ್ಲಿನಲ್ಲಿ ಎಷ್ಟು ಹಣ ಬಿಡುಗಡೆ ಮಾಡಬೇಕೆಂಬುದು, ಡ್ರಾಯಿಂಗ್ ಆಫೀಸರ್ ಹೇಳಿರುತ್ತಾರೆ ಮತ್ತು ಇನ್ನೊಂದು ಆ ಹೆಡ್‌ನಲ್ಲಿ ಇನ್ನೆಷ್ಟು ಉಳಿದಿರುತ್ತದೆ ಎಂಬ ನಾಲ್ಕೈದು ಕಾಲಮ್‌ಗಳಿರುತ್ತವೆ. ಆ ಕಾಲಮ್‌ಗಳನ್ನು ಟ್ರೆಜರಿ ಆಫೀಸಿನ ಸಂಬಂಧಿಸಿದ ಕ್ಲಾರ್ಕ್‌ಗಳು ಸ್ಕ್ರೂಟಿನೈಸ್ ಮಾಡಿ ಎಷ್ಟು ಹಣವಿದೆ ಅದರಲ್ಲಿ ಎಷ್ಟು ಬಿಲ್ ಪಾಸ್ ಮಾಡಬೇಕೆಂದು ಹಾಗೂ ಅದಕ್ಕೆ ಯಾವ ವಿಧಿ ವಿಧಾನಗಳನ್ನು ನೋಡಿ ಬಿಡುಗಡೆ ಮಾಡತಕ್ಕದ್ದು ವಾಡಿಕೆ ಮತ್ತು ಕಾನೂನು ಬದ್ಧ. ನಾನು ನನ್ನ ಕ್ಷೇತ್ರದ್ದೇ ಒಂದು ಉದಾಹರಣೆಯನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ನನ್ನ ಮಳವಳ್ಳಿ ಕ್ಷೇತ್ರದಲ್ಲಿ ಈ ಒಂದು 'ಬೆಳ್ಳಿ ಬೆಳಕು' ಯೋಜನೆಯಲ್ಲಿ ತಾವೆಲ್ಲಾ ಹಿಂದುಳಿದ ವರ್ಗದವರಿಗೆ ಬೆಸ್ತರು, ಕುಂಬಾರರು,

ತಿಗಳರು, ಗೊಲ್ಲರು, ಹೀಗೆ ಸಣ್ಣಪುಟ್ಟ ಜಾತಿಗಳವರಿಗೆ ಒಂದು ಕ್ಷೇತ್ರಕ್ಕೆ 20 ಮನೆಗಳನ್ನು ಬಡವರಿಗೆ ಕೊಡತಕ್ಕಂಥದ್ದು ಗುಡಿಸಿಲಿನಲ್ಲಿ ಇರತಕ್ಕಂಥವರಿಗೆ ಕೊಡತಕ್ಕಂಥ ಒಂದು ಯೋಜನೆ ಇದೆ ; ನನ್ನ ಕ್ಷೇತ್ರದಲ್ಲಿ 20 ಮನೆಗಳನ್ನು ಕೊಡುವುದಕ್ಕೆ ಆ ವರ್ಷ 4 ಲಕ್ಷ ರೂಪಾಯಿಗಳು ಬಿಡುಗಡೆಯಾಗಿದೆ. 4 ಲಕ್ಷ ರೂಪಾಯಿಗಳಲ್ಲಿ 50 ಸಾವಿರ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಾರೆ. ಅಕ್ಚುಯಲ್ ಆಗಿ ಎರಡು ಲಕ್ಷ ರೂಪಾಯಿಗಳು ಟ್ರೆಜರಿಯಲ್ಲಿ ರಿಲೀಸ್ ಆಗಿದೆ. 50 ಸಾವಿರ ರೂಪಾಯಿಗಳನ್ನು ನಮ್ಮ ಎಕ್ಸಿಕ್ಯೂಟಿವ್ ಆಫೀಸ್‌ನವರು ಕೊಟ್ಟಿದ್ದಾರೆ. ಅದಕ್ಕೆ ಡ್ರಾಯಿಂಗ್ ಆಫೀಸರ್ ಎಕ್ಸಿಕ್ಯೂಟಿವ್ ಆಫೀಸರ್ ಆಗಿದ್ದರೂ ಬಿಸಿಎಂ ಆಫೀಸರ್ ಕೌಂಟರ್ ಸಿಗ್ನೇಚರ್ ಮಾಡಬೇಕೆಂದು ಹೇಳಿ ರಿಜೆಕ್ಟ್ ಮಾಡಿರತಕ್ಕದ್ದು. ಹಣ ಏಪ್ರಿಲ್‌ನಲ್ಲಿ ಬಿಟ್ಟಿದ್ದರೆ ನೀವು ಮಾರ್ಚ್‌ನಲ್ಲಿ ಡ್ರಾ ಮಾಡಬೇಕಾಗಿತ್ತು ; ಎನ್ನುವ ಎರಡು-ಮೂರು ಅನಾವಶ್ಯಕವಾದ ಒಂದು ಆಬ್ಜೆಕ್ಷನ್‌ಗಳನ್ನು ಹಾಕಿ 20 ಜನ ರೈತರು ಪ್ರತಿ ದಿನ ನಮ್ಮ ಕ್ಷೇತ್ರಾಧಿಕಾರಿಗಳ ಕಛೇರಿಗೆ ಅಲೆಯುತ್ತಿದ್ದಾರೆ. ನನ್ನ ಹತ್ತಿರ ಬಂದು ನೋಡಿದಾಗ, ಎಷ್ಟು ಸಾರಿ ಈ ಬಡವರನ್ನು ಅಲಿಸಿದ್ದೀರಿ ನೋಡಿ ಎಂದು ಇವತ್ತು ಫೈನಾನ್ಸ್ ಕಮೀಷನರ್‌ಗೆ ಪತ್ರವನ್ನು ಬರೆಯಬೇಕೆಂದು ಅಂದುಕೊಂಡಿದ್ದೇನೆ. ಅದನ್ನು ಬರೆದು ಇಟ್ಟಿದ್ದೇನೆ. ಇಂಥ ಪರಿಸ್ಥಿತಿ ಇರುವಾಗ ಎಲಿಜಿಬಿಲಿಟಿ ಇದ್ದ ಹಣವನ್ನೇ ಬಿಡುಗಡೆ ಮಾಡುವುದಕ್ಕೆ ಕೊಕ್ಕೆ ಹಾಕಿಕೊಂಡು ಕುಳಿತಿರುವ ಸಂದರ್ಭದಲ್ಲಿ ಇವತ್ತು ಎಲಿಜಿಬಿಲಿಟಿ 50 ಕೋಟಿ ರೂ. ಇರುವಾಗ ಸುಮಾರು 250 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುವುದಕ್ಕೆ ಯಾರು ಕೌಂಟರ್‌ಸೈನನ್ನು ಮಾಡಿದರು. ಇದಕ್ಕೆ ಯಾರು ಪ್ರಸ್ತಾವನೆಯನ್ನು ಕೊಟ್ಟರು ? ಎಷ್ಟು ಹಣ ಇದೆ ಎನ್ನತಕ್ಕದ್ದು ಆ ಒಂದು ಹೆಡ್‌ನಲ್ಲಿ ಎಂದು ಯಾರು ನೋಡಿದರು ? ಇದನ್ನು ಸಂಪೂರ್ಣವಾಗಿ ತನಿಖೆ ಮಾಡಬೇಕು. ಅದರಲ್ಲಿ ನನಗನಿಸುತ್ತಿದೆ, ಈ ಒಂದು ಅವ್ಯವಹಾರ ನಡೆದಿರತಕ್ಕದ್ದು ನಮ್ಮ ಕಂದಾಯ ಇಲಾಖೆಯಲ್ಲಿ ನಡೆದಿಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ಪಾಪ, ಶ್ರೀಕಂಠಯ್ಯನವರಿಗೆ ಈ ವಿಚಾರ ಗೊತ್ತೇ ಇಲ್ಲವೇನೋ ; ಬೇರೆ ವಿಚಾರಗಳು ಗೊತ್ತಿರಬಹುದು, ಆದರೆ ಈ ವಿಚಾರಗಳು ಗೊತ್ತಿಲ್ಲವೆಂದು ನಾನು ಅಂದು ಕೊಂಡಿದ್ದೇನೆ.

ಅಧ್ಯಕ್ಷರು :– ಬೇರೆಯವರ ವಿಚಾರ ಏಕೆ ಮಾತನಾಡುತ್ತೀರಿ ? ಬೇರೆಯವರ ವಿಚಾರ ಮಾತನಾಡಿದರೆ ಪುನಃ ಇನ್ನರ್ಧ ಗಂಟೆ ಮುಂದೆ ಹೋಗುತ್ತದೆ ಅಷ್ಟೆ.

ಶ್ರೀ ಬಿ. ಸೋಮಶೇಖರ್ :– ಸಂಬಂಧಪಟ್ಟಂಥವರು ಸಿಎಂಸಿಯವರು, ಟ್ರೆಜರಿಯವರು ಏನಾದರೂ ಕ್ಲಾರಿಫಿಕೇಷನನ್ನು ಇಷ್ಯೂ ಮಾಡಬೇಕಾದರೆ ಅರ್ಬನ್ ಡೆವಲಪ್‌ಮೆಂಟ್, ಇಷ್ಟು ಬಿಟ್ಟರೆ ಬೇರೆ ಯಾರಿಗೂ ಸಂಬಂಧಪಟ್ಟಿಲ್ಲ. ಒಬ್ಬರು ಕಾಲೇಜಿನ ಪ್ರೊಫೆಸರ್ ಅವರ ಮೇಲೆ ಸಿ.ಓ.ಡಿ. ಎನ್‌ಕ್ವೈರಿ ನಡೆಯುತ್ತಿದೆ. ಸರ್ಕಾರ ಬಂದ ತಕ್ಷಣ ಬೇಡಿಕೆ ಬಂತು. ನಾನು ಸಿಎಂಸಿ ಕಮೀಷನರ್ ಆಗಬೇಕೆಂದು ಹೇಳಿ ವಿಚಾರ ಬಂತು. ಏಕೆ ಸಿಎಂಸಿ ಕಮೀಷನರ್ ಆಗುವುದಕ್ಕೆ ಇಷ್ಟೊಂದು ಒತ್ತಡಾ ಏನು ಇಷ್ಟು ಬೇಡಿಕೆ ಎಂದು ನೋಡಿದರೆ ಇವತ್ತು ನಡೆದಿರುವ ಹಗರಣಗಳನ್ನು ನೋಡಿದರೆ ಗೊತ್ತಾಗುತ್ತದೆ. ಅವರು ಕಾಲೇಜಿನ ಲೆಕ್ಚರರ್ ಅವರ ಮೇಲೆ ಸಿ.ಓ.ಡಿ. ಎನ್‌ಕ್ವೈರಿ ಇದೆ. ಇದೆಲ್ಲಾ ಬಹಳ ಜನರಿಗೆ ಗೊತ್ತಿರಬಹುದು.

ಶ್ರೀ ಡಿ.ಕೆ. ಶಿವಕುಮಾರ್ (ನಗರಾಭಿವೃದ್ಧಿ ಸಚಿವರು) :- ಮಾನ್ಯ ಅಧ್ಯಕ್ಷರೇ, ನಾವು ಒಪ್ಪಲಿಲ್ಲವಲ್ಲಾ. We did not allow that.

ಶ್ರೀ ಬಿ. ಸೋಮಶೇಖರ್ :- ಪೋಸ್ಟ್ ಮಾಡಿದ್ದಿರಿ. ಅದು ಬೇರೆ ಪ್ರಶ್ನೆ. ಆಮೇಲೆ ಕ್ಯಾನ್ಸಲ್ ಮಾಡಿದಿರಿ. ಈ ಒಂದು ಸಿಎಂಸಿಗಳಿಗೆ ಪ್ರೊಫೆಸರ್ ಅಂಥವರು ಪಾಠ ಮಾಡುವುದನ್ನು ಬಿಟ್ಟು ಎಕ್ಸಿಕ್ಯೂಟಿವ್ ಲೈನ್‌ಗೆ ಏಕೆ ಬರುತ್ತಾರೆ ? ಏನು ಇರಬೇಕೆಂದು ನೋಡಿದರೆ ಬಹುಶಃ ಇದಕ್ಕೋಸ್ಕರ ಇರಬೇಕೆಂದು ಇವತ್ತು ಅರ್ಥವಾಗಿದೆ. ಆದ್ದರಿಂದ ಎರಡೂವರೆ ವರ್ಷಗಳಿಂದೀಚೆಗೆ ಇಷ್ಟೊಂದು ಅವ್ಯವಹಾರ, ಹಗಲು ದರೋಡೆ ಮಾಡಿರುವುದಕ್ಕೆ ಸಂಪೂರ್ಣವಾಗಿ ಅದಕ್ಕೆ ಲೋಕಾಯುಕ್ತರವರು ಹಿಡಿದುಕೊಟ್ಟಿದ್ದಕ್ಕೆ ಲೋಕಾಯುಕ್ತದವರನ್ನು ನಾವೂ ಪ್ರಶಂಸೆ ಮಾಡಿದ್ದೇವೆ. ನೀವು ಮಾಡಿದ್ದೀರಿ. ಅಂದರೆ ಲೋಕಾಯುಕ್ತ ಮಾಡಿದ ಒಳ್ಳೆಯ ಕೆಲಸವನ್ನು ನೀವು ಮಾಡಿದ ತಪ್ಪನ್ನು ಮುಚ್ಚಿಕೊಳ್ಳುವಂಥಾದ್ದಕ್ಕೆ ಅಲ್ಲ. ಒಂದು ವೇಳೆ ನಮ್ಮ ಮಾನ್ಯ ಸಿಂಧ್ಯಾರವರು ಹೇಳಿದಂತೆ ನೂರು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿ ಒಬ್ಬ ಮಂತ್ರಿಗಳು ಪತ್ರವನ್ನು ಬರೆದರೆ ಅದನ್ನು ಫೈನಾನ್ಸ್ ಮಿನಿಸ್ಟರ್ ರಿಲೀಸ್ ಮಾಡಿ ಎಂದು ಆರ್ಡರನ್ನು ಕೊಟ್ಟರೆ ಅದನ್ನು ಅಧಿಕಾರಿಗಳು ರಿಲೀಸ್ ಮಾಡಿದರೆ ಯಾರು ನೈತಿಕ ಹೊಣೆಯನ್ನು ಹೊತ್ತು ಕೊಳ್ಳಬೇಕು ? ಎಲಿಜಿಬಿಲಿಟಿ ಇದೆಯಾ ? ಇದನ್ನು ನಾವು ಸ್ಪಷ್ಟವಾಗಿ ನೋಡಬೇಕಾಗಿದೆ. ಒಂದು ಕಡೆ ಎರಡು ನಗರಸಭೆಗಳನ್ನು ಮಾತ್ರ ತೆಗೆದುಕೊಳ್ಳುತ್ತೀರಿ. ನೀವು ನಾಲ್ಕು ಇಲ್ಲವೇ ಎಂದು ಹೇಳುವುದು ; ಅಂದರೆ ಅದನ್ನು ಜಸ್ಟಿಫಿಕೇಷನ್ ಮಾಡಿಕೊಳ್ಳತಕ್ಕದ್ದು. ಇವತ್ತೇನಾಗಿದೆ ಎಂದರೆ ನಾನು ತಪ್ಪು ಮಾಡಿದ್ದೇನೆ, ನೀವೂ ಮಾಡಿಲ್ಲವೇ ಎನ್ನುವ ಭಾವನೆ ಬಂದು ಬಿಟ್ಟಿದೆ. ಇವತ್ತು ದೇಶದಲ್ಲೆಲ್ಲಾ ಬಿಹಾರದಲ್ಲಿ ಒಂದು ಹಗರಣ ನಡೆದಿರಬಹುದು. ಬೊಫೋರ್ಸ್ ಹಗರಣ ನಡೆದಿರಬಹುದು ಮತ್ತು ತಮಿಳು ನಾಡಿನಲ್ಲಿ ಹಗರಣಗಳು ನಡೆದಿರಬಹುದು. ಇವತ್ತು ಇಲ್ಲಿ 250 ಕೋಟಿ ರೂ.ಗಳ ಹಗರಣ ನಡೆದಿರಬಹುದು. ಇದನ್ನೆಲ್ಲಾ ಜನರು ನೋಡುತ್ತಿದ್ದರೆ ಏನು ಭಾವನೆ ನಮ್ಮ ರಾಜಕಾರಣಿಗಳ ಬಗ್ಗೆ ರಾಜಕೀಯ ಪಕ್ಷಗಳ ಬಗ್ಗೆ ಹಾಗೂ ಸರ್ಕಾರದ ಬಗ್ಗೆ ಬರುತ್ತದೆ ? ಅವರಿಗೆಲ್ಲಾ 'ಗಂಡ ಹೆಂಡತಿಯರ ಜಗಳದಲ್ಲಿ ಕೂಸು ಬಡವಾದ ಹಾಗೆ' ಇವತ್ತು ನಾವು ರಾಜಕೀಯ ಪಕ್ಷಗಳು ಮಂತ್ರಿಗಳು, ಸರ್ಕಾರಗಳು, ಅವರ ಮೇಲೆ ಇವರ ಆರೋಪ, ಇವರು ಹಗರಣ ಮಾಡಿದರೆ ಅವರಿಗಿಂತ ಜಾಸ್ತಿ ಮಾಡಬೇಕು. ಇಂಥ ಒಂದು ಪರಿಸ್ಥಿತಿಯಲ್ಲಿ ಸಾಮಾನ್ಯ ಜನರು ಇವತ್ತು ಮೂಕಪ್ರೇಕ್ಷಕರಾಗಿ ನೋಡುತ್ತಿದ್ದಾರೆ. ಈ ಪ್ರಜಾಪ್ರಭುತ್ವ ವ್ಯವಸ್ಥೆ ಏನು ಇದೆ, ಇವತ್ತು ಪ್ರತಿಯೊಂದು ರಂಗದಲ್ಲೂ ನೋಡಿ. ಇವತ್ತು ದೇಶ ಅಧೋಗತಿಗೆ ಹೋಗುತ್ತಿದೆ. ಆ ಸರ್ಕಾರ, ಈ ಪಕ್ಷಗಳು ಎಂದು ಹೇಳುತ್ತಿಲ್ಲ. ನಾವು ಇದಕ್ಕೇನಾ ಸ್ವಾತಂತ್ರ್ಯವನ್ನು ಪಡೆದುಕೊಂಡಿದ್ದು ? ನಾವು ಈ ರೀತಿಯಲ್ಲಿ ಒಂದು ಆಡಳಿತವನ್ನು ನಡೆಸಿಕೊಳ್ಳುತ್ತೇವೆ, ಜನರಿಗೆ ಇಂಥ ಒಂದು ಆಡಳಿತವನ್ನು ಕೊಡುತ್ತೇವೆಂದು ನಾವು ಅಧಿಕಾರವನ್ನು ತೆಗೆದುಕೊಂಡಿದ್ದೇವಾ ? ಇದು ಪ್ರತಿಯೊಬ್ಬನೂ ನಾಚಿಕೆಪಡುವ ವಿಚಾರವಾಗಿದೆ. ನೈತಿಕತೆ ಹಾಳಾಗಿ ಹೋಗಿದೆ, ಅಧಃ ಪತನವಾಗಿದೆ. ಇಷ್ಟೊಂದು ಬೃಹದಾಕಾರವಾಗಿ ಭ್ರಷ್ಟಾಚಾರ ನಡೆದಿದ್ದರೂ ಇದನ್ನು ನಾವು ಜಸ್ಟಿಫಿಕೇಷನ್ ಮಾಡತಕ್ಕಂಥದ್ದು ಇದೆಯಲ್ಲಾ, ಯಾವ ಪಕ್ಷದವರಿಗಾಗಲೀ ಅದು ಸರಿಯಲ್ಲ. ಇವತ್ತು ಮೂರು ಜನರನ್ನು ಮಾನ್ಯ ಮುಖ್ಯಮಂತ್ರಿಗಳು ಸಸ್ಪೆಂಡ್ ಮಾಡಿದ್ದಾರೆ. ಅವರು ನಮ್ಮ ಡಿಸ್ಟ್ರಿಕ್ಟ್ ರಿಜಿಸ್ಟಾರ್‌ಗಳು. ಒಬ್ಬರು ಡಿಸ್ಟ್ರಿಕ್ಟ್ ರಿಜಿಸ್ಟ್ರಾರ್‌ರವರನ್ನು ಸಸ್ಪೆಂಡ್ ಮಾಡಿದಂಥವರನ್ನು ಅವರು ನಮ್ಮ ಮಂಡ್ಯ

ಜಿಲ್ಲೆ ಸಿ.ಇ.ಓ. ಮತ್ತು ಇನ್ನು ಕೆಎಎಸ್ ಆಫೀಸರ್ಸ್ ಯಾರು ಕಮೀಷನರ್ಸ್ ಆಗಿದ್ದರು, ಅವರ ಸಸ್ಪೆಂಡ್ ಆಗಬೇಕೆಂದು ಆರ್ಡರ್ ಮಾಡಿದರೂ ಅವರುಗಳು ಸಸ್ಪೆಂಡ್ ಆಗಿಲ್ಲ. ಅದರ ಬದಲಾಗಿ ಅವರಿಗೆ ಬಡ್ತಿಯನ್ನು ಕೊಟ್ಟು ಬೇರೆ ಬೇರೆ ಉನ್ನತವಾದ ಸ್ಥಾನಗಳಿಗೆ ಹಾಕಿದ್ದಾರೆ ಮತ್ತು ಇವತ್ತು ಆಸ್ಪತ್ರೆಗಳಿಗೆ ಭೇಟಿ ಕೊಟ್ಟು, ಸಬ್ ರಿಜಿಸ್ಟ್ರಾರ್‌ರವರ ಕಛೇರಿಗಳಿಗೆ ಭೇಟಿ ಕೊಟ್ಟಾಗ ನೌಕರರುಗಳು ಲೋಕಾಯುಕ್ತರ ಮೇಲೆಯೇ ಪ್ರತಿಭಟನೆ ಮಾಡುವ ಪರಿಸ್ಥಿತಿಗೆ ಬಂದಿದ್ದಾರೆ. ಇವತ್ತು ಸಂಘಗಳು ಥ್ರೆಟನ್ ಮಾಡುತ್ತಿದ್ದಾರೆ. ಸರ್ಕಾರ ಅವರ ಮೇಲೇನಾದರೂ ಕ್ರಮ ತೆಗೆದುಕೊಂಡಿದ್ದೀರಾ ? ಇವತ್ತು ಏನಾಗಿದೆ, 'ಫ್ರೀ ಫಾರ್ ಆಲ್' ಆಗಿಹೋಗಿದೆ. ಇವತ್ತು ಭ್ರಷ್ಟಾಚಾರ ಮಾಡುವವರಿಗೆ ಒಂದು ರಕ್ಷಣೆ ಇದೆ ಎನ್ನುವ ಭಾವನೆ ಬಂದಿದೆ. ನಾನು ಇದನ್ನು ಏಕೆ ಹೇಳುತ್ತೇನೆಂದರೆ ಇಷ್ಟೊಂದು ಹಗರಣಗಳಾಗಿದ್ದರೂ 2001ರಲ್ಲಿ ಇವತ್ತು ವರದಿ ಬಂದಿದೆ. ಶಿಫಾರ್ಸ್ಸುಗಳು ಬಂದಿದೆ. ಅದರ ಮೇಲೆ ಯಾವ ಕೆಎಎಸ್ ಅಧಿಕಾರಿಗಳನ್ನೂ ಸಸ್ಪೆಂಟ್ ಮಾಡಿಲ್ಲ ಮತ್ತು ಇನ್ನೂ ನಿರಂತರವಾಗಿ ಹಣವನ್ನು ಬಿಡುಗಡೆ ಮಾಡುತ್ತಲೇ ಇದ್ದಾರೆ. ಇದು ಒಂದು ವರ್ಷ ಹೆಚ್ಚು ಹಣ ಅಡಿಷನಲ್ ಸ್ಟಾಂಪ್ ಡ್ಯೂಟಿ ರಿಲೀಸ್ ಮಾಡಿದರೆ ಒಂದು ತರಹ. ಪ್ರತಿ ವರ್ಷ ಮೂರು-ನಾಲ್ಕು ವರ್ಷಗಳಾಗಿದ್ದರೆ ಅದನ್ನು ಹೇಗೆ ರಿಲೀಸ್ ಮಾಡಿದರು ? ಇದರಿಂದ ಇವತ್ತು ಸರ್ಕಾರವೇ ನೈತಿಕ ಹೊಣೆಯನ್ನು ಹೊರಬೇಕಾಗುತ್ತದೆ. ಇಷ್ಟೊಂದು ದೊಡ್ಡ ಹಗರಣ ಕರ್ನಾಟಕದ ಇತಿಹಾಸದಲ್ಲೇ ಆಗಿಲ್ಲ. ನಾವೇನಾದರೂ ಮಾಡಿದ್ದರೆ ನೀವು ಎನ್‌ಕ್ವೈರಿಯನ್ನು ಮಾಡಿ. ನನ್ನ ಮೇಲೆ ಕೂಡ ಲೋಕಾಯುಕ್ತ ತನಿಖೆ ಬಂತು ; ನಾನು ಅವತ್ತು ಸಂಬಂಧಪಟ್ಟ ಮಂತ್ರಿ ಇರಲಿಲ್ಲ. 1988ರಲ್ಲಿ ನಾನು ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಮಂತ್ರಿಯಾಗಿದ್ದೆ. ನಮ್ಮ ಒಂದು ಸಂಸ್ಥೆಗೆ ಜಮೀನನ್ನು ಮಂಜೂರಾತಿ ಮಾಡಿದ್ದಾರೆಂದು ಹೇಳಿ ನನ್ನ ಮೇಲೆ ಲೋಕಾಯುಕ್ತ ತನಿಖೆಗೆ ಬಂತು. ಇದು ಮಾನ್ಯ ಶಿವಪ್ಪನವರಿಗೆ ಗೊತ್ತು ; ಸಿ.ಓ.ಡಿ ಎನ್‌ಕ್ವೈರಿಯಾಯಿತು. ಅಷ್ಟರಲ್ಲಿ ಇವರಿಬ್ಬರೂ ಬೇರೆ ಕಾರಣಗಳಿಗೆ ರಾಜೀನಾಮೆಯನ್ನು ಕೊಟ್ಟಿದ್ದರು. ಮಾನ್ಯ ಜೀವಿಜಯ ಮತ್ತು ಮಾನ್ಯ ದೇವೇಗೌಡರು ; ನಾನು ಆವತ್ತು ಮಂತ್ರಿಯಾಗಿ ಉಳಿದಿದ್ದೆ. ನಮ್ಮ ಸರ್ಕಾರದ ಮುಖ್ಯಮಂತ್ರಿಗಳು ಈ ಒಂದು ಪ್ರಕರಣಗಳನ್ನು ಲೋಕಾಯುಕ್ತಕ್ಕೆ ಎನ್‌ಕ್ವೈರಿಗೋಸ್ಕರ ರೆಫರ್ ಮಾಡುತ್ತೇವೆಂದು ಹೇಳಿ ಮಾಡಿದರು. ನಾನು ತಕ್ಷಣ ಒಬ್ಬ ಕ್ಯಾಬಿನೆಟ್ ಮಂತ್ರಿಯ ಮೇಲೆ ವಿಚಾರಣೆಗೋಸ್ಕರ ವರದಿ ಮಾಡಿದ ಮೇಲೆ ನಾನು ನೈತಿಕವಾಗಿ ಮುಂದುವರೆಯುವುದು ಸರಿಯಲ್ಲವೆಂದು ಹೇಳಿ ಅವತ್ತೇ ರಾಜೀನಾಮೆಯನ್ನು ಕೊಟ್ಟೆ. ಅದಾದ ಒಂದು ತಿಂಗಳಲ್ಲಿ ಲೋಕಾಯುಕ್ತದ ಮುಂದೆ ಹೋದೆ. ನನಗೆ ಇವತ್ತು ಅಬಿಸಾಲ್ವ್ ಮಾಡಿ, ಇಲ್ಲದಿದ್ದರೆ ಜೈಲಿಗೆ ಕಳುಹಿಸಿ ಎಂದು ಹೋದೆ. ಬೇಗ ವಿಚಾರಣೆ ಮಾಡಿ ಎಂದು ಹೇಳಿದೆ. ಒಂದು ತಿಂಗಳೊಳಗೆ ಅವರಿಗೆ ಯಾವುದೇ ಜವಾಬ್ದಾರಿ ಇಲ್ಲ ಎಂದು ಹೇಳಿ ಬೇರೆಯವರಿಗೆ ಏನು ಕೊಟ್ಟರೋ ಅದೇ ರೀತಿ ಕೊಟ್ಟರು. ನಾನು ಮತ್ತೆ ಮಂತ್ರಿಯಾಗಲಿಲ್ಲ. ಅದು ಬೇರೆ ಪ್ರಶ್ನೆ. ಅದರಿಂದ ಇವತ್ತು ನೈತಿಕತೆ ಪ್ರಶ್ನೆ ಇರುವುದರಿಂದ ಯಾರು ಇದಕ್ಕೆ ಸಂಬಂಧ ಪಟ್ಟವರಾಗಿದ್ದಾರೆ, ಅವರು ಮೊದಲು ರಾಜೀನಾಮೆಯನ್ನು ಕೊಡಬೇಕು ಮತ್ತು ಏನು ಈ ಎಂಟು ಸಿ.ಎಂ.ಸಿಗಳು ಇವೆ, ಇವುಗಳು ಎಲೆಕ್ಟೆಡ್ ಬಾಡಿ ಇದ್ದರೆ ಮೊದಲು ಅದನ್ನು ಸೂಪರ್‌ಸೀಡ್ ಮಾಡಿ. ಏಕೆಂದರೆ ವಿಚಾರಣೆಗಳನ್ನು ಮಾಡಬೇಕಾದರೆ ಅವರುಗಳು ಸಹಕಾರವನ್ನು ಕೊಡುತ್ತಾರೆನ್ನುವ ಭಾವನೆ ನನ್ನಲ್ಲಿಲ್ಲ. ಈಗಾಗಲೇ ವರದಿಗಳು ಬಂದಿವೆ. ಕೆಲವು ಕಡತಗಳನ್ನು ಸುಟ್ಟಿದ್ದಾರೆ, ನಾಮಪತ್ತೆ ಮಾಡಿದ್ದಾರೆನ್ನುವ ವರದಿಗಳು

ಬಂದಿವೆ. ಇವೆಲ್ಲವನ್ನೂ ತಪ್ಪಿಸಬೇಕಾದರೆ ಅದನ್ನು ಮೊದಲು ಸೀಜ್ ಮಾಡಿ ; ಅದನ್ನು ಸೂಪರ್‌ಸೀಡ್ ಮಾಡಿ. ಇದನ್ನು ಮಾಡಬೇಕು. ಮತ್ತೆ ಈ ವಿಚಾರಣೆಯ ವರದಿಯನ್ನು ಆದಷ್ಟು ಬೇಗ ಲೋಕಾಯುಕ್ತದವರಿಂದ ತರಿಸಿಕೊಂಡು ಸೂಕ್ತವಾದ ಕ್ರಮವನ್ನು ತೆಗೆದುಕೊಳ್ಳಬೇಕು ಮತ್ತು ಈ ಸರ್ಕಾರ ನೈತಿಕ ಹೊಣೆಯನ್ನು ಹೊರಬೇಕೆನ್ನುವ ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

**MR. SPEAKER :-** I think the last Speaker will be. Mr. Chelvarayaswamy please speak for five minetes.

ಶ್ರೀ ಎನ್. ಚಲುವರಾಯಸ್ವಾಮಿ (ನಾಗಮಂಗಲ) :– ಮಾನ್ಯ ಅಧ್ಯಕ್ಷರೇ, ಈ ಸದನದ ಮೂಲಕ ನಾವು ಮಾನ್ಯ ಲೋಕಾಯುಕ್ತದವರಿಗೆ ಅಭಿನಂದಿಸಬೇಕಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳೇನು ಲೋಕಾಯುಕ್ತಕ್ಕೆ ಹೆಚ್ಚಿನ ಶಕ್ತಿಯನ್ನು ಕೊಡುತ್ತೇವೆ, ಭ್ರಷ್ಟಾಚಾರವನ್ನು ನಿಲ್ಲಿಸುತ್ತೇವೆಂದು ಹೇಳಿಕೆಯನ್ನು ಕೊಟ್ಟರೋ, ಕಳೆದ ಆರು ತಿಂಗಳಿಂದ ಸತತವಾಗಿ ಲೋಕಾಯುಕ್ತದವರು ಅದು ಆರೋಗ್ಯ ಇಲಾಖೆ ಇರಬಹುದು ಸಿಎಂಸಿಗಳಿರಬಹುದು, ಸಬ್ ರಿಜಿಸ್ಟ್ರಾರ್ ಆಫೀಸ್‌ಗಳು ಇರಬಹುದು, ಆರ್.ಟಿ.ಓ. ಆಫೀಸ್‌ಗಳು ಇರಬಹುದು, ಸತತವಾಗಿ ಲೋಕಾಯುಕ್ತದವರು ಭ್ರಷ್ಟಾಚಾರವನ್ನು ಪತ್ತೆ ಹಚ್ಚುವುದನ್ನು ಪ್ರತಿ ದಿವಸ ಪತ್ರಿಕೆಯಲ್ಲಿ ನಾವು ನೋಡುತ್ತಿದ್ದೇವೆ. ಆದರೆ ಭ್ರಷ್ಟಾಚಾರವನ್ನು ಮಾಡುತ್ತಿರುವಂಥಾದ್ದನ್ನು ಲೋಕಾಯುಕ್ತದವರು ಎತ್ತಿ ಹಿಡಿದರೆ ಅದಕ್ಕೆ ಪ್ರತಿಫಲ ಸರ್ಕಾರದವರು ಇವತ್ತು ಯಾವ ರೀತಿ ಕ್ರಮವನ್ನು ತೆಗೆದುಕೊಳ್ಳುತ್ತಿದ್ದಾರೆ ? ಯಾವ ರೀತಿ ಕಡಿವಾಣ ಹಾಕುತ್ತಿದ್ದಾರೆ ಎಂಬುದನ್ನು ನೋಡಿದರೆ, ಈ ಭ್ರಷ್ಟಾಚಾರದ ಅಲೆ ಪ್ರತಿ ದಿವಸ ಹೆಚ್ಚಾಗುತ್ತಿದೆಯೇ ವಿನಹ ಅದನ್ನು ಕಡಿಮೆ ಮಾಡುವುದಕ್ಕಾಗಿಲ್ಲ. ಇವತ್ತು ಅದಕ್ಕೆ ನಿರ್ದಿಷ್ಟವಾಗಿ ಹೇಳಬೇಕೆಂದರೆ ಸಿಎಂಸಿ ಹಗರಣವೇ ಇದಕ್ಕೆ ಕಾರಣ ಸಿಎಂಸಿಯಲ್ಲಿ ಇವತ್ತು ಮಾಡಿರತಕ್ಕಂತಹ ಹಗರಣ ಬಿಹಾರದಲ್ಲಿ ಏನು ಮೇವು ಹಗರಣ ಇತ್ತು ಅದಕ್ಕಿಂತ ಒಂದು ಹೆಜ್ಜೆ ಮುಂದೆ ಇಟ್ಟಿದೆ. ಹತ್ತು ವರ್ಷಗಳಲ್ಲಿ 850 ಕೋಟಿ ರೂಪಾಯಿಗಳ ಹಗರಣ ಆಗಿದ್ದರೆ, ಎರಡೂವರೆ ವರ್ಷಗಳಲ್ಲಿ 239 ಕೋಟಿ ರೂಪಾಯಿಗಳ ಹಗರಣ ಇವತ್ತು ನಡೆದಿದೆ. ಒಂದು ಕಡೆ 239 ಕೋಟಿ ರೂಪಾಯಿಗಳ ಹಣವನ್ನು ಹೆಚ್ಚುವರಿಯಾಗಿ ಏನು ರಿಲೀಸ್ ಮಾಡಿದ್ದಾರೆ, ಅದಕ್ಕೆ ಯಾವುದೇ ದಾಖಲೆ ಅಥವಾ ಕಾನೂನಿನ ಕಟ್ಟಳೆ ಇಲ್ಲದೇ ಮಾಡಿದ್ದಾರೆ ; ಇನ್ನೊಂದು ಕಡೆ ಅಲ್ಲಿ ಯಾವುದೇ ಕೆಲಸ ಆಗದೇ ಇರತಕ್ಕಂತಹದು ಆಗಿದೆ. ಟ್ರಾನ್ಸ್‌ಫರೆನ್ಸಿ ಆಕ್ಟ್ ಏನು ಇದೆ, ಅದರ ಅಡಿಯಲ್ಲಿ ಮಾಡದೇ ಇದ್ದರೆ ಅವರ ಮೇಲೆ ಕ್ರಿಮಿನಲ್ ಮೊಕದ್ದಮೆ ಹೂಡುತ್ತೇವೆಂದು ಹೇಳಿದಂಥವರು, ಇವತ್ತು ಯಾವುದೇ ಒಂದು ಲಕ್ಷ ಟೆಂಡರ್ ಆಗದೇ ಗುತ್ತಿಗೆದಾರರಿಗೆ 50 ಲಕ್ಷ, 60 ಲಕ್ಷ ರೂ. ಕೊಟ್ಟಿದ್ದಾರೆ. ಮಾನ್ಯ ಸುರೇಶ್ ಕುಮಾರ್ ಅವರು ಹಾಗೂ ಮಾನ್ಯ ಸಿಂಧ್ಯಾರವರು ಈಗಾಗಲೇ ಈ ವಿಚಾರದಲ್ಲಿ ಹೇಳಿದ್ದಾರೆ ಮತ್ತೆ ಅದನ್ನು ಹೇಳತಕ್ಕ ಅವಶ್ಯಕತೆ ಇಲ್ಲ. ಅವರು ಪಟ್ಟಿ ಹೇಳಿದರು. ಬಿ.ಕೆ. ನಾಗೇಂದ್ರ ಎನ್ನುವಂತಹ ಕೆಲವೇ ವ್ಯಕ್ತಿಗಳಿಗೆ 50 ಲಕ್ಷ ರೂ., 60 ಲಕ್ಷ ರೂಪಯಿಗಳನ್ನು 16ನೇ ತಾರೀಖು, 17ನೇ ತಾರೀಖು 18ನೇ ತಾರೀಖು ವಿತರಣೆ ಮಾಡಿರತಕ್ಕದ್ದನ್ನು ನಾವು ನೋಡಿದಾಗ ಈ ಟ್ರಾನ್ಸ್‌ಫೆರೆನ್ಸಿ ಆಕ್ಟ್ ಎಲ್ಲಿ ಇತ್ತು ? ಈ 239 ಕೋಟಿ ರೂಪಾಯಿಗಳ ಹಣ ರಿಲೀಸ್ ಆಗಬೇಕಾಗಿದ್ದರೆ ಆರ್ಥಿಕ ಇಲಾಖೆಯವರು ಏನು ಮಾಡುತ್ತಿದ್ದರು [illegible] ಸೆಕ್ರೆಟರಿ[illegible]ವರು ಪತ್ರ ಬರೆದು [illegible] ವಾಲಂಟರಿ

ವ್ಯಕ್ತಿ ವಿಷಕಂಠ ಶೆಟ್ಟಿ ಎನ್ನುವವರು ಕೆಲಸ ಮಾಡಿದ್ದಾರೆ. ಅವರ ಮೇಲೆ ಕ್ರಿಮಿನಲ್ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದ್ದಾರೆ. ಒಬ್ಬ ವಾಲಂಟರಿ ವ್ಯಕ್ತಿ ಎಂದರೆ ನಮ್ಮ ಅಧಿಕಾರಿಗಳಿಗೆ ಸಂಬಂಧಪಡದಿರತಕ್ಕವನು, ಇಷ್ಟು ಹಿನ್ನೆಲೆಯಲ್ಲಿ ಇದು ನಡೆದಿದೆ ಎಂದರೆ ಅವರು ಯಾರು ? ಎಲ್ಲಿದ್ದಾರೆ ? ಎಂದು ಒಂದು ವರ್ಷದಿಂದ ಸತತವಾಗಿ ಗೊತ್ತಾಗದೇ ಅವರ್ಯಾರೂ ಆ ವ್ಯಕ್ತಿಯ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗಿಲ್ಲ. ಈ ವಿಷಯ ಬಯಲಾದರೆ ಯಾರ್ಯಾರು ಇದರ ಹಿನ್ನೆಲೆಯಲ್ಲಿ ಇದ್ದಾರೆ ಎನ್ನುವುದು ಬಯಲಿಗೆ ಬರುತ್ತದೇನೋ ಎಂಬ ಭಯ ಸರ್ಕಾರಕ್ಕೆ ಇರಬಹುದೆಂದು ಕಾಣುತ್ತದೆ. ದಯಮಾಡಿ ಇವತ್ತು ಮೈನರ್ ಇರಿಗೇಷನ್ ಪಿಡಬ್ಲ್ಯುಡಿ ಅಥವಾ ಮೇಜರ್ ಇರಿಗೇಷನ್ ಇಲಾಖೆಗಳಲ್ಲಿನ ಗುತ್ತಿಗೆದಾರರಿಗೆ ಹಣ ಕೊಡದಲೇ ಗುತ್ತಿಗೆದಾರರ ಪರಿಸ್ಥಿತಿಯನ್ನು ನಾವು ನೋಡಲಿಕ್ಕೆ ಆಗುತ್ತಿಲ್ಲ. ಅಂತಹ ಒಂದು ಪರಿಸ್ಥಿತಿಯಲ್ಲಿ 239 ಕೋಟಿ ರೂಪಾಯಿಗಳ ಹಗರಣವನ್ನು ಇವತ್ತು ನಾವು ನೋಡಿದರೆ ಸರ್ಕಾರ ಸುಮ್ಮನೆ ಕುಳಿತರೆ, ಇದು ಐದು ಕೋಟಿ ಜನಗಳಿಗೆ ಕೊಡತಕ್ಕ ಗೌರವಾ ಅಥವಾ ಇದರಲ್ಲಿ ಏನು ವಿಚಾರ ಇದೆ ಎಂದು ನಾವು ಯೋಜನೆ ಮಾಡಬೇಕಾಗುತ್ತದೆ. ಇವತ್ತು ಇದಕ್ಕೆ 'ಹಗಲು ದರೋಡೆ' ಎಂಬ ಪದಕ್ಕಿಂತ ಹೆಚ್ಚಿನ ಪದವನ್ನು ಉಪಯೋಗಿಸಬೇಕಾಗುತ್ತದೆ. ಸಾಕಷ್ಟು ಈ ಹಗರಣದ ಬಗ್ಗೆ ಒಂದು ಚರ್ಚೆ ಆಗಿದೆ. ಮಾನ್ಯ ಮಂತ್ರಿಗಳು ಏನು ಇದರಲ್ಲಿ ಇನ್‌ವಾಲ್ವ್ ಆಗಿದ್ದಾರೆ ಮತ್ತು ಸಿಎಂಸಿಯಲ್ಲಿ ಒಂದು ರೆಸಲ್ಯೂಷನ್ ಆಗಿದೆ ಎಂದು ಹೇಳಿ ? ನನಗೆ ತಿಳಿದು ಬಂತು. ಅದನ್ನು ತಾವು ದಯಮಾಡಿ ನೋಡಬೇಕು. ಯಾರು ಹಣವನ್ನು ರಿಲೀಸ್ ಮಾಡಿಕೊಂಡು ಬರುತ್ತಾರೆ, ಅವರಿಗೇ ಗುತ್ತಿಗೆಯನ್ನು ಕೊಡತಕ್ಕದ್ದಕ್ಕೆ ಸಿಎಂಸಿ ಮೀಟಿಂಗ್‌ನಲ್ಲಿ ರೆಸಲ್ಯೂಷನ್ ಮಾಡಿರತಕ್ಕದ್ದನ್ನು ನಾನು ಕೇಳಿದ್ದೇನೆ. ಇದು ಇತಿಹಾಸದಲ್ಲಿಯೇ ಎಂದೂ ನಾವು ನೋಡಿಲ್ಲ. ಮೀಟಿಂಗ್‌ನಲ್ಲಿ ಯಾರು ಸರ್ಕಾರದಿಂದ ಹಣವನ್ನು ರಿಲೀಸ್ ಮಾಡಿಸಿಕೊಂಡು ಬರುತ್ತಾರೆ ಅವರಿಗೇ ಗುತ್ತಿಗೆಯನ್ನು ಕೊಡತಕ್ಕದ್ದಕ್ಕೆ ಮೀಟಿಂಗ್‌ನಲ್ಲಿ ರೆಸಲ್ಯೂಷನ್ ಮಾಡತಕ್ಕದ್ದು. ಇವತ್ತು ಯಾವುದೇ ರಸ್ತೆ ಆಗಿಲ್ಲ, ಯಾವುದೇ ಲೈಟ್ ಕಂಬ ಹಾಕಿಲ್ಲ, ಕಾಂಗ್ರೆಸ್ ಕಿತ್ತಿಲ್ಲ. ಅದಕ್ಕೆ ಒಂದೊಂದು ಕೋಟಿ ರೂಪಾಯಿ ಹಣವನ್ನು ಬಿಡುಗಡೆ ಮಾಡತಕ್ಕದ್ದನ್ನು ಮಾಡಿಕೊಂಡು ಬಂದಿದ್ದಾರೆ. ಇವತ್ತು ಅಲ್ಲಿ ಇರತಕ್ಕ ನಮ್ಮ ಪಕ್ಷದ ಒಬ್ಬ ಸದಸ್ಯರಾದ ಶ್ರೀ ಚಕ್ರಪಾಣಿ ಎಂಬುವರು ಈ ಹಗರಣವನ್ನು ಎತ್ತಲಿಕ್ಕೆ ಹೋದಾಗ ಅವರ ಸದಸ್ಯತ್ವವನ್ನು ರದ್ದುಗೊಳಿಸಲಿಕ್ಕೆ ಸರ್ಕಾರದ ಅಧಿಕಾರಿ ನೋಟೀಸ್ ಕೊಡುತ್ತಾರೆ. ಸರ್ಕಾರದ ಅಧಿಕಾರ ಅವರಿಗೆ ನೋಟೀಸ್ ಕೊಟ್ಟು ಅವರ ಸದಸ್ಯತ್ವವನ್ನು ತೆಗೆದು ಹಾಕುತ್ತೇವೆಂದು ಹೇಳುತ್ತಾರೆ. ದಯಮಾಡಿ ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಗಮನ ಹರಿಸದೇ ಇದ್ದರೆ ಬಹಳವಾಗಿ ದೇಶದ ಜನತೆಗೆ ಅನ್ಯಾಯ ಮಾಡಿದ ರೀತಿಯಲ್ಲಿ ಆಗುತ್ತದೆ. ಸಂಬಂಧಪಟ್ಟಂತಹ ಮಾನ್ಯ ಮಂತ್ರಿಗಳು ಇರಬಹುದು ಅಥವಾ ಇದನ್ನು ರಿಲೀಸ್ ಮಾಡಿದಂತಹ ಯಾವುದೇ ಉನ್ನತ ಮಟ್ಟದ ಅಧಿಕಾರಿಗಳು ಇರಬಹುದು, ಹಣ ಖರ್ಚು ಮಾಡತಕ್ಕಂತಹ ಸಂದರ್ಭದಲ್ಲಿ ನಡೆದಿರತಕ್ಕಂತಹ ಅವ್ಯವಹಾರ ಇರಬಹುದು. ಸಿಎಂಸಿನಲ್ಲಿ ಇರತಕ್ಕಂತಹ ಅಧಿಕಾರಿಗಳು ಇರಬಹುದು. ಎಲ್ಲರನ್ನೂ ಅಮಾನತ್ತಿನಲ್ಲಿಡಬೇಕಾಗುತ್ತದೆ. ಇಲ್ಲದೇ ಇದ್ದರೆ ಇದಕ್ಕೆ ನ್ಯಾಯ ಸಿಗುವುದಿಲ್ಲ. ಲೋಕಾಯುಕ್ತ ಎನ್ನುವುದಕ್ಕೆ ಅರ್ಥ ಇರುವುದಿಲ್ಲ. ಲೋಕಾಯುಕ್ತದವರು ಇವತ್ತೇನು ಹೆಜ್ಜೆ ಇಟ್ಟಿದ್ದಾರೆ, ಆ ಹೆಜ್ಜೆಗೆ ನಿಜವಾದಂತಹ ಅರ್ಥ ಸಿಗಬೇಕು. ಮುಂದೆ ಏನಾದರೂ ಒಳ್ಳೆಯದು ಆಗಬೇಕು ಎನ್ನುವ ಹಾಗಿದ್ದರೆ, ಈ ಭ್ರಷ್ಟಾಚಾರ ನಿಲ್ಲಬೇಕು

ಎಂದು ಇದ್ದರೆ, ಇದನ್ನು ಯಾರೋ ವಿರೋಧ ಪಕ್ಷದವರು ಮಾತನಾಡಿದರು ಎಂಬುದು ಮುಖ್ಯವಲ್ಲ ; ಇವತ್ತು ಮಾನ್ಯ ಮುಖ್ಯಮಂತ್ರಿಗಳು ಮುಂದಾಗಿ ಇದರ ಮೇಲೆ ಗಮನ ತೆಗೆದುಕೊಂಡು ಇದರಲ್ಲಿ ಶಾಮೀಲಾಗಿರತಕ್ಕಂಥ ಅಧಿಕಾರಿಗಳಿಂದ, ಜನಪ್ರತಿನಿಧಿಗಳು ಯಾರೇ ಇರಬಹುದು, ಇದರ ಮೇಲೆ ಕ್ರಮ ಜರುಗಿಸುವಂತಹ ಕೆಲಸವನ್ನು ಸರ್ಕಾರ, ಮಾನ್ಯ ಮಖ್ಯಮಂತ್ರಿಗಳು ಮಾಡಬೇಕು ; ಹಾಗೆ ಮಾಡದೇ ಇದ್ದರೆ ಅದು ಸರಿಯಲ್ಲ. ಇವತ್ತು ಕರ್ನಾಟಕದ ಇತಿಹಾಸದಲ್ಲಿ ಈ ಹಗರಣ ಎಲ್ಲೂ ನಡೆದಿರಲಿಲ್ಲ. ಮುಂದೆ ನಡೆಯತಕ್ಕದ್ದನ್ನು ನಾವು ನೋಡಬಾರದು, ಆ ಒಂದು ಮಾರ್ಗವನ್ನು ನಾವು ಕಾಣಬೇಕು ಎಂದರೆ ಇವತ್ತು ಮಾನ್ಯ ಮುಖ್ಯಮಂತ್ರಿಗಳು ಆ ದಿಸೆಯಲ್ಲಿ ಒಂದು ನಿರ್ಧಾರವನ್ನು ತೆಗೆದುಕೊಳ್ಳಬೇಕೆಂದು ನಾನು ಒತ್ತಾಯ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು :- ಮಾನ್ಯ ಸುರೇಶ್ ಕುಮಾರ್ ಅವರೆಲ್ಲಾ ಮಾತನಾಡಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್ :- ನಾನು ಒಂದೆರಡು ವಿಷಯ ಹೇಳಿ ಕನ್‌ಕ್ಲೂಡ್ ಮಾಡುತ್ತೇನೆ.

ಶ್ರೀ ವಿ. ನಾರಾಯಣಸ್ವಾಮಿ :- ನಾನೂ ಒಂದೆರಡು ವಿಷಯಗಳನ್ನು ಪ್ರಸ್ತಾಪ ಮಾಡಬೇಕಾಗಿದೆ.

ಅಧ್ಯಕ್ಷರು :- ನೀವು ಸ್ಲಿಪ್ ಕಳುಹಿಸಬೇಕು. ಸ್ಲಿಪ್ ಕಳುಹಿಸಿದಿದ್ದರೆ ನಾನು ಅವಕಾಶ ಕೊಡುತ್ತೇನೆ. ನೀವು ಸ್ಲಿಪ್ ಕಳುಹಿಸದೇ ಇದ್ದರೆ ನಾನು ಅಲೋ ಮಾಡುವುದಿಲ್ಲ.

ಶ್ರೀ ವಿ. ನಾರಾಯಣಸ್ವಾಮಿ :- ನಾನು ಎರಡೇ ನಿಮಿಷ ಮಾತನಾಡುತ್ತೇನೆ.

ಅಧ್ಯಕ್ಷರು :- ನೀವು ಸ್ಲಿಪ್ ಕಳುಹಿಸಿಲ್ಲ, ದಯವಿಟ್ಟು ಕ್ಷಮಿಸಿ. ನಾನು ಇವತ್ತು ಹೇಳುತ್ತಿದ್ದೇನೆ ಇನ್ನು ಮುಂದೆ ಯಾರ್ಯಾರು ಮಾತನಾಡಬೇಕು ಎಂದು ಇದ್ದೀರೋ ಅವರು ಸ್ಲಿಪ್ ಕಳುಹಿಸಿಕೊಟ್ಟರೆ ನಾನು ಟೈಮಿಂಗ್ಸ್ ಅಡ್ಜಸ್ಟ್ ಮಾಡಿಕೊಂಡು ಯಾರ್ಯಾರಿಗೆ ಎಷ್ಟು ಹೊತು ಯಾವ್ಯಾವ ಪಾರ್ಟಿಯವರಿಗೆ ಎಷ್ಟು ಹೊತ್ತು ಕೊಡಬಹುದು ಎಂದು ಅನುಕೂಲ ಮಾಡಿ ಕೊಡಲು ಆಗುತ್ತದೆ. ಏನೂ ಸ್ಲಿಪ್ ಕಳುಹಿಸಿದೇ ಆಲ್ ಆಫ್ ಎ ಸಡನ್ ಎದ್ದುನಿಂತು ಬಿಟ್ಟರೆ ಹೇಗೆ ? ನೀವು ಯಾರ್ಯಾರು ಮಾತನಾಡಬೇಕು ಎಂದು ಇಚ್ಛಿಪಡುತ್ತೀರೋ ಸ್ಲಿಪ್ ಕಳುಹಿಸಿ ನಾನು ಸಮಯ ಗುರುತು ಹಾಕಿಕೊಳ್ಳುತ್ತೇನೆ, ಆ ಪ್ರಕಾರ ನಾನು ಕರೆಯುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :- ಅವರೂ ಸಿಗ್ನೇಚರ್ ಹಾಕಿದ್ದಾರೆ.

ಅಧ್ಯಕ್ಷರು :- ಸಿಗ್ನೇಚರ್ 19 ಜನ ಹಾಕಿದ್ದಾರೆ, 19 ಜನಕ್ಕೂ ಅವಕಾಶ ಕೊಡುವುದಕ್ಕೆ ಆಗುತ್ತದೆಯೇ ? ಮಾನ್ಯ ವಿರೋಧ ಪಕ್ಷದವರು ಮಾತನಾಡಿ. ಇನ್ನು ಮುಂದೆ ಎಲ್ಲಾ ಚೀಟಿ ಬರೆದು ಕಳುಹಿಸಿ. ಮಧ್ಯೆ ಮಧ್ಯೆ ಎದ್ದು ನಿಂತು ಅವಕಾಶ ಕೇಳಿದರೆ ನನಗೆ ಕೊಡಲು ಕಷ್ಟ ಆಗುತ್ತದೆ.

ಶ್ರೀ ಜಗದೀಶ್ ಶೆಟ್ಟರ್ :- ಸನ್ಮಾನ್ಯ ಅಧ್ಯಕ್ಷರೆ, ಇದು ಒಂದು ಬಹಳ ಮಹತ್ವವಾದ ವಿಷಯ.

ಶ್ರೀ ಕೆ.ಎಂ. ಕೃಷ್ಣಮೂರ್ತಿ :- ಬಹಳ ಜನ ಹೇಳಿದರೆ ಇನ್ನೂ ಹೆಚ್ಚು ವಿಚಾರಗಳು ಗೊತ್ತಾಗುತ್ತದೆ.

ಅಧ್ಯಕ್ಷರು :- ಜನತಾದಳದ 19 ಜನ ಶಾಸಕರು ಸಹಿ ಮಾಡಿದ್ದಾರೆ, ಎಲ್ಲರಿಗೂ ಅವಕಾಶ ಕೊಡಲು ಕಷ್ಟ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) :- ಮಾನ್ಯ ಅಧ್ಯಕ್ಷರೆ ಈ ಒಂದು ಬಹಳ ಪ್ರಮುಖವಾದ ವಿಷಯದ ಬಗ್ಗೆ ಸಾಕಷ್ಟು ಚರ್ಚೆಆಗಿದೆ. ಮಾನ್ಯ ಸುರೇಶ್‌ಕುಮಾರ್ ಅವರು, ಮಾನ್ಯ ಸಿಂಧ್ಯಾ ಅವರು ಮತ್ತು ಇನ್ನಿತರ ಪ್ರಮುಖ ಸದಸ್ಯರು ಬಹಳ ವಿಚಾರಾತ್ಮಕವಾಗಿ ಸಾಕಷ್ಟು ವಿಚಾರಗಳನ್ನು ಇಲ್ಲಿ ಹೇಳಿದ್ದಾರೆ. ನಾನು ಬೇರೆ ವಿಷಯಗಳನ್ನು ಹೆಚ್ಚಿಗೆ ಮಾತನಾಡುವುದಿಲ್ಲ. ಲೋಕಾಯುಕ್ತದ ಬಗ್ಗೆ ಹೇಳುತ್ತೇನೆ. ಲೋಕಾಯುಕ್ತದ ಬಗ್ಗೆ ನಾನು ಹಿಂದೆ ಹೇಳಿದ ಹಾಗೆ ಲೋಕಾಯುಕ್ತ ಕ್ರಿಯೇಷನ್ ಆಗಿದ್ದರಿಂದ ಇವತ್ತು ಎಷ್ಟೊಂದು ಹಗರಣಗಳು ಹೊರಗೆ ಬರುತ್ತಿವೆ. ಮುಖ್ಯವಾಗಿ ಅದಕ್ಕೆ ಹೆಚ್ಚಿನ ಅಧಿಕಾರವನ್ನು ಕೊಡಬೇಕು ಎಂಬ ಬಗ್ಗೆ ನಾವೆಲ್ಲಾ ಚಿಂತನೆ ಮಾಡಬೇಕಾಗಿದೆ. ಮಾನ್ಯ ಮುಖ್ಯಮಂತ್ರಿಗಳು ಒಂದ ಕಡೆ ಹೇಳಿದರು ; ಈ ಲೋಕಾಯುಕ್ತಕ್ಕೆ ಇನ್ನೂ ಹೆಚ್ಚಿನ ಅಧಿಕಾರ ಕೊಡಬೇಕು, ಕಾನೂನಿನ ತಿದ್ದುಪಡಿ ಮಾಡಬೇಕು ಎಂದು ಹೇಳಿದರು. ಬಹುಶಃ ಇದೇ ಸದನದಲ್ಲಿ ಅದು ಬರುತ್ತದೆ ಎಂದು ನಾವು ತಿಳಿದುಕೊಂಡಿದ್ದೆವು, ಅದು ಬರಲಿಲ್ಲ. ಆದಷ್ಟು ಹೆಚ್ಚಿನ ಅಧಿಕಾರವನ್ನು ಲೋಕಾಯುಕ್ತಕ್ಕೆ ಕೊಡುವುದು ಆಗಬೇಕು. ಆಮೇಲೆ ಮುಂದೆ ಇಂತಹ ಸಂದರ್ಭದಲ್ಲಿ, ಇವತ್ತೇನೋ ರೈಡ್ ಮಾಡಿದರು, ಆ ರೈಡ್‌ನಲ್ಲಿ ಯಾರ‍್ಯಾರು ಅಧಿಕಾರಿಗಳು ಸಿಕ್ಕಿಹಾಕಿಕೊಂಡಿದ್ದಾರೆ ಅವರ ಮೇಲೆ ತಕ್ಷಣವೇ ಕ್ರಮ ಕೈಗೊಳ್ಳುವುದು ಆಗಬೇಕು ; ಅದು ಆಗುತ್ತಿಲ್ಲ. ಆ ರೀತಿ ಆದಾಗ ಮಾತ್ರ ಬೇರೆಯವರಿಗೆ ಹೆದರಿಕೆ ಹುಟ್ಟುತ್ತದೆ. ಇಲ್ಲದೇ ಇದ್ದರೆ ಹೆದರಿಕೆ ಹುಟ್ಟುವುದಿಲ್ಲ. ಇವತ್ತೇನು 7-8 ನಗರಸಭೆಗಳು ಇದ್ದಾವೆ, ಸಿಎಂಸಿಗಳು ಇದ್ದಾವೆ, ಲೋಕಾಯುಕ್ತದವರು ಧಾಳಿ ಮಾಡಿ ಬಂದಮೇಲೆ ಎಷ್ಟು ಜನ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿದಿರಿ ? ಏನು ಕಾನೂನು ಕ್ರಮ ಕೈಗೊಂಡಿದ್ದೀರಿ ? ಇದು ಬಹಳ ಮುಖ್ಯ. ಕೇವಲ 3-4 ಜನರ ಮೇಲೆ ಕ್ರಮ ಕೈಗೊಳ್ಳಬಾರದು ಯಾರೋ ಸಣ್ಣ ಪುಟ್ಟ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುವುದು ಆಗಬಾರದು. ಇವತ್ತು ಐಎಎಸ್ ಅಧಿಕಾರಿಗಳು ಸರ್‌ಚಾರ್ಜ್ ಅಮೌಂಟ್ ಏನು ರಿಲೀಸ್ ಮಾಡಿದರು, ಅದರಲ್ಲಿರತಕ್ಕ ಐಎಎಸ್ ಅಧಿಕಾರಿಗಳು ದೊಡ್ಡ ತಿಮಿಂಗಲಗಳ ಹಾಗೆ. ಆ ತಿಮಿಂಗಲಗಳನ್ನು ಹಿಡಿದುಕೊಂಡು ಸಣ್ಣ ಮೀನುಗಳವರೆಗೆ ತಾವು ಕ್ರಮ ಕೈಗೊಳ್ಳಬೇಕಾಗುತ್ತದೆ. ಕೇವಲ ಸಣ್ಣ ಮೀನುಗಳನ್ನು ಮಾತ್ರ ಬಲಿ ಹಾಕುವಂತಹದು ಅಲ್ಲ ; ಇದು ಇವತ್ತು ಆಗುತ್ತಿದೆ. ಅದಕ್ಕಾಗಿ ಇವತ್ತು ಯಾರ‍್ಯಾರು ದೊಡ್ಡ ದೊಡ್ಡ ವ್ಯಕ್ತಿಗಳು ಇದ್ದಾರೆ ದೊಡ್ಡ ದೊಡ್ಡ ತಿಮಿಂಗಲಗಳು ಇದ್ದಾವೆ, ಅವರ ಮೇಲೂ ಕ್ರಮ ಕೈಗೊಳ್ಳುವಂತಹದು, ತಕ್ಷಣವೇ ಸಸ್ಪೆಂಡ್ ಮಾಡುವಂತಹದು ಆಗೇಬಕು ಎನ್ನುವದೇ ನನ್ನ ವಿಚಾರ. ಏಕೆಂದರೆ ಒಂದು ಉದಾಹರಣೆ ನಿಮಗೆ ಕೊಡುತ್ತೇನೆ ; ಚಿಂತಾಮಣಿ ನಗರಸಭೆಯ ವಿಚಾರ. ಈಗಾಗಲೇ ಅಲ್ಲಿನ ಆಯುಕ್ತರ ಬಗ್ಗೆ ಲಕ್ಷಾಂತರ ರೂಪಾಯಿಗಳ ಅವ್ಯವಹಾರ ಆಗಿದೆ ಎಂದು ಲೋಕಾಯುಕ್ತಕ್ಕೆ ಕಂಪ್ಲೈಂಟ್ ಆಗಿ ಲೋಕಾಯುಕ್ತದಲ್ಲಿ ಎನ್‌ಕ್ವೈರಿ ಆಗಿ ಅವರ ಮೇಲೆ ಈಗಾಗಲೇ ತಪ್ಪಿತಸ್ಥರು ಎಂದು ಫೈಂಡಿಂಗ್ ಆಗಿದೆ ಮತ್ತು ಅವರ ಮೇಲೆ ಕ್ರಮ ಕೈಗೊಳ್ಳಬೇಕೆಂದು ಹೇಳಿ ಸರ್ಕಾರಕ್ಕೆ ಡೈರೆಕ್ಷನ್ ಕೊಟ್ಟಿದ್ದಾರೆ. ಅಲ್ಲಿದ್ದಂತಹ ಅಧ್ಯಕ್ಷರು ಮಾನ್ಯ ಮುಖ್ಯಮಂತ್ರಿಗಳಿಗೆ ಪತ್ರವನ್ನು ಬರೆದಿದ್ದಾರೆ. ಎಲ್ಲರೂ ಇವರ ಮೇಲೆ ಕ್ರಮ ಕೈಗೊಳ್ಳಬೇಕೆಂದು ತಿಳಿಸಿದ್ದಾರೆ. ಆದರೆ ಇವತ್ತು ಏನು ಆಗಿದೆ ಎಂದರೆ ಆ

ಲೋಕಾಯುಕ್ತದವರು ಫೈಂಡಿಂಗ್ ಕೊಟ್ಟ ಮೇಲೂ, ಅವರು ತಪ್ಪಿತಸ್ಥ ಇದ್ದಾನೆಂದು ನಿರ್ಣಯ ಆದಮೇಲೂ ಇವತ್ತಿನವರೆಗೆ ಅವರನ್ನು ಸಸ್ಪೆಂಡ್ ಮಾಡಲು ಆಗಿಲ್ಲ. ಇದು ಚಿಂತಾಮಣಿ ನಗರಸಭೆಯ ಒಂದು ಉದಾಹರಣೆ ಕೊಡುತ್ತಿದ್ದೇನೆ. ಇಂತಹವು ರಾಯಚೂರಿನಲ್ಲಿ ಇದ್ದಾವೆ. ಅಲ್ಲಿ ಹಗರಣಗಳು ಆಗಿದ್ದಾವೆ. ಅಲ್ಲೂ ಸಾಕಷ್ಟು ಪ್ರಕರಣಗಳು ಇದ್ದಾವೆ. ಆದರೆ ನಾನು ಒಂದು ಸಣ್ಣ ಉದಾಹರಣೆ ಕೊಡುತ್ತಿದ್ದೇನೆ. ಅಲ್ಲಿ ಇದ್ದಂತಹ ಆಯುಕ್ತರು ತಪ್ಪಿತಸ್ಥ ಎಂದು ನಿರ್ಧಾರ ಆದಂತಹ ಸಂದರ್ಭದಲ್ಲಿ ಅವರನ್ನು ಸಸ್ಪೆಂಡ್ ಮಾಡಲಾರದೇ ಬೇರೆ ಕಡೆಗೆ ವರ್ಗಾವಣೆ ಮಾಡುವಂತಹ ಸಂದರ್ಭದಲ್ಲಿ ಅಲ್ಲಿದ್ದಂತಹ ಜಿಲ್ಲಾ ಉಸ್ತುವಾರಿ ಸಚಿವರು ಅವನು ಒಳ್ಳೆಯವನು ಇದ್ದಾನೆ, ಅವನನ್ನು ಇಲ್ಲೇ ಮುಂದುವರಿಸಬೇಕು ಎನ್ನುವಂತಹ ಶಿಫಾರಸ್ಸು ಪತ್ರವನ್ನು ಕೊಡುತ್ತಾರೆ. ಅಂದರೆ ಇವತ್ತು ಈ ರೀತಿ ಆದಾಗ ಇನ್ನು ಲೋಕಾಯುಕ್ತದವರ ಫೈಂಡಿಂಗ್‌ಗೆ, ಲೋಕಾಯುಕ್ತದವರು ಏನಾದರೂ ನಿರ್ಧಾರ ಕೈಗೊಂಡಿರುವುದಕ್ಕೆ ಏನು ಅರ್ಥ ಉಳಿಯುತ್ತದೆ ಎನ್ನುವುದನ್ನು ದಯಮಾಡಿ ವಿಚಾರ ಮಾಡಬೇಕಾಗುತ್ತದೆ. ಅದಕ್ಕಾಗಿ ಇಂತಹ ಸಂದರ್ಭದಲ್ಲಿ ತಕ್ಷಣವೇ ಕ್ರಮ ಕೈಗೊಳ್ಳುವುದು ಆಗಬೇಕು ಮತ್ತು ಸರ್ಕಾರ ಇದರಲ್ಲಿ ಸ್ಪಷ್ಟನೆ ಮಾಡಲಿ ; ಎಷ್ಟು ಜನ ಅಧಿಕಾರಿಗಳ ಮೇಲೆ ಕಾನೂನು ಕ್ರಮ ಕೈಗೊಂಡಿದ್ದೀರಿ ? ಈ ಎಲ್ಲಾ ಹಗರಣ ಹೊರಗೆ ಬಂದಮೇಲೆ ಎಷ್ಟು ಅಧಿಕಾರಿಗಳ ಮೇಲೆ ಕಾನೂನು ಕ್ರಮ ಕೈಗೊಂಡಿದ್ದೀರಿ ಎನ್ನುವುದು ಒಂದು ವಿಚಾರ. ಆಮೇಲೆ ಇಲ್ಲಿ ಇವತ್ತು ಮಾನ್ಯ ಸುರೇಶ್‌ಕುಮಾರ್ ಅವರು ತಮ್ಮ ಚರ್ಚೆಯಲ್ಲಿ ರೆಫರ್ ಮಾಡಿದ ಹಾಗೆ ಈ ಪ್ರಕರಣಗಳು ಏನು ಹೊರಗೆ ಬಂದಿದ್ದಾವೆ, ಇದರಲ್ಲಿ ಮಾನ್ಯ ಮಂತ್ರಿಗಳ ಹಿತಾಸಕ್ತಿ ಇರುವಂತಹದು, ಅದರ ಬಗ್ಗೆ ಅವರು ಸಾಕಷ್ಟು ಬೆಳಕನ್ನು ಚೆಲ್ಲಿದರು. ಇವತ್ತು ಮಾನ್ಯ ಮಂತ್ರಿಗಳ ಮೇಲೆ ಏಕೆ ಸಂಶಯಾಸ್ಪದ ವಿಚಾರ ಬರುತ್ತಿದೆ ಎನ್ನುವಂತಹದು. ಇವತ್ತು ಈ ಹಗರಣಗಳಲ್ಲಿ ಭಾಗವಹಿಸಿದ್ದಾರೆ ? ಶ್ರೀ ನಾಗರಾಜ್ ಇರಬಹುದು, ರಮೇಶ್ ಇರಬಹುದು, ಶ್ರೀ ಬಿ.ಕೆ. ಮೋಹನ್ ಬಾಬುರವರು ಇರಬಹುದು, ಮುನಿಸ್ವಾಮಿ ಅವರು ಇರಬಹುದು. ನಾನು ಎಲ್ಲಾ ವಿವರಗಳನ್ನು ಕೊಡುತ್ತೇನೆ. ಅವರೆಲ್ಲರೂ ಮಂತ್ರಿಗಳ ಸಂಬಂಧೀಕರು. ಮಂತ್ರಿಗಳ ಅತಿ ಹತ್ತಿರದ ಸಂಬಂಧೀಕರು ಈ 4-5 ಜನ ಇದ್ದಾರೆ, ಇವರೇ ಎಲ್ಲಾ ಸರಬರಾಜು ಮಾಡಿದ್ದು, ಇವರುಗಳ ಕಡೆಯಿಂದ ಎಲ್ಲಾ ಕಡೆ ಡಿಸ್ಟ್ರಿಬ್ಯೂಟ್ ಆಗಿದ್ದು. ಇವರೇ ಕಾಮಗಾರಿಗಳನ್ನು ಮಾಡಿರುವಂತಹದು. ಅದಕ್ಕಾಗಿ 4-5 ಜನ ಹೆಸರನ್ನು ಹೇಳಿದೆ, ಇವರೆಲ್ಲಾ ಮಂತ್ರಿಗಳ ಸಂಬಂಧೀಕರು. ಅದಕ್ಕಾಗಿ ಇವತ್ತು ಸಂಶಯದ ಕತ್ತಿ ಮಾನ್ಯ ಮಂತ್ರಿಗಳ ಮೇಲೆ ತೂಗುತ್ತಿದೆ. ಅದಕ್ಕಾಗಿ ನಾನು ಮಾನ್ಯ ಮುಖ್ಯಮಂತ್ರಿಗಳೂ ಈ ಸದನದಲ್ಲಿ ಇದ್ದಾರೆ, ಸಂಬಂಧಪಟ್ಟ ಮಂತ್ರಿಗಳೂ ಇದ್ದಾರೆ. ನಾನು ಇವತ್ತು ಒಂದೇ ಒಂದು ಬೇಡಿಕೆ ಇಡುವಂತಹದು ; ಇವತ್ತು ಯಾವ ಮಂತ್ರಿಗಳ ಮೇಲೆ ಸಂಶಯದ ಕತ್ತಿ ತೂಗುಯ್ಯಾಲೆ ಆಡುತ್ತಿದೆ ಮತ್ತು ಅವರ ಸಂಬಂಧೀಕರು ಇದರಲ್ಲಿ ಇನ್‌ವಾಲ್ವ್‌ಮೆಂಟ್ ಇದ್ದಂತಹ ಸಂದರ್ಭದಲ್ಲಿ ಅವರು ನೈತಿಕ ಹೊಣೆ ಹೊತ್ತು ರಾಜೀನಾಮೆ ಕೊಡಬೇಕು. ಈಗಾಗಲೇ ಮಾನ್ಯ ಸೋಮಶೇಖರ್ ಅವರು ಮತ್ತು ಮಾನ್ಯ ಸದಸ್ಯರುಗಳು ಹೇಳಿದರು. ಅವರು ನೈತಿಕ ಹೊಣೆ ಹೊತ್ತು ರಾಜೀನಾಮೆ ಕೊಡಬೇಕು. ಈ ಸರ್ಕಾರದ ಮರ್ಯಾದೆ ಉಳಿಸುವುದಾದರೆ, ಇದರ ಬಗ್ಗೆ ನಿಷ್ಪಕ್ಷಪಾತವಾದ ತನಿಖೆ ಆಗಬೇಕಾದರೆ, ಮಾನ್ಯ ಮಂತ್ರಿಗಳು ತಕ್ಷಣವೇ ತಮ್ಮ ಸ್ಥಾನಕ್ಕೆ ರಾಜೀನಾಮೆಯನ್ನು ಕೊಟ್ಟು ಹೊರಗೆ ಬರಬೇಕಾಗುತ್ತದೆ.

6.50 ಪಿ.ಎಂ.

ಆಗ ಸರ್ಕಾರದ ಮರ್ಯಾದೆ ಉಳಿಯುತ್ತದೆ. ಇಲ್ಲದಿದ್ದರೆ ಇವೊತ್ತು ಮಾನ್ಯ ಮುಖ್ಯಮಂತ್ರಿಗಳು ಅವರ ರಾಜೀನಾಮೆ ತೆಗೆದುಕೊಳ್ಳಬೇಕೆನ್ನುವ ಒತ್ತಾಯವನ್ನು ನಾನು ಈ ಸಂದರ್ಭದಲ್ಲಿ ಮಾಡುತ್ತಿದ್ದೇನೆ. ಮತ್ತೊಂದು ವಿಚಾರವೇನೆಂದರೆ, ಲೋಕಾಯುಕ್ತರವರ ಧಾಳಿ ನಡೆದ ನಂತರ ಅವ್ಯವಹಾರಗಳಿಗೆ ಸಂಬಂಧಿಸಿದಂತೆ ಸಾಕಷ್ಟು ಕಡತಗಳು, ಕಾಗದಪತ್ರಗಳು ಲಭ್ಯವಾಗಿದ್ದು ಕೆಲವು ದಾಖಲೆಗಳನ್ನು ಸುಟ್ಟುಹಾಕಿರುತ್ತಾರೆ. ಆದುದರಿಂದ, ಇದರಲ್ಲಿ ಬೋನಫೈಡ್ಸ್ ಇದ್ದರೆ ತಕ್ಷಣದಿಂದಲೇ ಎಲ್ಲಾ ನಗರಸಭೆಗಳನ್ನು ಸೂಪರ್‌ಸೀಡ್ ಮಾಡಬೇಕೆನ್ನುವ ಬೇಡಿಕೆ ಇಡುತ್ತಿದ್ದೇನೆ. ಇಲ್ಲಿವರೆಗೆ ಸೂಪರ್‌ಸೀಡ್ ಏಕೆ ಮಾಡಲಿಲ್ಲ? ಅವ್ಯವಹಾರಗಳಿಗೆ ಸಂಬಂಧಿಸಿದ ದಾಖಲೆಗಳಿದ್ದರೂ ಅವುಗಳನ್ನು ಸೀಜ್ ಮಾಡಿ ವಶಕ್ಕೆ ತೆಗೆದುಕೊಂಡಿಲ್ಲ. ದಾಖಲೆ ಪತ್ರಗಳು ಇನ್ನೂ ಅಲ್ಲಿನ ಅಧ್ಯಕ್ಷರುಗಳು ಹಾಗೂ ಅಧಿಕಾರಿಗಳ ಕೈವಶದಲ್ಲಿದೆ. ಪರಿಸ್ಥಿತಿ ಹೀಗಿರುವಾಗ ನಿಷ್ಪಕ್ಷಪಾತ ತನಿಖೆ ನಡೆಸಲು ಹೇಗೆ ಸಾಧ್ಯ? ಅದಕ್ಕೋಸ್ಕರ ಈ ಎಲ್ಲಾ ಸಿ.ಎಂ.ಸಿ.ಗಳನ್ನು ಈ ತಕ್ಷಣದಿಂದಲೇ ಸೂಪರ್‌ಸೀಡ್ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತಿದ್ದೇನೆ. ಈ ಕುರಿತಾದ ಇನ್‌ವೆಸ್ಟಿಗೇಷನ್ ಅನ್ನು ಲೋಕಾಯುಕ್ತರು ಮಾಡುತ್ತಿರುವುದರಿಂದ ನಿಷ್ಪಕ್ಷಪಾತ ತನಿಖೆಗೆ ಪ್ರಕರಣವನ್ನು ಸಿ.ಬಿ.ಐ.ಗೂ ವಹಿಸಿಕೊಡಬೇಕು. ಏಕೆಂದರೆ, ಪ್ರಕರಣದ ಹಿಂದೆ ದೊಡ್ಡ ವ್ಯಕ್ತಿಗಳು, ರಾಜಕಾರಣಿಗಳು ಹಾಗೂ ಮಂತ್ರಿಗಳಿರುವುದರಿಂದ ಸಿ.ಬಿ.ಐ.ಗೆ ತನಿಖೆಗಾಗಿ ವಹಿಸಬೇಕೆಂದು ಒತ್ತಾಯಿಸುತ್ತಿದ್ದೇನೆ. ಭ್ರಷ್ಟಾಚಾರದ ವಿರುದ್ಧ ಧರ್ಮಯುದ್ಧ ಘೋಷಿಸಿದ್ದೇನೆಂದು ಮಾನ್ಯ ಮುಖ್ಯಮಂತ್ರಿಗಳು ಈಗಾಗಲೇ ಹೇಳಿರುವುದರಿಂದ ಈ ದಿಸೆಯಲ್ಲಿ ಅವರು ಪ್ರಥಮ ಹೆಜ್ಜೆಯನ್ನಿಡುವ ಮೂಲಕ ಮಾದರಿಯಾಗಲಿ ಹಾಗೂ ಅವರು ನೀಡಿರುವ ಹೇಳಿಕೆಗೆ ಇದರಿಂದ ಏನಾದರೂ ಅರ್ಥವುಂಟಾಗಲು ಸಾಧ್ಯವಿದೆ. ಅಲ್ಲದೆ, ಇದರಿಂದ ಇವೊತ್ತು ಸಮಾಜದ ಮುಂದೆ ನೈತಿಕತೆ ಕುರಿತು ಮಾತನಾಡುವ ಮೂಲಕ ರಾಜಕೀಯ ವ್ಯಕ್ತಿಗಳ ಬಗ್ಗೆ ಸರಿಯಾದ ಚಿತ್ರಣ ನೀಡಲು ಸಾಧ್ಯವಿದೆ. ಮಾನ್ಯ ಮುಖ್ಯಮಂತ್ರಿಗಳು ಇದಕ್ಕೆ ಸ್ಪಂದಿಸುತ್ತಾರೆಂದು ಭಾವಿಸಿ ಈ ಸಂದರ್ಭದಲ್ಲಿ ಒತ್ತಾಯಿಸುವ ಮೂಲಕ ಎಲ್ಲಾ ಬೇಡಿಕೆಗಳಿಗೆ ಸ್ಪಂದಿಸಿ ಅವರು ಒಂದು ಸ್ಪಷ್ಟವಾದ ತಮ್ಮ ನಿಲುವನ್ನು ಹೇಳಬೇಕೆಂದು ಆಗ್ರಹಪಡಿಸುತ್ತೇನೆ.

ಶ್ರೀ ಸಿ. ಬೈರೇಗೌಡ: (ವೇಮಗಲ್):- ಮಾನ್ಯ ಅಧ್ಯಕ್ಷರೆ, ಈಗಾಗಲೇ ಅನೇಕ ಸ್ನೇಹಿತರು ಮಾತನಾಡಿರುವುದರಿಂದ ಮತ್ತೊಮ್ಮೆ ಪುನರಾವರ್ತಿಸಲು ಹೋಗುವುದಿಲ್ಲ. ಈಗಾಗಲೇ ಲೋಕಾಯುಕ್ತರ ವರದಿ ಬಂದಿದ್ದು, ತಪ್ಪಿತಸ್ಥರು ಯಾರು ಎನ್ನುವುದು ಸೂರ್ಯನ ಬೆಳಕು ಎಷ್ಟು ಸ್ಪಷ್ಟವಾಗಿ ಗೋಚರವಾಗುತ್ತದೋ ಅಷ್ಟೇ ಸ್ಪಷ್ಟವಾಗಿ ಇವೊತ್ತು ಗೋಚರವಾಗುತ್ತಿದೆ. ಅದುದರಿಂದ, ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಇವೊತ್ತು ತತ್‌ಕ್ಷಣದಲ್ಲಿ ಕ್ರಿಮಿನಲ್ ಮೊಕದ್ದಮೆ ಹೂಡಬೇಕಾಗಿರುವುದು ಅತೀ ಅವಶ್ಯಕ. ಏಕೆಂದರೆ, ಇನ್ನು ಮುಂದೆ ಈ ಎನ್‌ಕ್ವೇರಿ, ಆ ಎನ್‌ಕ್ವೇರಿ ಎನ್ನುತ್ತಾ ಪ್ರಕರಣವನ್ನು ಹಾಗೇ ಮುಂದುವರೆಸಿಕೊಂಡು ಹೋದರೆ ಅವರು ಆರಾಮವಾಗಿ ಓಡಾಡಿಕೊಂಡಿರುವುದಕ್ಕೆ ಅವಕಾಶ ಮಾಡಿಕೊಟ್ಟಂತಾಗುತ್ತದೆ. ಆದಕಾರಣ, ಇವರೆಲ್ಲರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡಬೇಕೆಂದು ಒತ್ತಾಯಪಡಿಸುತ್ತಿದ್ದೇನೆ. ಜೊತೆಗೆ ದಿನಾಂಕ: 16.1.01 ರಂದು ಮಾನ್ಯ ಮುಖ್ಯಮಂತ್ರಿಗಳಿಗೆ ಸಾರ್ವಜನಿಕರು ದೂರು ಕೊಟ್ಟಿದ್ದಾರೆ. ಮುಖ್ಯಮಂತ್ರಿಗಳು

ಇದರಲ್ಲಿ "ಎನ್‌ಕ್ವೇರಿ ಅಂಡ್ ರಿಪೋರ್ಟ್" ಎಂದು ಬರೆದಿದ್ದರೆ, 'ಎನ್‌ಕ್ವೇರಿ' ಬದಲು 'ಎಕ್ಸ್‌ಪ್ಲೇನ್' ಎಂದಾಗಿದೆ. ತಮಾಷೆ ಹೇಗಿದೆಯೆಂದರೆ, 'ಎನ್‌ಕ್ವೇರಿ ಅಂಡ್ ರಿಪೋರ್ಟ್' ಎಂದು ಬರೆದಿರುವ ಮಾನ್ಯ ಮುಖ್ಯಮಂತ್ರಿಗಳ ಟಿಪ್ಪಣಿ ಏನಾಗುತ್ತದೆಂದರೆ, ಕಮೀಷನರ್ ಅವರಿಗೆ ವಿಚಾರಣೆ ನಡೆಸಿ ವರದಿ ಸಲ್ಲಿಸಬೇಕೆಂದು ಬರೆದಿದ್ದರೂ ಕೇವಲ ವಿವರಣೆ ಕೊಡಬೇಕೆಂದು ಕಾರ್ಯದರ್ಶಿಯವರಿಂದ ಸೂಚನೆ ಹೋಗುತ್ತದೆ. ಈ ಯಕ್ಷಿಣಿ ಹೇಗಾಯಿತು? ಮಾನ್ಯ ಮುಖ್ಯಮಂತ್ರಿಗಳು ಉತ್ತರಿಸುವ ಸಂದರ್ಭದಲ್ಲಿ ಸಾರ್ವಜನಿಕರಿಂದ ಈ ವಿಚಾರದಲ್ಲಿ ಈ ದಿನಾಂಕದಲ್ಲಿ ಅಥವಾ ಬೇರೆ ದಿನಾಂಕದಲ್ಲಿ ದೂರು ಬಂದಿತ್ತೆ? ಇಲ್ಲವೇ? ದೂರು ಬಂದಿದ್ದರೆ ನೀವು ತೆಗೆದುಕೊಂಡಿರುವ ಕ್ರಮಗಳೇನು? 'ಎನ್‌ಕ್ವೇರಿ' ಎಂದು ಬರೆದಿದ್ದರೂ ಅದು 'ಎಕ್ಸ್‌ಪ್ಲೇನ್' ಎಂದಾಗಿರುವುದು ನಿಜವೇ? ಸುಳ್ಳೇ ಎಂಬುದನ್ನು ದಯವಿಟ್ಟು ಹೇಳಬೇಕಾಗುತ್ತದೆ. ಇದರ ತತ್‌ಕ್ಷಣ ತಮ್ಮ ರಾಜಿನಾಮೆ ನೀಡಬೇಕು. ಇಲ್ಲದಿದ್ದರೆ ಅವರನ್ನು ಸಚಿವ ಸಂಪುಟದಿಂದ ವಜಾಗೊಳಿಸಬೇಕೆಂದು ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ವೈಯಕ್ತಿಕವಾಗಿ ಅವರ ಹೆಸರು ಬಳಸಿಕೊಂಡು ಈ ರೀತಿ ಹೇಳುವುದು It is not fair and he is a senior member.

(ಗೊಂದಲ)

**Sri R.V. Deshpande:** What is the meaning as though you have come to the conclusion. It should not go on record. ಬೇರೆ ವಿಚಾರ ಮಾತನಾಡಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ನೇರವಾಗಿ ಒಬ್ಬ ಮಂತ್ರಿಗಳ ಹೆಸರು ಪ್ರಸ್ತಾಪಿಸಿ ಈ ರೀತಿ ಹೇಳುವುದು this is not fair

ಅಧ್ಯಕ್ಷರು: ನೀವು ಯಾರಾದರೊಬ್ಬರ ವಿರುದ್ಧ ವೈಯಕ್ತಿಕವಾಗಿ ಆರೋಪ ಮಾಡುವಾಗ ನಿಯಮ 328ರ ಪ್ರಕಾರ ನನಗೆ ಮೊದಲೇ ಸೂಚನೆ ಕಳುಹಿಸಿಕೊಡಬೇಕು. ಆದರೆ, ನೀವು ಆ ರೀತಿ ಕಳುಹಿಸಿಲ್ಲ. ನೀವು ಒಬ್ಬ ಹಿರಿಯ ಸದಸ್ಯರಾಗಿದ್ದು ಈ ರೀತಿ ಮಾಡಿದರೆ ಹೇಗೆ?

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ: ಬೇಕಾದರೆ ನೀವು ಮೊದಲು ಮಾನ್ಯ ಅಧ್ಯಕ್ಷರಿಗೆ ನೋಟೀಸ್ ಕಳುಹಿಸಿಕೊಡಿ. ಅನಂತರ ಚಾರ್ಜ್ ಮಾಡಿ. ಈ ರೀತಿ ಮಾಡದೆ ಅವರ ಹೆಸರನ್ನು ನೇರವಾಗಿ ಪ್ರಸ್ತಾಪಿಸಿ ಈ ರೀತಿ ಹೇಳುವುದು this is not fair

ಅಧ್ಯಕ್ಷರು: ನಿಯಮಾವಳಿ ರೀತ್ಯ ನೀವು ನನಗೆ ನೋಟೀಸ್ ಕಳುಹಿಸಿಕೊಟ್ಟಿಲ್ಲ. ಆದುದರಿಂದ, ನೀವು ಹೇಳಿದ್ದನ್ನು ಕಡತದಿಂದ ತೆಗೆದುಹಾಕಬೇಕೆಂದು ಸೂಚಿಸುತ್ತಿದ್ದೇನೆ.

(ಗೊಂದಲ)

ಅಧ್ಯಕ್ಷರು: ಕಡತದಿಂದ ತೆಗೆಸಿದ್ದಾಯಿತು.

ಶ್ರೀ ಕೆ.ಎಚ್. ರಂಗನಾಥ್: ಮಾನ್ಯ ಅಧ್ಯಕ್ಷರೆ, ಅವರು ಮೊದಲೇ ಅವರಿಗೆ ನೋಟೀಸ್ ನೀಡಿ ಚಾರ್ಜಸ್ ಮಾಡಿದರೆ ಅವರು ಹೇಳುವುದು ಸರಿ ಇರುತ್ತಿತ್ತು. ಸುಮ್ಮನೆ ಲಘುವಾಗಿ ಆ ರೀತಿ ಹೇಳಿದರೆ ಏನರ್ಥ? It should not go into the record.

**MR. SPEAKER:** It is already removed from the records.

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು): ಮಾನ್ಯ ಸಭಾಧ್ಯಕ್ಷರೆ, ನಾನು ಹೆಚ್ಚು ಸಮಯ ತೆಗೆದುಕೊಳ್ಳದೆ 4-5 ವಿಷಯಗಳಿಗೆ ಸಂಬಂಧಿಸಿದಂತೆ ಮಾತ್ರ ಸ್ಪಷ್ಟೀಕರಣವನ್ನು ನೀಡುವ ಮೂಲಕ ಈ ಸದನಕ್ಕೆ ಸತ್ಯ ಸಂಗತಿಯನ್ನು ಹೇಳಲು ಪ್ರಯತ್ನ ಮಾಡುತ್ತೇನೆ. ಮೊದಲನೆಯದಾಗಿ,ಮಾನ್ಯ ಸದಸ್ಯರಾದ ಸುರೇಶ್‌ಕುಮಾರ್‌ರವರು ಮಾತನಾಡುವಾಗ ನಾನು ಸದನದ ಒಳಗಡೆ ಬಂದೆ ಅವರು ಮಾತನಾಡುತ್ತಾ ಬ್ರೂಕ್‌ಬಾಂಡ್, ಐಟಿಪಿಎಲ್ ಹಾಗೂ ಚೈತನ್ಯ ಡೆವಲಪರ್ಸ್ ವಿಚಾರದಲ್ಲಿ ಕೆಲವು ವಿಚಾರಗಳನ್ನು ಪ್ರಸ್ತಾಪಿಸುತ್ತಾ ಐವತ್ತು ಕೋಟಿ ರೂಪಾಯಿಗಳು ಬರಬೇಕಾಗಿತ್ತು, 46 ಲಕ್ಷ ರೂ. ತೆಗೆದುಕೊಂಡಿದ್ದಾರೆ, 30 ಲಕ್ಷ ರೂ ತೆಗೆದುಕೊಂಡಿದ್ದಾರೆ ಮತ್ತು ಕೇಸನ್ನು ಸಂಪೂರ್ಣವಾಗಿ ಮುಗಿಸಿದ್ದಾರೆಂದು ಬಹಳ ಸಂತೋಷದಿಂದ ಹೇಳಿದ್ದಾರೆ. ನಾವು 1999ನೇ ಇಸವಿಯ ಡಿಸೆಂಬರ್ ತಿಂಗಳಿನಲ್ಲಿ ಆಡಳಿತವನ್ನು ಪ್ರಾರಂಭ ಮಾಡಿದೆವು. 16.6.99 ರಲ್ಲಿ ಅಧಿಕಾರದಲ್ಲಿದ್ದಂತಹ ಸಿ.ಎಂ.ಸಿ. ಕುರಿತು ಹೇಳುವುದಾದರೆ, ಮಾನ್ಯ ಸದಸ್ಯರಾದ ಸಿಂಧ್ಯಾ ಸಾಹೇಬರು ಹೇಳಿರುವಂತೆ ಅವರ ಪಕ್ಷವೇ ಮಹದೇವಪುರ ನಗರಸಭೆಯಲ್ಲಿ ಅಧಿಕಾರದಲ್ಲಿತ್ತು. ಇದು ಮಹದೇವಪುರ ನಗರಸಭೆಯ ವ್ಯಾಪ್ತಿಗೊಳಪಡುವಂತಾದ್ದು. ಅವೊತ್ತು ಇವರು ನಿರ್ಧಾರ ಮಾಡಿ 3,50,397.55 ರೂಪಾಯಿಗಳನ್ನು ಕಟ್ಟಿಸಿಕೊಂಡು ಖಾತೆಯನ್ನು ಕೊಟ್ಟಿದ್ದಾರೆ. ಈ ಕುರಿತ ಡಾಕ್ಯುಮೆಂಟ್ಸ್ ಅನ್ನು ತಮ್ಮ ಅವಗಾಹನೆಗೆ ಕಳುಹಿಸಿಕೊಡುತ್ತೇನೆ. ಚೈತನ್ಯ ಪ್ರಾಪರ್ಟಿಸ್ ಪ್ರೈವೇಟ್ ಲಿಮಿಟೆಡ್ ಎಂಬ ಖಾಸಗಿ ಸಂಸ್ಥೆಯಿಂದ ಐವತ್ತು ಕೋಟಿ ರೂಪಾಯಿಗಳು ಬರಬೇಕಾಗಿದ್ದು, ಕೇವಲ ಐದು ರೂಪಾಯಿ ತೆಗೆದುಕೊಂಡು ಕ್ಲೋಸ್ ಮಾಡಿದ್ದಾರೆ ಎಂದಿದ್ದಾರೆ. ನಾವು ಅಧಿಕಾರಕ್ಕೆ ಬಂದ ನಂತರ ಈ ವಿಚಾರದಲ್ಲಿ ಮಾತನಾಡುತ್ತಾ, ಐವತ್ತು ಕೋಟಿ ರೂಪಾಯಿಗಳು ಬರಬೇಕಾಗಿತ್ತೆಂದು ಮಾನ್ಯ ಸುರೇಶ್‌ಕುಮಾರ್‌ರವರು ಹೇಳಿದ್ದಾರೆ. ಬೇಕಿದ್ದರೆ ರೆಕಾರ್ಡ್ಸ್ ತೆಗೆಸಿ. ಐದು ರೂಪಾಯಿಗಳೆಂದು ಅಲ್ಲ, ನಾನು ಅದನ್ನು ಲಘುವಾಗಿ ಹೇಳುತ್ತಿದ್ದೇನಷ್ಟೆ. ದಿನಾಂಕ 16.12.2000ರಲ್ಲಿ ಒಂದು ಸಭೆ ನಡೆಯಿತು. ಅಷ್ಟೊತ್ತಿಗೆ ಕಾಂಗ್ರೆಸ್ ಪಕ್ಷದವರಾದ ನಾವು ಅಧಿಕಾರದಲ್ಲಿದ್ದೆವು. ಚೈತನ್ಯ ಅಪಾರ್ಟ್‌ಮೆಂಟ್‌ಗೆ ಸಂಬಂಧಿಸಿದಂತೆ ಠರಾವು ಒಂದನ್ನು ಅಂಗೀಕರಿಸಲಾಯಿತು. ಏನೆಂದರೆ, "ಶಾಂತಿ ನಿಕೇತನ ಚೈತನ್ಯ ಪ್ರಾಪರ್ಟಿಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಗೆ ನಿಗದಿಪಡಿಸಿರುವ ತೆರಿಗೆ ಕಡಿಮೆಯಾಗಿರುವುದರಿಂದ ಆರ್ಥಿಕ ನಷ್ಟವುಂಟಾಗಿದ್ದು ಹಾಗೂ ಈ ಹಿಂದಿನ ಸಭೆಯಲ್ಲಿ ಚರ್ಚಿಸಿರುವುದರಿಂದ ಅಭಿವೃದ್ಧಿ ಶುಲ್ಕ ಪಡೆಯದೆ ಖಾತೆ ಮಾಡಿರುವುದರಿಂದ ಸದರಿ ಖಾತೆಯನ್ನು ರದ್ದುಗೊಳಿಸಬೇಕೆಂದು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು". ಇದು ನಾವು ಅಧಿಕಾರಕ್ಕೆ ಬಂದ ನಂತರ ಮಾಡಿರುವುದು ಪುಸ್ತಕದಲ್ಲಿ ದಾಖಲಾಗಿದೆ. ಆ ಪುಸ್ತಕದಲ್ಲಿ ತಾವು ಎಲ್ಲವನ್ನೂ ವೆರಿಫೈ ಮಾಡಿಕೊಳ್ಳಬಹುದಾಗಿದೆ. To what extent we are concerned for tax collection and getting income to the state

exchequer, ಎಂದು ಒಂದು ಸ್ಯಾಂಪಲ್‌ನ್ನು ಹೇಳಿದ್ದೇನೆ. ಎರಡನೆಯದು, ಎಲೆಕ್ಟ್ರಿಕಲ್ ವಿಚಾರದಲ್ಲಿ ಎಲ್ಲಾ ಮಾನ್ಯ ಹಿರಿಯರು, ಕಿರಿಯರು ಬಹಳ ನೀಟಾಗಿ ಟೈಮ್‌ಟೇಬಲ್‌ಗಳನ್ನು ಓದಿದ್ದಾರೆ. ನಾನು ಅವರಿಗೆ ಧನ್ಯವಾದಗಳನ್ನು ಹೇಳುತ್ತೇನೆ. 15:09:1999ರಲ್ಲಿ ಅವರು ಅಧಿಕಾರದಲ್ಲಿದ್ದಾಗ, ಆಗ ಅಧಿಕಾರದಲ್ಲಿ ಇದ್ದಂಥ ಕೃಷ್ಣರಾಜಪುರಂ ಅಧ್ಯಕ್ಷರು ಬರೆಯುತ್ತಾರೆ, "ನಗರ ಸಭೆಗಳ ವಿದ್ಯುತ್ ದೀಪಗಳ ವಾರ್ಷಿಕ ನಿರ್ವಹಣೆಯು ಬಗ್ಗೆ ನಮ್ಮ ನಗರ ಸಭೆಯ ಸರಹದ್ದಿನಲ್ಲಿ ಬರುವ ಎಲ್ಲಾ ವಿದ್ಯುತ್ ದೀಪಗಳನ್ನು ಅವಳಡಿಸಲು ಹಾಗೂ ವಾರ್ಷಿಕ ನಿರ್ವಹಣೆಗಾಗಿ ಶಿಲ್ಪಾ ಎಲೆಕ್ಟ್ರಿಕಲ್‌ರವರಿಗೆ ಕೊಡಬೇಕೆಂದು ಕೋರುತ್ತೇನೆ. ಇದು ನಾನು ಮಾಡಿದ್ದಲ್ಲ. ಮಾನ್ಯ ಸಿಂಧ್ಯಾರವರು ಮಾತನಾಡುವಾಗ ನೂರು ಕೋಟಿ ರೂ. ಬಿಡುಗಡೆ ಮಾಡಿದ್ದೇವೆ, ಮಾಡಿ ಎಂದು ಸರ್ಕಾರಕ್ಕೆ ಬರೆದಿದ್ದೇವೆಂದು ಹೇಳಿದ್ದಾರೆ. ನನ್ನ ಜ್ಞಾಪಕದ ಪ್ರಕಾರ 18:03:2002 ರಲ್ಲಿ ಒಂದು ಕಾಗದ ಬರೆದಿದ್ದೇನೆ, ಅದರಲ್ಲಿ ಒಟ್ಟಾರೆ ನಾಲ್ಕು ಕೋಟಿ ರೂಗಳನ್ನು ಕೊಡಿ ಇವೆಲ್ಲಾ ಕಾಮಗಾರಿಗಳು ಬಾಕಿ ಇದ್ದಾವೆ ಎಂದು ಹೇಳಿ ನಾನು ಬರೆದಿರುವ ಪತ್ರದ ನಕಲು ಇಲ್ಲಿದೆ. ಮತ್ತೆ ಈ ಲೈಟುಗಳ ಕತೆ. ಕೃಷ್ಣಪ್ಪ, ಕೃಷ್ಣರಾಜಪುರ, ಕೃಷ್ಣರಾಜಪುರ ಕೃಷ್ಣಪ್ಪ, ಅವರು ಆಗ ಇದ್ದಂಥ ಅಧ್ಯಕ್ಷರು 16:05:1999ರಲ್ಲಿ ಬರೆಯುತ್ತಾರೆ 'ಕೃಷ್ಣರಾಜಪುರ ನಗರಸಭೆಯ ವ್ಯಾಪ್ತಿಯಲ್ಲಿ ಹೊಸದಾಗಿ ಲೇಔಟ್‌ಗಳಾಗಿದ್ದು ಈ ಬಡಾವಣೆಗಳಿಗೆ ವಿದ್ಯುತ್ ದೀಪಗಳ ಸೌಕರ್ಯವಿಲ್ಲದೆ ತೊಂದರೆಯಾಗಿದೆ, ಹಾಗೂ ಕೆಲವು ಏರಿಯಾಗಳಲ್ಲಿ ಹೊಸದಾಗಿ ಫಿಟ್ಟಿಂಗ್‌ಗಳನ್ನು ಹಾಕಬೇಕಾಗಿರುವುದರಿಂದ ಕಛೇರಿಗೆ ವಿದ್ಯುತ್ ಸಲಕರಣೆಗಳು, ಟ್ಯೂಬ್‌ಲೈಟ್‌ಗಳು, ಫಿಟ್ಟಿಂಗ್ಸ್, ಮರ್ಕ್ಯುರಿ ಲೈಟ್‌ಗಳು ಇನ್ನಿತರ ಎಲ್ಲಾ ಪದಾರ್ಥಗಳನ್ನು ಎಸ್.ಪಿ.ಡಿ. ದರದಲ್ಲಿ ಕೋಟೇಷನ್ ಕರೆದು ತರಿಸಲು ಸೂಚಿಸಿದೆ." ಮುಂದೆ ಹೋಗಿ ನಮ್ಮ ಮಿತ್ರರು ಹೇಳಿದ್ದಾರೆ, ಯಾರೋ ಗೋಕುಲ್ ಎಂಟರ್‌ಪ್ರೈಸ್‌ರವರು ನನಗೆ ಸಂಬಂಧ ಅವರಿಗೆ 20 ಕೋಟಿ ರೂಪಾಯಿಗಳ ಸಲಕರಣೆಗಳಿಗೆ ಕೊಟ್ಟಿದ್ದಾರೆಂದು ಅವರು ಯಾರಾದರೂ ಇದನ್ನು ಪ್ರೂವ್ ಮಾಡಿದರೆ ನಾನು ಬೆಳಿಗ್ಗೆಯೇ ನನ್ನ ರಾಜೀನಾಮೆಯನ್ನು ನಮ್ಮ ನಾಯಕರಿಗೆ ಸಲ್ಲಿಸುತ್ತೇನೆ ಅಥವಾ ಈ ಮನೆಯನ್ನು ಬಿಟ್ಟು ಹೊರಗಡೆ ಹೋಗುವುದಕ್ಕೆ ಮೊದಲು ಏನು ನಾನು ಹೇಳುವ ಅಪರ್ಚ್ಯುನಿಟಿಯನ್ನು ಅವರು ತೆಗೆದುಕೊಂಡು 20 ಕೋಟಿ ರೂಪಾಯಿಗಳನ್ನು ಸರಬರಾಜಿಗೆ ಕೊಟ್ಟಿದ್ದಾರೆಂದು ಪ್ರೂವ್ ಮಾಡಿದರೆ I tender my resignation and leave this august House. An honable member, letter, you can talk that is convenient to you. you cannot confirm it. ಶ್ರೀ ಕೃಷ್ಣಪ್ಪ ಬೆಟರ್ ಅಲ್ಲ ಅನಂತರ, ನಾಗರಾಜ್ ಎನ್ನುವವರಿಗೆ ಒಂದು ಕೋಟಿ ರೂಪಾಯಿಯನ್ನು ಕಸ ಎತ್ತಲು, ಕಸ ವಿಲೇವಾರಿ ಮಾಡಲು ಕೊಟ್ಟಿದ್ದಾರೆಂದು ಹೇಳಿದ್ದಾರೆ. ಅದನ್ನೂ ಪ್ರೂವ್ ಮಾಡಿದರೆ ಇನ್ನೊಂದು ಪನಿಷ್‌ಮೆಂಟ್ ತೆಗೆದುಕೊಳ್ಳುತ್ತೇನೆ. ಅವರೇನು ಜೈಲಿಗೆ ಹೋಗಬೇಕಾಗುತ್ತದೆಂದು ಹೇಳಿದ್ದಾರಲ್ಲಾ ಅದಕ್ಕೆ ಐ.ಪಿ.ಸಿ.ಯಲ್ಲಿ ಆಸ್ಪದವಿದ್ದರೆ ಹೋಗಿಬಿಟ್ಟು ಬರುತ್ತೇನೆ. ಅನಂತರ ಕಾವೇರಿಯ ಬಗ್ಗೆ ಹೇಳಿದ್ದಾರೆ, ಕಾವೇರಿ ಯಾರೋ ಕಷ್ಣ ಯಾರೋ ನನಗೆ ಗೊತ್ತಿಲ್ಲ. ಸಿ.ಎ.ಜಿ. ರವರು ವರದಿ ಮಾಡುವಾಗ ಈ ಎಲ್ಲಾ ವಿಚಾರಗಳನ್ನು ಬೆಳಕಿಗೆ ತಂದಿದ್ದಾರೆಂದು ಹೇಳಿದ್ದಾರೆ; ಆದರೆ ನಾನು ಸಂತೋಷದಿಂದ ಒಂದು ವಿಚಾರವನ್ನು ಈ ಮನೆಯಲ್ಲಿ ಹೇಳಬಯಸುತ್ತೇನೆ. ಸಿ.ಎ.ಜಿ.ರವರು ಅಂದರೆ ಇಷ್ಟೊಂದು ವಿಚಾರವನ್ನು ಶೀರ್ಘವಾಗಿ ಮಾಡಿದಂಥ ಮಹನೀಯ ಅಧಿಕಾರಿಗಳು ಮಂತ್ರಿಗಳ ಬಗ್ಗೆ ಯಾವುದೇ ವಿಚಾರವನ್ನು ಎತ್ತಿಲ್ಲ.

This is for your kind information. ಮುಂದೆ ಹೋಗಿ ಅಟೆನ್‌ಡೆನ್ಸ್ ಹಂಡ್ರೆಡ್ ಪರ್‌ಸೆಂಟ್ ಎಂದು ಹೇಳುತ್ತಾರೆ, ಇರುವಂಥ ಅಪರ್ಚ್ಯುನಿಟಿಯನ್ನು ಉಪಯೋಗಿಸಿಕೊಂಡಿದ್ದೇವೆ, ಸರ್ಕಾರಕ್ಕೂ ಮುನಿಸಿಪಾಲಿಟಿಗಳಿಗೆ ಏನಾದರೂ ಆಗುಹೋಗುಗಳಿದ್ದರೆ ಸಹಾಯ ಮಾಡಲು ಹೋಗುತ್ತೇವೆ. ಇದು ಈಗ ಮಾಡಿದಂಥ ಬಂದಂಥ ನಡತೆಯಲ್ಲ. 1985ರಲ್ಲಿ ನಾನು ಎಲೆಕ್ಟ್ ಆಗಿದ್ದೇನೆ, ಅವತ್ತಿನಿಂದ ನೋಟಿಫೈಯ್ಡ್ ಮುನಿಸಿಪಾಲಿಟಿಗಳು ಬಂದಿದ್ದಾವೆ. ಒಂದು ಇಲ್ಲ ಎರಡು ಪರ್‌ಸೆಂಟ್ ನಾನು ತಪ್ಪಿಸಿಕೊಂಡಿರಬಹುದು. ಬೇಕಾದರೆ ರೆಕಾರ್ಡ್ಸ್‌ನ್ನು ತೆಗೆಸಿ ಈ ಮಹನೀಯರೆಲ್ಲಾ ನೋಡಿಕೊಂಡು ಬರಲಿ. ಇವರುಗಳು ಮುನಿಸಿಪಲ್ ಮೀಟಿಂಗ್ಸ್‌ಗೆ ಹೋಗುತ್ತಾರೋ ಇಲ್ಲವೋ ನನಗೆ ಗೊತ್ತಿಲ್ಲ. ನಾನಂತೂ ಹಂಡ್ರೆಡ್ ಪರ್‌ಸೆಂಟ್ ಹೋಗಿದ್ದೇನೆ. That should not cause a damage saying that ಏನೋ ಅಲ್ಲಿ ಭೂತವಿದೆ ಅದನ್ನು ಕರೆದುಕೊಂಡು ಬರಲು, ಎತ್ತಿಕೊಂಡು ಬರಲು ಏನೇನೋ ಪದಗಳನ್ನು ಉಪಯೋಗಿಸಿ ಹೋಗಿದ್ದಾರೆ ಎಂದು ಅರ್ಥವಲ್ಲ. I think that is part of my responsibility. ಈಗ, ನಮ್ಮ ಮಿತ್ರರು ಹೇಳಿದರು, ಲೋಕಾಯುಕ್ತದ ಸಾಹೇಬರು ಅಲ್ಲಿ ಹೋದಾಗ, ಟಿ.ಸಿ. ಪಾಳ್ಯ, ರಾಮಮೂರ್ತಿನಗರಗಳ ಲೈಟುಗಳನ್ನು ಎಣಿಸಲು ಹೋದರು ಎಂದು. ಅವರು ಲೈಟುಗಳನ್ನು ಎಣಿಸಲು ಹೋಗಲಿಲ್ಲ. ಅಲ್ಲಿ ಒಂದು ಕೋಟಿ ಅರವತ್ತೈದು ಲಕ್ಷನ್ನು ಒಂದು ಮೇಜರ್ ಡ್ರೈನೇಜ್ ನಡೆದಿದೆ. ನ್ಯಾಷನಲ್ ಹೈವೇ ಟ್ರಾಫಿಕ್ ಡೈವರ್ಟ್ ನಡೆದಿದೆಯೆಂದು ಕೇಬಲ್ ಸ್ಟೇಜ್ ಬ್ರಿಡ್ಜ್ ಕಂಪ್ಲೀಟ್ ಆಗಿಲ್ಲವೆಂದು, ಮಾನ್ಯ ಸಭಾಧ್ಯಕ್ಷರು ತಾವೂ ಕೂಡ ಆ ರಸ್ತೆಯಲ್ಲಿ ಹೋಗಿದ್ದೀರಿ, ಆ ರಸ್ತೆಯ ಕಾಮಗಾರಿಯನ್ನು ಹೊಸದಾಗಿ ಮಾಡಿಸಿದ್ದೇವೆ, ಡ್ರೈನೇಜ್ ಮಾಡಿಸಿದ್ದೇವೆ, ಆದರೆ ರಾತ್ರಿಯ ಹೊತ್ತು ಮೂರು ನಾಲ್ಕು ಸಾರಿ ಡಕಾಯಿತಿಗಳಾಯಿತು ಎಂದು ಹೇಳಿ, ಥಳ ಥಳ, ಥಳ ಥಳ ಎನ್ನುವಂಥ ದೀಪಗಳನ್ನು ನೂರಕ್ಕೆ ನೂರು ಪರ್ಸೆಂಟ್ ನಾವು ಹಾಕಿಸಿದ್ದೇವೆ. ತಾವು ಇನ್ನೊಂದು ಸಾರಿ ಯಾವಾಗಲಾದರೂ ಕೋಲಾರಕ್ಕೆ ಹೋದಾಗ ಒಂದು ಸಲ ನೋಡಿ. ಅಲ್ಲಿ ದೀಪಗಳು ಇಲ್ಲವೆನ್ನುವಂಥ ಪ್ರಶ್ನೆಯೇ ಇಲ್ಲ ಅಥವಾ ಈಗಲೇ ನೀವು ಯಾರಾದರೂ ತಮ್ಮ ಕಛೇರಿಯಿಂದ ಒಬ್ಬರು ಸಿ.ಓ.ಡಿ. ಯನ್ನು ಟಿ.ಸಿ. ಪಾಳ್ಯದ ರಸ್ತೆಗೆ, ರಾಮಮೂರ್ತಿ ನಗರದ ರಸ್ತೆಗೆ ದಯಮಾಡಿ ಕಳುಹಿಸಿ, ಅಲ್ಲಿ ಲೈಟ್ ಇಲ್ಲವೆಂದು ಹೆದರಿಕೊಂಡು ಓಡಿ ಹೋಗಿಬಿಟ್ಟರು, ಡ್ರೈವರ್‌ಗೆ ಹೊಡೆದರು ಎಂದು ಹೇಳುತ್ತಾರೆ, ಇದು ನಂಬಲಾರದಂಥ ವಿಚಾರವಾಗಿದೆ. ಮಾನ್ಯ ಸುರೇಶ್‌ಕುಮಾರ್‌ರವರು ಹೇಳಿದರು, ಮೊಸಳೆ ಕಣ್ಣೀರು ಸುರಿಸಿದಂತೆ, ಏನೆಂದರೆ, ನಾವೆಲ್ಲಾ ಸೋಷಿಯಲ್ ಜಸ್ಟೀಸ್, ನಮಗೂ ಬ್ಯಾಕ್‌ವರ್ಡ್ ಕ್ಲಾಸ್ ಎನ್ನುವುದರ ಬಗ್ಗೆ ವಿಚಾರವಿದೆ. ಬ್ಯಾಕ್‌ವರ್ಡ್ ಕ್ಲಾಸ್ ಎಂದು ಶೆಲ್ಟರ್‌ನ್ನು ತೆಗೆದುಕೊಳ್ಳುವುದೇನು ತರವಾದುದಲ್ಲವೆಂದು ಅವರು ಭಾಷೆಯಲ್ಲಿ ಹೇಳಿದರು. ಅವರು ಹಾಗಿದ್ದರೆ ಈ ಎಂಟು ಸಿ.ಎಂ.ಸಿ.ಗಳದ್ದು ಏಕೆ ಓದಲಿಲ್ಲ? ಬೇಜಾರಾಯಿತೆ? ನಾನು ಈ ಮನೆಯಲ್ಲಿರುವುದು ಬಹಳ ಬೇಜಾರಾಯಿತೆ? ಬಹಳ ದುಃಖವೇ? ಎಂಟು ಟೇಬಲ್ಲುಗಳದ್ದು ಎಂಟು ಮುನಿಸಿಪಾಲಿಟಿಗಳದ್ದು ಓದಲಿ. ಓದಿ, ಅನಂತರ ಸೋಷಿಯಲ್ ಜಸ್ಟೀಸ್ ಕೊಡಲು ಇವರು ಇದ್ದಾರೋ ಅಥವಾ ಶೋಷಣೆ ಮಾಡಿಸಲು ಬಿ.ಜೆ.ಪಿ. ಪಕ್ಷ ಇವತ್ತು ನನ್ನ ಮೇಲೆ ಈ ಆರೋಪಗಳನ್ನು ಮಾಡುತ್ತಿದ್ದಾರೋ ಕೇಳೋಣ. ಮಾನ್ಯ ಬಿ.ಎನ್. ಬಚ್ಚೇಗೌಡರು ಮಾತನಾಡುತ್ತಾ ಕೆಲವು

ವಿಚಾರಗಳನ್ನು ಹೇಳಿದರು. ವರಿಗೆ ಒಂದಕ್ಕೆ ಥ್ಯಾಂಕ್ಸ್ ಹೇಳುತ್ತೇನೆ. ಏನೆಂದರೆ, ಬೇರೆ ಮಹನೀಯರು ಮಾಡಿದಂತೆ ಅವರು ನೇರವಾಗಿ ನನ್ನ ಮೇಲೆ ಆರೋಪ ಮಾಡಲಿಲ್ಲ. ಅಲ್ಲಿ ದುರುಪಯೋಗವಾಗಿದೆ, ಅದರ ಬಗ್ಗೆ ಕ್ರಮ ತೆಗೆದುಕೊಳ್ಳಿ ಎಂದು ಹೇಳಿದ್ದಾರೆ. ನಾಳೆ ಲೋಕಾಯುಕ್ತ ಅಥವಾ ಯಾವುದೇ ಒಂದು ಜ್ಯುಡಿಷಿನರಿ ಏನು ನಮ್ಮ ಸರ್ಕಾರ ನಾಳೆ ಅಂತಿಮವಾಗಿ ತೀರ್ಮಾನ ಮಾಡುತ್ತದೆ ಅವರು ಎನ್‌ಕ್ವೇರಿ ಮಾಡಿದಾಗ ನಾನು ಅದರಲ್ಲಿ ಭಾಗಿಯಾಗಿದ್ದೇನೆಂದು ಗೊತ್ತಾದಾಗ ನನ್ನ ಮೇಲೆಯೂ ಬೇರೆಯವರಿಗೆ ಏನು ಐ.ಪಿ.ಸಿ.ಯಲ್ಲಿ ಕ್ರಮ ತೆಗೆದುಕೊಳ್ಳುತ್ತಾರೋ ಹಾಗೆಯೇ ತೆಗೆದುಕೊಳ್ಳಲಿ, ಅದನ್ನು ನಾನು ಸ್ವಾಗತ ಮಾಡುತ್ತೇನೆ. ಅದನ್ನು ಸ್ವೀಕಾರ ಮಾಡಲು ನಾನು ತಯಾರಾಗಿದ್ದೇನೆ. ಇದೆಲ್ಲವನ್ನೂ ಮಾನ್ಯ ಸಿಂದ್ಯಾರವರು, ಮಾನ್ಯ ಬಚ್ಚೇಗೌಡರು ಹೇಳಿಕೊಂಡು ಬಂದರು, ಆದರೆ ಆಫೀಸರ್ಸ್ ಯಾವಾಗ ಬಂದರು? ಆ ಆಫೀಸರ್ಸ್ ಮಾನ್ಯ ಎಸ್.ಎಂ. ಕೃಷ್ಣರವರ ಸರ್ಕಾರ ಅಧಿಕಾರಕ್ಕೆ ಬಂದಾಗ ಬಂದವರಲ್ಲ, ತಾವು ಅಧಿಕಾರದಲ್ಲಿದ್ದು ಮಾನ್ಯ ಬಚ್ಚೇಗೌಡರು ಈ ಕಡೆ ಕುಳಿತಿದ್ದಾಗ, ಮಂತ್ರಿಗಳಾಗಿದ್ದಾಗ ಆ ಕಾಲದಲ್ಲಿ ಆಡಳಿತದಲ್ಲಿ ಪೋಸ್ಟ್ ಆಗಿದ್ದಂಥ ಆಫೀಸರ್ಸ್ ಅವರು ಅಲ್ಲೇ ಇದ್ದಾರೆ, ಅವರೆ ಇದ್ದಾರೆ. You can verify form the documents. ಇನ್ನು ಮುಂದೆ ಬೇರೆ ಬೇರೆ ವಿಚಾರಗಳನ್ನೆಲ್ಲಾ ಹೇಳಿದ್ದಾರೆ. ವಾಟರ್ ಬಿಲ್ಸ್ ವಿಚಾರದಲ್ಲಿ, ಸಿವಿಲ್ ವರ್ಕ್ಸ್ ವಿಚಾರದಲ್ಲಿ, ಇದರ ಬಗ್ಗೆ ನಾನು ಈಗಾಗಲೇ ಪತ್ರಿಕೆಗೆ ನಿನ್ನೆ ಮೊನ್ನೆ ಹೇಳಿದ್ದೇನೆ. ತಾಂತ್ರಿಕವಾಗಿ ಆಡಳಿತದಲ್ಲಿ ಏನಾದರೂ ದೋಷಗಳಿದ್ದರೆ I am not a technical man. ಟ್ರಾನ್ಸ್‌ಫೆರೆನ್ಸಿ ಆಕ್ಟ್‌ನ್ನು ಹಾನರ್ ಮಾಡಿದ್ದಾರೋ ಇಲ್ಲವೋ ಎಂದು ಹೇಳಿ ವೆರಿಫಿಕೇಷನ್ ಆಗುತ್ತದೆ, ಲೋಕಾಯುಕ್ತರು ಈಗಾಗಲೇ ಕೆಲಸ ಪ್ರಾರಂಭ ಮಾಡಿದ್ದಾರೆ, ನಾವೂ ಕೂಡ ಅದನ್ನು ಸ್ವಾಗತಿಸುತ್ತೇವೆ; ಆದರೆ ಇವತ್ತು ಬಂದಿರುವಂಥ ವಿಚಾರವೇನೆಂದರೆ ನಮ್ಮ ಸದಸ್ಯರಾದ ಮಾನ್ಯ ರಾಮದಾಸ್‌ರವರೋ ಯಾರೋ ಮಾತನಾಡುತ್ತಾ ಹೇಳಿದರು, ಏನು ಆಶ್ಚರ್ಯ ಇದು, ಯಾರು ಕಂಟ್ರಾಕ್ಟರ್ ವಿಚಾರದಲ್ಲಿ ರೆಸಲ್ಯೂಷನ್ಸ್‌ಗಳನ್ನು ಸಿ.ಎಂ.ಸಿಗಳಲ್ಲಿ ಮಾಡಿಸಿದ್ದಾರೆ ಅವರಿಗೇ ಗುತ್ತಿಗೆ ಕೊಡಬೇಕೆಂದು ಹೇಳಿ ನನ್ನ ನಾಲೆಡ್ಜ್ ಪ್ರಕಾರ ಕೃಷ್ಣರಾಜಪುರ, ಮಹದೇವಪುರದಲ್ಲಿ ಆ ರೀತಿ ರೆಸಲ್ಯೂಷನ್ ಆಗಿಲ್ಲ. ತಾವು ಕೇಳದೇ ಇರುವಂಥ ನಗರ ಸಭೆಗಳಿದ್ದಾವಲ್ಲಾ ಎರಡು ಟರ್ಮ್‌ನಿಂದ ಇರುವಂಥದ್ದು, ಮಾನ್ಯ ಅಶೋಕ್‌ರವರು ಹೋದ ಟರ್ಮ್ ಮತ್ತು ಈ ಟರ್ಮ ಎರಡಲ್ಲೂ ಇದ್ದಾರೆ. ಆ ಮುನಿಸಿಪಾಲಿಟಿಗಳಲ್ಲೇನಾದರೂ ಆ ರೀತಿ ಠರಾವುಗಳು ಆಗಿದೆಯೋ ಏನೋ ನನಗೆ ಗೊತ್ತಿಲ್ಲ ಆದರೆ ಈ ಎರಡು ಮುನಿಸಿಪಾಲಿಟಿಗಳಲ್ಲಿ ಅದು ಆಗಿಲ್ಲ. ಇಷ್ಟು ವಿಚಾರಗಳನ್ನು ನಾನು ಹೇಳಲು ಬಯಸುತ್ತೇನೆ. 1996-97 ರಿಂದ ಏನು ಹಣವನ್ನು ಡ್ರಾ ಮಾಡಿದ್ದಾರೆ ಆ ವಿಚಾರದಲ್ಲಿ ನಾವು ನೇರವಾಗಿ ಭಾಗಿಗಳು ಎಂದು ಹೇಳುವಂಥದ್ದು ಸತ್ಯಕ್ಕೆ ದೂರವಾದ ವಿಚಾರ. ಇವರು ನಗರ ಜಿಲ್ಲೆ ಉಸ್ತುವಾರಿ ಮಂತ್ರಿಗಳು, ಇವರು ರಾಜಿನಾಮೆ ಕೊಡಬೇಕು ಎಂದು ಎಲ್ಲರೂ ಹೇಳಿದ್ದಾರೆ. ಹಾಗಾದರೆ, ನಗರಸಭೆಗಳಲ್ಲೇನು ನಾನು ಕಮೀಷನರ್ ಆಗಿ ಕೆಲಸ ಮಾಡುತ್ತಿದ್ದೇನೇ? ಚೆಕ್ಕುಗಳನ್ನು ಡ್ರಾ ಮಾಡುತ್ತಿದ್ದೇನೇ ಅಥವಾ ನಗರ ಸಭೆಗಳಿಗೆ ಇನ್‌ಚಾರ್ಜ್ ಎಂದು ಇವರಿಗೆ ಯಾರು ಹೇಳಿದ್ದು? ನನಗೆ ನನ್ನ ಮುಖಂಡರು, ನಾಯಕರು ಮಾನ್ಯ ಎಸ್.ಎಂ. ಕೃಷ್ಣರವರು ಕೊಟ್ಟಿರುವಂಥದ್ದು, ರೆವಿನ್ಯೂ ಜೆಡ್.ಪಿ. ಏರಿಯಾಸ್, ಎಲ್ಲಾದರೂ ಇವರು ಪ್ರೂವ್ ಮಾಡಲಿ, ಯಾವತ್ತಾದರೂ ಒಂದು ಸಿ.ಎಂ.ಸಿ. ಗೆ ಹೋಗಿ,

ಒಬ್ಬ ಅಧಿಕಾರಿಯ ಹತ್ತಿರ ಮಾತನಾಡಿದ್ದಾಗಲಿ, ಆ ಆಫೀಸ್‌ನ ಒಳಗೆ ಹೋಗಿದ್ದಾಗಲಿ, ಯಾರನ್ನಾದರೂ ರಿವ್ಯೂ ಮಾಡಲು ಕರೆದಿದ್ದಾಗಲಿ, ಈ ರೀತಿಯ ಚಟುವಟಿಕೆಗಳನ್ನು ಎಂದಾದರೂ ಎಲ್ಲಾದರೂ ಮಾಡಿದ್ದಾರೆ ನಮ್ಮ ಮಹನೀಯರು ಹೇಳಿದ್ದನ್ನೆಲ್ಲಾ ನಾನು ಒಪ್ಪಿಕೊಳ್ಳುತ್ತೇನೆ. ಯಾರೋ ಎಲ್ಲಾ ತಪ್ಪು ಮಾಡಿದರೆ ಎಲ್ಲಕ್ಕೂ ನೀನೇ ಹೊಣೆ ಎನ್ನುವ ವಾದವನ್ನೇನು ಇಟ್ಟಿದ್ದಾರೆ ಇದು ಆಡಳಿತದಲ್ಲಿ ರೂಢಿಯಲ್ಲಿ ವಾಡಿಕೆಯಲ್ಲಿ ಕನ್‌ವೆನ್‌ಷನಲಿ ಟ್ರೆಡೀಷನಲಿ this is not the right approach what they have taken. This, I wanted to tell them. ಈಗ ನಾನು ಇಲ್ಲಿ ಇನ್‌ಛಾರ್ಜ್ ಮಾಡಿದ್ದಾರೆ ಎಂದು ಹೇಳಿ ಅಲ್ಲೆಲ್ಲಾ ಹೋಗಿ ಕೈ ಹಾಕಲೇನು? ಹೆಚ್.ಯುಡಿ.ಮಿನಿಸ್ಟರ್ ಇದ್ದಾರೆ, ಮುನಿಸಿಪಲ್ ಮಿನಿಸ್ಟರ್ ಇದ್ದಾರೆ, ಬೇರೆ ಬೇರೆ ಮಿನಿಸ್ಟರ್‌ಗಳು ಇದ್ದಾರೆ. ಹಾಗಾದರೆ ಯಾರ ಖಾತೆಯಲ್ಲಿ ಏನು ಹಗರಣಗಳಾದರೂ ಕೂಡ ಸಂಬಂಧಪಟ್ಟವನು ಯಾರು ಆ ಜಿಲ್ಲೆಯಲ್ಲಿ ಇರುತ್ತಾನೆ, ಆ ತಾಲ್ಲೂಕಿನಲ್ಲಿ ಇರುತ್ತಾನೆ ಅವನು ರಾಜೀನಾಮೆ ಕೊಡಬೇಕು ಎನ್ನುವ ವಾದವನ್ನು, ಇದು ಎಷ್ಟರಮಟ್ಟಿಗೆ ಒಂದು ನೀತಿಗೆ ಅಂಟಿಕೊಂಡಿದೆ ಎನ್ನುವ ವಿಚಾರವನ್ನು ತಾವೇ ತೀರ್ಮಾನ ಮಾಡಿ. ಮುಂದೆ ಈ ಎ.ಜಿ. ರಿಪೋರ್ಟ್‌ನಲ್ಲಿ ಕೆಲವು ವಿಚಾರಗಳನ್ನು ಹೇಳಿದ್ದಾರೆ. ಏನು ಹೇಳಿದ್ದಾರೆಂದರೆ, ಮೊದಲನೆ ಪೇಜ್‌ನಲ್ಲಿ ಅವರು ಇಂಟ್ರೊಡಕ್ಷನ್‌ನಲ್ಲಿ ಏನು ಹೇಳುತ್ತಾರೆ ಎಂದರೆ, Report of the Divisional Commissioner, Bangalore Division ಎಂದು ಹೇಳಿ ಅವರು 15-12 ರಲ್ಲಿ ಒಂದು ರಿಪೋರ್ಟ್ ಕೊಟ್ಟಿದ್ದಾರೆ. ಅಲ್ಲಿ ಒಂದು ಮೂರ್ನಾಲ್ಕು ವಿಚಾರಗಳನ್ನು ಹೇಳಿದ್ದಾರೆ. ಅದನ್ನು ಓದುತ್ತೇನೆ.

> "Inspector General of Registration, in his report dtd, nil has also pointed out that as against the actual entitlement of Rs. 23 crores in respect of all CMCs for the period of 5 years from 93 to 98, a total sum of Rs. 163.72 crores has been released. He has expressed that so far as the District Treasuries are concerned, he has not taken enough caution in conslidating the amount of ASD."

ಇದು ಡಿವಿಷನಲ್ ಕಮೀಷನರ್ ಸರ್ಕಾರಕ್ಕೆ ಕೊಡುವಂಥ ರಿಪೋರ್ಟ್‌ನಲ್ಲಿ ಮಾಡಿರುವಂಥ ರಿಮಾರ್ಕ್ಸ್ ಮಿನಿಸ್ಟರ್ ಹೋಗಿ ಟ್ರೆಝುರಿ ಬೀಗ ತೆಗೆದುಬಿಟ್ಟು ಎತ್ತುಕೊಂಡು ಬರುತ್ತಾರೆ ಎಂದು ಹೇಳುತ್ತಾರಲ್ಲಾ ಹಾಗಾದರೆ ನಾನು ಎಷ್ಟೊಂದು ಧೈರ್ಯಶಾಲಿ ಎಂದು ನೋಡಿ ಮಾನ್ಯ ಸಿಂಧ್ಯಾರವರೇ ಇನ್ನು ಮುಂದೆ ಏನು ಹೇಳಿದ್ದಾರೆಂದರೆ,

> "This arrears has been compounded by a plethora of government circulars issued from, time to time Moreover, the Accountant-General's report does not contain details of collection and release of surcharge to the Bangalore Mahanagarapalike and so many other CMCs."

So, there is not fixed parameter that A municipality B municipality, C municipality are eligible for X money and Y money But, in absence of such situation, money has been released to the CMCs. Now, the question before this august House is that whather that money has been properly utilised or not. That is the question.

ಅದರ ಬಗ್ಗೆ ಹೇಳಿದ್ದಾರೆ, ನೀರಿನ ವಿಚಾರದಲ್ಲಿ, ಲೈಟ್ ವಿಚಾರದಲ್ಲಿ ತನಿಖೆಯಾಗಲಿ. ತನಿಖೆಯನ್ನು ನಾನು ವೆಲ್‌ಕಮ್ ಮಾಡುತ್ತೇನೆ. ಮಾನ್ಯ ಸಭಾಧ್ಯಕ್ಷರೆ, ಮುಂದಕ್ಕೆ ಏನು ಹೇಳಿದ್ದಾರೆಂದರೆ,

> "It is noticed that the register pertaining to the collection, release of ASD was maintained for the quarter ending from September, 86 to December, 95 and thereafter the maintenance of the said register has been discontinued."

This has been discontinued when the Congress government did not continue in the office. It was discontinued. when your government came in 1995. this is what the Divisional Commissioner, a responsible officer submits a report to government.

ಮಾನ್ಯ ಸಭಾಧ್ಯಕ್ಷರೆ, ಇನ್ನು ಮುಂದಕ್ಕೆ ಏನು ಹೇಳಿದ್ದಾರೆಂದರೆ,

> "In view of the improper maintenance of the aforesaid register for the period upto December, 1995 and non-maintenance of the register thereafter, It is dificult to arrive at the total ASD collected and released periodically."

ಎಂದು ಅವರು ಮತ್ತೊಂದು ಕಡೆ ವ್ಯಾಖ್ಯಾನವನ್ನು ಮಾಡುತ್ತಾರೆ. ಮಾನ್ಯ ಸಭಾಧ್ಯಕ್ಷರೆ,

> "Thus, as per the register maintained in the District Registrar's office, an amount of Rs. 35.9 crores has been collected as ASD for the period from 1.10.93 to 31.2.95 and whereas as per the data compiled based on the statement furnished by the 11 sub-Registrars, the ASD, surcharge collected for the period from 1993-94 to 2000-01 works out to Rs. 166.6 crores."

ಎಲಿಜಿಬಿಲಿಟಿ ಬಗ್ಗೆ ಯಾರು ಮಹಾಸ್ವಾಮಿ ತೀರ್ಮಾನ ಮಾಡಿದವರು? ಹೀಗೆ ಇನ್ನು ಸೆಕ್ಸ್ಟ ಪ್ಯಾರಾದಲ್ಲಿ ಏನು ಹೇಳಿದ್ದಾರೆಂದರೆ;

> "Further verification revealed that files have been maintained by local bodies vice with regard to the release of ASD admissible to them inclusive of arrears. On random verification of the files pertaining to the CMC, Pattanagere and CMC, Dasarahalli,

> it is noticed that in addition to release of ASD admissible for the different quarters commencing from the year 1977. arrears were also released way back for the year 1993.

ಇವು ಯಾವುವೂ ಪಾಪ ಇವರಿಗೆ ಕಾಣುತ್ತಿಲ್ಲ. ಕೃಷ್ಣರಾಜಪುರ ಒಂದೇ ಇವರ ಟಾರ್ಗೆಟ್ ಆಗಿದೆ. ಈ ವರದಿಯಲ್ಲಿರುವುದನ್ನು ನಾನು ಹೇಳಿರುವುದಿಲ್ಲ. ಇನ್ನು ಮುಂದೆ ಅವರು ಏನು ಹೇಳುತ್ತಾರೆಂದರೆ:-

> "The compilation of the available datea so collected reveals that an amount of Rs. 365.5 crores has been released to the various local bodies for the period from 93-94 to 2000-01 including Mahanagara Palike of Bangalore-Rs. 126 crores."

ಮಾನ್ಯ ಸಭಾಧ್ಯಕ್ಷರೆ, ಇನ್ನು ವಿವರಗಳನ್ನು ಹೆಚ್ಚಾಗಿ ಕೊಟ್ಟಿದ್ದಾರೆ. ನಾನು ಈ ಮನೆಯ ಸಮಯವನ್ನು ಹೆಚ್ಚು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುವುದಿಲ್ಲ.

> "According to Annexure-1 of the said report, the excess ASD released to 7 CMCs and 1 TMC excluding BMP and TMC, Anekal, for the period of 94-95,-2000-01 is amounting to the tune of Rs. 239.8 crores, whereas as per the available data mobilised, there is an excess release of ASD amounting to only Rs. 1999 crores."

ಎಂದು ಹೇಳಿದ್ದಾರೆ. ಈಗ 240, 350 ಎಂದು ಏನೇನೋ ಹೇಳುತ್ತಿದ್ದಾರಲ್ಲಾ. ಆದೇನೇ ಇರಲಿ ಅಧ್ಯಕ್ಷರೆ, ಯಾವ ಒಂದು ನೈತಿಕ ಹೊಣೆಯನ್ನು ಹೊತ್ತುಕೊಂಡು ಇವರು ರಾಜೀನಾಮೆಯನ್ನು ಕೇಳುತ್ತಿದ್ದಾರೆ, ಆ ಪದದ ಸುತ್ತು ನಾನು ಬರುವುದಿಲ್ಲ. ನಾನು ಆ ಇಲಾಖೆ ಮಂತ್ರಿಯೂ ಅಲ್ಲ, ಆ ಸಿ.ಎಂ. ಗಳಿಗೆ ನಾನು ಇನ್‌ಛಾರ್ಜ್ ಅಲ್ಲ ಅಥವಾ ಇವರು ಹೇಳುವಂಥ ವಿಚಾರಗಳಿಗೆ ನನ್ನ ಇನ್‌ವಾಲ್ವ್‌ಮೆಂಟ್ ಇಲ್ಲ. ಇವರು ಹೇಳುವುದೆಲ್ಲಾ ಸತ್ಯಕ್ಕೆ ದೂರವಾದುದು. ಇವರು ರಾಜಕೀಯವಾಗಿ ನಮ್ಮನ್ನು ಮುಗಿಸಬೇಕು ಎಂದು ಹೇಳಿ ಇವೊತ್ತು ಪಾಪ ಎಲ್ಲಾ ರಾಜಕೀಯ ಪಕ್ಷಗಳು ನನ್ನ ಕ್ಷೇತ್ರದಲ್ಲಿ ಡಂಗುರ ಹೊಡೆಯುತ್ತಾರೆ, ಢಮ ಢಮ ಢಮ ಎಂದು. ನಾನು ಹೇಳುತ್ತಿದ್ದೇನೆ ಮಾನ್ಯ ಸಭಾಧ್ಯಕ್ಷರೆ, ಇವರ ಡಂಗುರಗಳಿಗೆಲ್ಲಾ ಹೆದರಬೇಕಾದಂಥ ನೈತಿಕ ಶಕ್ತಿಯ ನೆಲೆಯನ್ನು ನಾನೇನೂ ಕಳೆದುಕೊಂಡಿಲ್ಲ. ನನ್ನ ನಾಯಕರು ಹೇಳಲಿ ರಾಜೀನಾಮೆ ಕೊಡು ಎಂದು, ಎಂ.ಎಲ್.ಎ. ಸ್ಥಾನಕ್ಕೂ ಸೇರಿದಂತೆ ರಾಜೀನಾಮೆಯನ್ನು ಕೊಡುತ್ತೇನೆ, though it is a mandate given by the honourable voters of the Varthur constitutency.

ಫಸ್ಟ್ ಟೈಮ್ ಅಲ್ಲ ಫೋರ್ ಟೈಮ್ಸ್ ನಿಮ್ಮ ಪಕ್ಷಕ್ಕೆ ಡೆಪಾಸಿಟ್ ತೆಗೆದಿದ್ದೇನೆ. ನನಗೆ ನೈತಿಕ ಶಕ್ತಿ ಇದ್ದರೆ ನೆಕ್ಸ್ಟ್ ಎಲೆಕ್ಷನ್‌ಲ್ಲಿ ಬಿ.ಜೆ.ಪಿ.ಗೆ ಡೆಪಾಸಿಟ್ ತೆಗೆಯುವುದೂ ಗೊತ್ತಿದೆ. ನೀವು ಮೊಸಳೆ ಕಣ್ಣೀರು ಸುರಿಸಿ ಒಬ್ಬ ಹಿಂದುಳಿದವನನ್ನು ಮುಗಿಸಬೇಕು ಎಂದು ನಿಮ್ಮ ಹುನ್ನಾರ ಇದೆಯಲ್ಲಾ, ಆ ಹುನ್ನಾರಕ್ಕೆ I am not shivering in my pants and shoes, my dear Opposition

Leader. I welcome the Lokayukta enquiry. Whatever the mandatory decision they give and that punishment I am prepared to take. Thank you very much

ಶ್ರೀ ಪಿ.ಜಿ. ಆರ್. ಸಿಂಧ್ಯಾ:- ಪ್ಯಾಂಟು, ಶೂಸು ಎಂದು ಏನೇನೋ ಹೇಳುತ್ತಿದ್ದಾರೆ.

ಶ್ರೀ ಎಸ್.ಎಂ. ಕೃಷ್ಣ:- ಇಂಗ್ಲೀಷ್‌ನಲ್ಲಿ ಮಾತನಾಡುವಾಗ ಸ್ವಲ್ಪ ಹೆಚ್ಚು ಕಡಿಮೆ ಆಗುತ್ತದೆ. ಕನ್ನಡವನ್ನು ಇಂಗ್ಲೀಷ್‌ನಲ್ಲಿ ಟ್ರಾನ್ಸ್‌ಲೇಷನ್ ಮಾಡಿ ಹೇಳಿದರು.

ಶ್ರೀ ಪಿ.ಜಿ. ಆರ್. ಸಿಂಧ್ಯ:- ಪಾಪ, ನೀವು ಅವರನ್ನು ಡಿಫೆಂಡ್ ಮಾಡಿಕೊಳ್ಳಬೇಕು ಬಿಡಿ ನಾನು ಕೇಳಿಸಿಕೊಳ್ಳಲಿಲ್ಲ. ಪ್ಯಾಂಟು ಶೂಸು ಎಂದು ಹೇಳಿದರು. ಪ್ಯಾಂಟ್ ಅರ್ಥವಾಯಿತು, ಶೂಸ್ ಅರ್ಥವಾಗಲಿಲ್ಲ, ಅದಕ್ಕೆ ಏನು ಎಂದು ನಾನು ಹೇಳಿದೆ.

ಶ್ರೀ ಎ. ಕೃಷ್ಣಪ್ಪ:- ಅದೊಂದು ರೈಮಿಂಗ್ ಲಾಂಗ್ವೇಜ್. ಇಂಗ್ಲೀಷ್‌ನಲ್ಲಿ ಏನು ಎಂದರೆ I am not shivering in my pants and shoes, ಎಂದರೆ ಒಬ್ಬ ವ್ಯಕ್ತಿ ಹೆದರುವುದಿಲ್ಲ ಎಂದು.

ಶ್ರೀ ಪಿ.ಜಿ. ಆರ್. ಸಿಂಧ್ಯಾ:- ನೀವು ಹೆದರುವುದಿಲ್ಲವೆಂದೇ ಅವರೆಲ್ಲ ಆ ರೀತಿಯೆಲ್ಲಾ ಮಾಡುತ್ತಾ ಇರುವುದು.

ಶ್ರೀ ಎ. ಕೃಷ್ಣಪ್ಪ:- ನಾನು ಸಹ ಹೆದರುತ್ತಾ ಇಲ್ಲ ಎಂದು ಸ್ವಲ್ಪ ಗಟ್ಟಿಯಾಗಿ ಹೇಳುವುದಕ್ಕೇ ಆ ಭಾಷೆಯನ್ನು ನಾನು ಉಪಯೋಗಿಸಿದೆ.

ಅಧ್ಯಕ್ಷರು:- ಮಾನ್ಯ ಮುಖ್ಯಮಂತ್ರಿಗಳೇ ತಾವು ಮಾತನಾಡಿ.

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು):- ಮಾನ್ಯ ಅಧ್ಯಕ್ಷರೆ, ಈ ಚರ್ಚೆ ಉಪಯುಕ್ತ ಆಗಬೇಕಾದರೆ ನಮ್ಮೆಲ್ಲರ ಒಟ್ಟಾರೆ ಹೊಣೆಗಾರಿಕೆ ಸಾಮಾಜಿಕವಾಗಿಯೂ, ರಾಜಕೀಯವಾಗಿಯೂ ಇರುತ್ತದೆ. ಆ ಹೊಣೆಗಾರಿಕೆಯನ್ನು ಯಶಸ್ವಿಯಾಗಿ ನಿರ್ವಹಿಸುವುದಕ್ಕೆ ಈ ಚರ್ಚೆ ಸಹಾಯಕವಾಗಬೇಕು ಎನ್ನುವುದು ನನ್ನ ಆಸೆ. ಅವ್ಯವಹಾರಗಳು ನಡೆಯುತ್ತದೆ, ಆದರೆ ಆ ಅವ್ಯವಹಾರಗಳ ಮೇಲೆ ಹತೋಟಿ, ನಿಯಂತ್ರಣ ಹಾಕತಕ್ಕಂಥ ರೀತಿ ನೀತಿಗಳು ಯಾವುದು ಎಂಬುದು ಗೊತ್ತು. ವಿಕೇಂದ್ರೀಕರಣ ತತ್ವವನ್ನು ನಾವು ಒಪ್ಪಿರತಕ್ಕಂಥವರು. ಗ್ರಾಮ ಪಂಚಾಯತಿಗಳಿಗೆ ಹೆಚ್ಚಿನ ಅಧಿಕಾರವನ್ನು ಕೊಡಬೇಕು, ಮುನಿಸಿಪಾಲಿಟಿಗಳಿಗೆ ಹೆಚ್ಚಿನ ಅಧಿಕಾರವನ್ನು ಕೊಡಬೇಕು ಎನ್ನುತಕ್ಕಂಥ ಸಿಧ್ದಾಂತಕ್ಕೆ ನಾವು ಹೊಂದಿಕೊಂಡಿರತಕ್ಕಂಥ ಜನ. ಆದುದರಿಂದ ಲೋಕಲ್ ಬಾಡಿ local self-government ಎಂದು ಏನು ಕರೆಯುತ್ತೇವೆ panchayat raj institutions ಎಂದು ನಾವೇನು ಕರೆಯುತ್ತೇವೆ ಈ ಇನ್ಸ್‌ಟ್ಯೂಷನ್‌ಗಳು ಹಳಿ ತಪ್ಪದೆ ಕೆಲಸ ಮಾಡತಕ್ಕಂಥದ್ದು ಅಪೇಕ್ಷಣೀಯ ಹಾಗೂ ಅವಶ್ಯಕ. ಎಲ್ಲಿ ಹಳಿ ತಪ್ಪುತ್ತದೆ, ಅಲ್ಲಿ ಈ ಸಂಘ ಸಂಸ್ಥೆಗಳನ್ನು ಆ ಹಳಿ ಮೇಲೆ ಮತ್ತೆ ತಂದು ನಿಲ್ಲಿಸತಕ್ಕಂಥ ಪ್ರಯತ್ನವನ್ನು ನಾವೆಲ್ಲರೂ ಮಾಡಬೇಕಾಗಿರತಕ್ಕಂಥದ್ದು.

7.20 ಪಿ.ಎಂ

ಈ 7-8 ಮುನಿಸಿಪಾಲಿಟಿಗಳಿಗೆ ಹೇಗೆ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಹಣವನ್ನು ಬಿಡುಗಡೆ ಮಾಡಲಾಯಿತೆಂಬುದರ ಬಗ್ಗೆ ಮಾನ್ಯ ಸಚಿವರಾದ ಕೃಷ್ಣಪ್ಪನವರು ಈಗಾಗಲೇ ಒಂದು ನಮೂದು ಮಾಡಿದರು, 1998 ಅಥವಾ 1999 ನೇ ಇಸವಿಯದ್ದೋ ಇರಬೇಕು ಈ ಎಲ್ಲಾ ಮುನಿಸಿಪಾಲಿಟಿಗಳಿಗೆ ಆಗಿಂದಾಗ್ಗೆ ದೊಡ್ಡ ಪ್ರಮಾಣದ ಹಣ ಬಿಡುಗಡೆಯಾಗುತ್ತಿತ್ತು. ಅದಕ್ಕೂ ಮತ್ತು ನೋಂದಣಿ ಶುಲ್ಕ, ಇವೆರಡಕ್ಕೂ there is some nexus, there is some connection, there is some inter-activity between them. ಆದುದರಿಂದ, ಸಾರ್ವಜನಿಕರಲ್ಲಿ ಇಂತಹ ಒಂದು ಅಭಿಪ್ರಾಯ ನಾವು ಈ ದಿವಸ to score a debating point 250 ಕೋಟಿ ರೂಪಾಯಿಗಳಷ್ಟು ಹಣ ನೀರಿನಂತೆ ಹರಿದೊಹೋಯಿತು ಎನ್ನುವ ನಿರ್ಧಾರಕ್ಕೆ ಬರಬೇಕಾದ್ದರೂ ಕೂಡ ಅದಕ್ಕೆ ಯೋಗ್ಯವಾದಂಥ ಆಧಾರಗಳು, ಸಾಕ್ಷಿಗಳು ಬೇಕಾಗುತ್ತದೆ. ಆ ಸಾಕ್ಷಿ, ಆಧಾರಗಳಿಲ್ಲದೆ ಯಾರನ್ನೋ ಗಲ್ಲಿಗೇರಿಸಿ ಎಂದರೆ ಆ ರೀತಿ ಮಾತನಾಡುವ ಮೂಲಕ ನಾವು ಚರ್ಚೆಯಲ್ಲಿ ಮೇಲುಗೈ ಪಡೆಯಬಹುದೇ ವಿನಾ ಈ ವ್ಯವಹಾರಗಳೆಲ್ಲವನ್ನೂ ನಾವು ಯಾವ ರೀತಿ ನಡೆಸಿಕೊಂಡು ಹೋಗಬೇಕೆನ್ನುವುದಕ್ಕೆ ಸೂಕ್ತ ಮಾರ್ಗ ತೋರಿಸಿದಂತಾಗುವುದಿಲ್ಲ, 2001ನೇ ಅಕ್ಟೋಬರ್‌ನಲ್ಲಿ ಈ ಎಲ್ಲಾ ಮುನಿಸಿಪಾಲಿಟಿಗಳಿಗೆ ಹೋಗುತ್ತಿದ್ದ ಹಣವೆಲ್ಲವನ್ನೂ ನಿಲ್ಲಿಸಿದೆವು ಹಾಗೂ ಬೊಮ್ಮನಹಳ್ಳಿ, ಬ್ಯಾಟರಾಯನಪುರ ಇನ್ನುಳಿದ ಆ ಭಾಗದ ಕಮೀಷನರ್‌ಗಳನ್ನು ಸಸ್ಪೆಂಡ್ ಮಾಡಿದೆವು. District Registrar was suspended in October, 2001. ಸಿ.ಓ.ಡಿ. ಎನ್‌ಕ್ವೇರಿಗೆ ಮೇ, 2002 ರಂದು ಆರ್ಡರ್ ಮಾಡಲಾಯಿತು. 2ನೇ ಏಪ್ರಿಲ್ ತಿಂಗಳಿನಲ್ಲಿ ಅಕೌಂಟೆಂಟ್ ಜನರಲ್‌ರವರಿಂದ ಸ್ಪೆಷಲ್ ಆಡಿಟ್ ಮಾಡಿಸಲಾಯಿತು. ಯಲಹಂಕ ಮತ್ತು ಕೆಂಗೇರಿ ಪುರಸಭೆಗಳಲ್ಲಿ ನಡೆದಿರಬಹುದಾದಂಥ ಅವ್ಯವಹಾರಗಳನ್ನು ತನಿಖೆಗೊಳಪಡಿಸಬೇಕೆಂದು ಲೋಕಾಯುಕ್ತಕ್ಕೆ ಅಕ್ಟೋಬರ್ 2001 ರಂದು ನಾವು ರೆಫರೆನ್ಸ್ ಅನ್ನು ಕಳುಹಿಸಿಕೊಟ್ಟಿದ್ದೇವೆ. ಸಿಸ್ಟಮ್ಸ್‌ನಲ್ಲಿ ಚೆಕ್ಸ್ ಅಂಡ್ ಬ್ಯಾಲೆನ್ಸ್‌ಸ್ ಇರುತ್ತದೆ. ಇಲ್ಲಿ ಏನಾದರೂ ಲೋಪವಿದ್ದರೆ, ಆ ಲೋಪ ನಮಗೆ ಈ ಚೆಕ್ ಅಂಡ್ ಬ್ಯಾಲೆನ್ಸ್‌ಸ್ ಇನ್ ಅವರ್ ಸಿಸ್ಟಮ್ ಅದು ಸಾಕೇ ಅಥವಾ ಇನ್ನು ಹೆಚ್ಚು ಬೇಕೇ ಎನ್ನತಕ್ಕ ರೀತಿಯಲ್ಲಿ ಕಾಣಿಸುತ್ತದೆ. ಒಟ್ಟಾರೆ ಇದೆಲ್ಲದರ ಮೇಲೆ ಬೆಳಕು ಬೀರತಕ್ಕವರು ಮಾನ್ಯ ಲೋಕಾಯುಕ್ತರವರು. ಅದಕ್ಕೋಸ್ಕರ ನಾವು ಏನು ರೆಫರೆನ್ಸನ್ನು ಕಳುಹಿಸಿಕೊಟ್ಟಿದ್ದೇವೆ, ಅಕೌಂಟೆಂಟ್ ಜನರಲ್‌ರವರ ಇನ್ಸ್‌ಪೆಕ್ಷನ್ ಏನಿದೆ, ಅವರ ಆಡಿಟ್ ಪ್ಯಾರಾಗ್ರಾಫ್‌ಗಳೆಲ್ಲವನ್ನೂ ಲೋಕಾಯುಕ್ತರು ಈಗ ಕೈಗೆತ್ತಿಕೊಂಡಿರುವ ಕಾಂಪ್ರಹೆನ್ಸೀವ್ ಎನ್‌ಕ್ವೇರಿ ಏನಿದೆ, ಅದಕ್ಕೆ ಇವೆಲ್ಲವೂ ಕೂಡ ಅವರಿಗೆ ಸಹಾಯಕವಾಗುತ್ತದೆ. ಕೆಲವು ರೆಕಾರ್ಡ್ಸ್ ಅನ್ನು ಸುಟ್ಟು ಹಾಕಿದ್ದಾರೆಂದು ಕೆಲವು ಮಾನ್ಯ ಸದಸ್ಯರು ಹೇಳಿದರು. ಅದೃಷ್ಟವಶಾತ್, ಅವರು ದಾಖಲೆ ಪತ್ರಗಳನ್ನು ಸುಟ್ಟು ಹಾಕುವಂಥ ಪ್ರಯತ್ನ ಮಾಡಿದ್ದರೂ ಕೂಡ ನಮ್ಮ ರೆಫೆರೆನ್ಸಸ್ ಏನಿದೆ ಅವೆಲ್ಲವನ್ನೂ ಕೂಡ ಲೋಕಾಯುಕ್ತರಿಗೆ ಕೊಟ್ಟಿರುವುದರ ಕಾರಣ ಅವುಗಳೆಲ್ಲವನ್ನೂ ನಾವು ರಿ-ಸ್ಟ್ರಕ್ಚರ್ ಮಾಡಲು ಸಾಧ್ಯವಾಗಿದೆ. ನಾವು ಯಾವುದನ್ನೂ ಕೂಡ ಕಾರ್ಪೆಟ್ ಒಳಗೆ ಮುದುರಿಡಬೇಕೆನ್ನುವ ಇಚ್ಛೆಯಿಲ್ಲ. ಈ ಮುನಿಸಿಪಾಲಿಟಿಗಳ ಮೇಲೆ ಸಾರ್ವಜನಿಕವಾಗಿ ಯಾರ್‍ಯಾರ ಕಂಪ್ಲೆಂಟ್ ಏನೇನಿದೆಯೋ, ಅವೆಲ್ಲವನ್ನೂ ಕೂಡ ಲೋಕಾಯುಕ್ತರಿಗೆ ಕೊಡಬಹುದು. ನಮ್ಮಲ್ಲಿರತಕ್ಕಂಥ ಅಂಶಗಳೆಲ್ಲವನ್ನೂ ಲೋಕಾಯುಕ್ತರಿಗೆ

ಒಪ್ಪಿಸಿದ್ದೇವೆ. ಆದುದರಿಂದ, ಅವರು ಮುಕ್ತ ಮನಸ್ಸಿನಿಂದ ಇನ್‌ವೆಸ್ಟಿಗೇಷನ್ ಮಾಡುತ್ತಾರೆ. ಆ ಇನ್‌ವೆಸ್ಟಿಗೇಷನ್ ಮಾಡಿದ ನಂತರ ಯಾರು ತಪ್ಪಿತಸ್ಥರಿದ್ದಾರೋ ಅವರ ಮೇಲೆ ಕಠಿಣ ಕ್ರಮಗಳನ್ನು ತೆಗೆದುಕೊಳ್ಳಬಹುದಾಗಿದೆ. ಈ ಮಧ್ಯೆ ಒಂದು ಸೂಚನೆ ಬಂದಿರುವುದೇನೆಂದರೆ, ಈ ಸ್ಥಳೀಯ ಸಂಸ್ಥೆಗಳೆಲ್ಲವನ್ನೂ ಸೂಪರ್‌ಸೀಡ್ ಮಾಡಬೇಕೆಂದು ಮಾನ್ಯ ವಿರೋಧ ಪಕ್ಷದ ನಾಯಕರು ಅಪ್ಪಣೆ ಕೊಡಿಸಿದರು. ಈ ಸಂಸ್ಥೆಗಳು 1998-1999,2000, 2001 ರಲ್ಲಿ ಅಸ್ತಿತ್ವದಲ್ಲಿರಲಿಲ್ಲ, ಕಳೆದ ವರ್ಷ ಈ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಸಲಾಗಿದೆ. ಆದುದರಿಂದ, ಹಿಂದಿನ ಸಾಲಿನ ವರ್ಷದಲ್ಲಿದ್ದವರು ಮಾಡಿರಬಹುದಾದಂಥ ಅಪರಾಧಗಳಿಗೆ ಇವರುಗಳನ್ನು ಹೊಣೆ ಮಾಡಿ ನೇಣುಗಂಬಕ್ಕೆ ಹಾಕುವ ತತ್ವವನ್ನು ನಾವು ಒಪ್ಪಲು ಸಾಧ್ಯವಿಲ್ಲ. ಆದಕಾರಣ, 1998-99ರಿಂದ 2001ರ ಅಕ್ಟೋಬರ್‌ವರೆವಿಗೂ ಕೂಡ ಮುನಿಸಿಪಾಲಿಟಿಗಳಲ್ಲಿ ನಡೆದಿರಬಹುದಾದ ಅವ್ಯವಹಾರಗಳ ಬಗ್ಗೆ ವಿಚಾರಣೆ ನಡೆಸಿ ಅವರು ನಮಗೆ ಏನು ವರದಿ ಕೊಡುತ್ತಾರೆ, ಅದನ್ನು ನಾನು ಸಭೆಯ ಮುಂದಿಡುತ್ತೇನೆ. ಆಗ ಸಭೆ ಅದಕ್ಕೆ ಸ್ಪಂದಿಸಬಹುದಾಗಿದೆ. ಒಂದು ನಾಣ್ಯಕ್ಕೆ ಎರಡು ಮುಖಗಳಿವೆ, ಇರಬಲ್ಲದು, ಇರುವುದಕ್ಕೆ ಸಾಕು, ಹಾಗೆಂದು ಮಾನ್ಯ ಸಚಿವರಾದ ಕೃಷ್ಣಪ್ಪನವರು ಈಗತಾನೇ ಸದನದ ಮುಂದೆ ವ್ಯಕ್ತಪಡಿಸಿದ ತಮ್ಮ ಅನಿಸಿಕೆಯಿಂದ ಅದು ಗೊತ್ತಾಗುತ್ತದೆ. ಆ ಕಾಲದಲ್ಲಿ ಬೊಮ್ಮನಹಳ್ಳಿ, ಬ್ಯಾಟರಾಯನಪುರ, ಕೆಂಗೇರಿ, ಯಲಹಂಕ, ಕೃಷ್ಣರಾಜಪುರ, ಮಹದೇವಪುರ ಹೀಗೆ ಒಟ್ಟು ಏಳು ಮುನಿಸಿಪಾಲಿಟಿಗಳಿಗೆ ನೇಮಕಗೊಂಡಿದ್ದ ಎಲ್ಲಾ ಕಮೀಷನರ್‌ಗಳನ್ನು, ಹಾಗೂ ಬೆಂಗಳೂರಿನ ಟ್ರೆಜರಿ ಆಫೀಸರ್‌ಗಳನ್ನು ಹಾಗೂ ಇಂಜಿನಿಯರ್‌ಗಳನ್ನು ಈ ತಕ್ಷಣದಿಂದ ನಾವು ಅಮಾನತುಗೊಳಿಸುತ್ತಿದ್ದೇವೆ. ಇವೆಲ್ಲವನ್ನು ಏಕೆ ಮಾಡುತ್ತಿದ್ದೇವೆಂದರೆ ಲೋಕಾಯುಕ್ತರವರು ಕೈಗೆತ್ತಿಕೊಂಡಿರತಕ್ಕ ವಿಚಾರಣೆ ಫಲಪ್ರದವಾಗಬೇಕು. ಆ ವಿಚಾರಣೆಯಿಂದ ತಪ್ಪಿತಸ್ಥರಿಗೆ ಶಿಕ್ಷೆಯಾಗಬೇಕೆಂಬ ದೃಷ್ಟಿಯಿಂದ ನಾವು ಈ ಕ್ರಮಗಳನ್ನು ಕೈಗೊಳ್ಳುತ್ತಿದ್ದೇವೆ. ಮತ್ತು ಆಗಿಂದಾಗ್ಗೆ ಏನಾದರೂ ಸಲಹೆಗಳು ಬಂದರೆ ಅದನ್ನೂ ಸ್ವೀಕರಿಸಲು ನಾವು ಸಿದ್ಧರಾಗಿದ್ದೇವೆ. 1999ರ ಅಕ್ಟೋಬರ್ ತಿಂಗಳಿನಲ್ಲಿ ಧರ್ಮಯುದ್ಧ ಸಾರುತ್ತೇವೆಂದು ನಾವು ಹೇಳಿದೆವಲ್ಲಾ ಅದೆಲ್ಲದರ ಫಲಶ್ರುತಿಯೇ ಇದಾಗಿದೆ. ಇಲ್ಲದಿದ್ದರೆ ಹೀಗೆ ತೂಕಡಿಸಿಕೊಂಡು ಮುಂದೆ ಹೋಗಬಹುದಾಗಿತ್ತು. ಭ್ರಷ್ಟಾಚಾರದ ವಿರುದ್ಧ ಮೊಟ್ಟಮೊದಲ ಕ್ರಿಯಾಶೀಲ ಪ್ರಯತ್ನವನ್ನು ನಾವು ಕೈಗೊಳ್ಳುತ್ತಿದ್ದೇವೆ. ಇಂತಹ ಹಗರಣಗಳು ಆಗಿದ್ದರೆ, ಆ ಹಗರಣಗಳು ಸಾರ್ವಜನಿಕರಿಗೆ ಸಮಾಧಾನಕರವಾಗುವಂಥ ರೀತಿಯಲ್ಲಿ ಪರ್ಯಾವಸಾನವಾಗಬೇಕಿದ್ದರೆ ಪ್ರತಿಷ್ಠಿತ ಸಂಸ್ಥೆ ಇದಾಗಿರುವುದರಿಂದ ನಾವು ಸಾರಿರುವ ಧರ್ಮಯುದ್ಧದ ಪ್ರಧಾನ ಅಸ್ತ್ರದ ಗುರಿ ರಾಜಕಾರಣಿಗಳ ವಿರುದ್ಧವಲ್ಲ. ಯಾರು ಭ್ರಷ್ಟರಾಗಿದ್ದಾರೆ, ಭ್ರಷ್ಟ ವ್ಯವಸ್ಥೆಯ ವಿರುದ್ಧ ನಾವು-ನೀವೂ ಈ ದಿವಸ ಜೊತೆಗೂಡಬೇಕಾಗುತ್ತದೆ. ಈ ದಿಸೆಯಲ್ಲಿ ಸದನದ ಮಾರ್ಗದರ್ಶನವನ್ನು ಸರ್ಕಾರ ಅಪೇಕ್ಷಿಸುತ್ತದೆ, ನಿರೀಕ್ಷಿಸುತ್ತದೆ ಹಾಗೂ ಅದಕ್ಕೆ ಸ್ಪಂದಿಸುತ್ತದೆಂದು ನಾನು ಹೇಳಬಯಸುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ತಮ್ಮ ಉತ್ತರದಲ್ಲಿಪ್ರಸ್ತಾಪಿಸುತ್ತಾ, 4-5 ವರ್ಷಗಳ ಹಿಂದೆ ಸಿ.ಎಂ.ಸಿ.ಗಳಿಗೆ ನೇಮಕಗೊಂಡಿದ್ದ ಆಯುಕ್ತರುಗಳನ್ನು ಸಸ್ಪೆಂಡ್ ಮಾಡಲು ಆಜ್ಞೆ ಮಾಡಿರುವುದಾಗಿ ಹೇಳಿದರು. ಆದರೆ, ಸೂಪರ್‌ಸೀಡ್ ಮಾಡುವ ವಿಚಾರದಲ್ಲಿ ಮಾತ್ರ ಕಳೆದ ವರ್ಷ ಈ ಸಂಸ್ಥೆಗಳು ಚುನಾಯಿತಗೊಂಡಿರುವುದರಿಂದ ಸೂಪರ್ ಸೀಡ್ ಮಾಡುವುದ ಕ್ಕಾಗುವುದಿಲ್ಲ

ವೆಂದರೂ . ನಾವು ಹೇಳುತ್ತಿರುವುದೇನೆಂದರೆ, ಒಂದು ವರ್ಷದ ಹಿಂದೆ ಚುನಾಯಿತಗೊಂಡಿರುವ ಹೊಸ ಸ್ಥಳೀಯ ಸಂಸ್ಥೆಗಳೇನಿವೆ ಹಾಗೂ ಅದಕ್ಕೂ ಹಿಂದಿದ್ದಂತಹ ಸ್ಥಳೀಯ ಸಂಸ್ಥೆಗಳಲ್ಲಿ ಆಗಿರುವ ಅವ್ಯವಹಾರಗಳ ಬಗ್ಗೆ ಎನ್‌ಕ್ವೈರಿ ಮಾಡಲಿ. ಅಲ್ಲದೆ, ತಪ್ಪೆಸಗಿರುವ ಯಾವ ಅಧ್ಯಕ್ಷರು, ಸದಸ್ಯರಿದ್ದಾರೆ ಅವರ ವಿರುದ್ಧವೂ ಕ್ರಮ ಕೈಗೊಳ್ಳುವಂತಾಗಬೇಕು. ಆದರೆ ಈ ಒಂದು ವರ್ಷದ ಅವಧಿಯಲ್ಲಿ ಸಾಕಷ್ಟು ಅವ್ಯವಹಾರಗಳು ಆಗಿವೆ. ಈಗಾಗಲೇ ಹೇಳಿದ್ದೇವೆ. ಹೈಮಾಸ್ಕ್ ಬಲ್ಬ್ ತೆಗೆದುಕೊಳ್ಳುವುದಕ್ಕೆ ಸಂಬಂಧಪಟ್ಟಂತೆ ಮುರೂವರೆ ಲಕ್ಷ ರೂಪಾಯಿಗಳು ಇದ್ದದ್ದಕ್ಕೆ ಒಂಭತ್ತು ಲಕ್ಷ ರೂಪಾಯಿಗಳಿಗೆ ತೆಗೆದುಕೊಂಡಿದ್ದಾರೆ. ಈ ವ್ಯವಹಾರ ಇದೇ ಅವಧಿಯಲ್ಲಿ ಆಗಿರುರಂಥದ್ದು. ಇದೇ ಅವಧಿಯಲ್ಲಿ ಇದ್ದಂಥ ಆಡಳಿತ ಮಂಡಳಿಯನ್ನೇ ನೀವು ಉಳಿಸಿಕೊಂಡು ಹೋದರೆ ತನಿಖೆ ನಿಷ್ಪಕ್ಷಪಾತವಾಗಿ ಆಗುವುದಕ್ಕೆ ಸಾಧ್ಯವಿಲ್ಲ. ಅದಕ್ಕಾಗಿ ನಮ್ಮ ಬೇಡಿಕೆ ಏನಿದೆಯೆಂದರೆ ಇವೊತ್ತಿನ ಪ್ರೆಸೆಂಟ್ ಬಾಡಿ ಏನಿದೆ ಅದನ್ನು ಸೂಪರ್‌ಸೀಡ್ ಮಾಡಬೇಕು. ಈ ರೀತಿ ಮಾಡಿದರೆ ಮಾತ್ರ ತನಿಖೆ ನಿಷ್ಪಕ್ಷಪಾತವಾಗಿ ನಡೆಯುವುದಕ್ಕೆ ಸಾಧ್ಯವಿದೆ ಎನ್ನುವುದನ್ನು ನಾನು ಒತ್ತಾಯಪೂರ್ವಕವಾಗಿ ಹೇಳುತ್ತಿದ್ದೇನೆ.

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು):-ಮಾನ್ಯ ಅಧ್ಯಕ್ಷರೆ, ಈಗ ಮಾನ್ಯ ಲೋಕಾಯುಕ್ತರವರು ಸಂಬಂಧಪಟ್ಟ ಎಲ್ಲಾ ರೆಕಾರ್ಡ್‌ಗಳನ್ನು ಸೀಜ್ ಮಾಡಿ ತೆಗೆದುಕೊಂಡು ಹೋಗಿದ್ದಾರೆ. ನಮ್ಮ ಸರ್ಕಾರದ ಮಟ್ಟದಲ್ಲಿ ಏನು ರೆಕಾರ್ಡ್‌ಗಳು ಇದ್ದವು ಮತ್ತು ವಿವಿಧ ಕಛೇರಿ ಮಟ್ಟಗಳಲ್ಲಿ ಏನು ರೆಕಾರ್ಡ್‌ಗಳು ಇದ್ದವು ಲೋಕಾಯುಕ್ತರವರಿಗೆ ಯಾವ ಯಾವ ರೆಕಾರ್ಡ್‌ಗಳು ಬೇಕು ಎಂದು ಹೇಳಿದ್ದಾರೋ ಅವುಗಳೆಲ್ಲವನ್ನೂ ಕೂಡ ಯಾವ ರಿಸರ್ವೇಷನ್ಸ್ ಇಲ್ಲದೇ ಅವರಿಗೆ ಕೊಡಿಸುವುದಕ್ಕೆ ನಾವು ಬದ್ಧರಾಗಿದ್ದೇವೆ. ಆದುದರಿಂದ ತಾವು ಹೇಳಿದ ಹಾಗೆ ಈ ಏಳು ಮುನಿಸಿಪಾಲಿಟಿಗಳಲ್ಲಿ ಕಳೆದ ವರ್ಷ ಅವ್ಯವಹಾರಗಳು ನಡೆದಿದ್ದರೆ ಅವು ನಮ್ಮ ಜನರಿಗೆ ಬಂದರೆ ಅದರ ಮೇಲೆ ಕೂಡ ಎನ್‌ಕ್ವೈರಿ ಮಾಡುವುದಕ್ಕೆ ಲೋಕಾಯುಕ್ತರವರಿಗೆ ಕೊಡುತ್ತೇವೆ, ಇನ್ಯಾರಿಗೂ ಕೊಡುವುದಿಲ್ಲ. ಲೋಕಾಯುಕ್ತರವರೇ ಅದರ ಬಗ್ಗೆ ಕೂಡ ಅವರ ಇನ್‌ವೆಸ್ಟಿಗೇಷನ್‌ನನ್ನು ಮುಂದುವರೆಸಬಹುದು.

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಅಧ್ಯಕ್ಷರೆ, ಅದಕ್ಕಾಗಿ ಸೂಪರ್‌ಸೀಡ್ ಮಾಡಿದರೆ ಮಾತ್ರ ಏನಾದರೂ ಉಪಯುಕ್ತವಾಗುತ್ತದೆ ಮತ್ತು ಸರಿಯಾದಂಥ ತನಿಖೆ ಆಗುವುದಕ್ಕೆ ಸಾಧ್ಯವಾಗುತ್ತದೆ. ಇನ್ನು ಮಾನ್ಯ ಕೃಷ್ಣಪ್ಪನವರು ಬಹಳ ಪೌರುಷದಿಂದ ಹೇಳಿದರು, ಡಿಪಾಸಿಟ್ ಕಳಿಯಿಸುತ್ತಾರಂತೆ ಡಿಪಾಸಿಟ್ ಕಳೆಯಿಸುವುದು ನೀವಲ್ಲ, ಜನತೆ ಆಶೀರ್ವಾದ ಮಾಡುವಂಥದ್ದು, ಯಾರನ್ನು ಚುನಾಯಿಸಬೇಕು ಎನ್ನುವಾಗ ಜನತೆ ಆಶೀರ್ವಾದ ಮಾಡುವಂಥದ್ದು. ಇವೊತ್ತು ಜನ ತೀರ್ಪು ಕೊಡುತ್ತಾರೆ ನಿಮಗೆ, ಜನ ತೀರ್ಪು ಕೊಡುತ್ತಾರೆ, ದೊಡ್ಡ ಪೌರುಷದಿಂದ ಹೇಳಿಕೊಳ್ಳಬೇಡಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಈಗಾಗಲೇ ಅವರು ಹೇಳಿದರು ನೂರಕ್ಕೆ ನೂರರಷ್ಟು ಅಲ್ಲಿಯ ಸಭೆಗಳಿಗೆ ಹಾಜರಾಗಿದ್ದೇನೆ ಎಂದು ಏಕೆ ಹಾಜರಾಗಿದ್ದಾರೆ?

(ಗೊಂದಲ)

ಶ್ರೀ ಎ. ಕೃಷ್ಣಪ್ಪ:- ನಾನು ಅವರಿಗೆ ಉತ್ತರ ಕೊಟ್ಟಿದ್ದೇನೆ, ಪ್ರೂಫ್ ಆದರೆ ನಾಳೆಯೇ ನಮ್ಮ ನಾಯಕರಿಗೆ ನನ್ನ ರಾಜೀನಾಮೆಯನ್ನು ಕೊಡುತ್ತೇನೆ. ರಾಜಕೀಯವಾಗಿ ನನ್ನ ವಿರುದ್ಧ ಮಾತನಾಡುತ್ತಿದ್ದಾರೆ.

ಶ್ರೀ ಪಿ.ಜಿ. ಆರ್. ಸಿಂಧ್ಯ: ಮಾನ್ಯ ಅಧ್ಯಕ್ಷರೆ,

ಅಧ್ಯಕ್ಷರು: ಸಿಂಧ್ಯಾರವರೆ, ನಾನು ಅಡ್ಜರ್ನ್ ಮಾಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್: ಮುಖ್ಯಮಂತ್ರಿಗಳು ಇಂಥ ಮಂತ್ರಿಗಳನ್ನು ಇಟ್ಟುಕೊಂಡರೆ ನಿಮ್ಮ ಸರ್ಕಾರಕ್ಕೆ ಯಾವುದೇ ಮರ್ಯಾದೆ ಬರುವುದಿಲ್ಲ, ಕಾಂಗ್ರೆಸ್ ಸರ್ಕಾರಕ್ಕೆ ಮರ್ಯಾದೆ ಬರುವುದಿಲ್ಲ.

ಶ್ರೀ ಎ. ಉಮೇಶ್ ಬಿ. ಕತ್ತಿ: ಮಾನ್ಯ ಅಧ್ಯಕ್ಷರೆ, ವಿರೋಧ ಪಕ್ಷದ ನಾಯಕರಿಗೆ ಏಕ ವಚನದಲ್ಲಿ...

ಅಧ್ಯಕ್ಷರು: ತಾವು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ: ಅಧ್ಯಕ್ಷರೆ, ಒಂದು ಸಾರಿ ಉತ್ತರ ಕೇಳಿದ ಮೇಲೆ ಮುಗಿದುಹೋಯ್ತು. ಪದೇ ಪದೇ ಕ್ಲಾರಿಫಿಕೇಷನ್ ಕೇಳಿದರೆ ಹೇಗೆ.

(ಗೊಂದಲ)

(ಬಿ.ಜೆ.ಪಿ. ಸದಸ್ಯರು ಈ ಹಂತದಲ್ಲಿ ಸದನದಿಂದ ಹೊರಕ್ಕೆ ಹೋದರು)

ಅಧ್ಯಕ್ಷರು: ಎಲ್ಲವನ್ನೂ ಮಾತನಾಡಿಬಿಟ್ಟು ಈಗ ಕೊನೆಯಲ್ಲಿ ಏಕೆ ಗಲಾಟೆ ಮಾಡುತ್ತೀರಿ? ಮಾತನಾಡುವುದನ್ನೆಲ್ಲಾ ಮಾತನಾಡಿಯಾಗಿದೆ. ಈಗ ಏಕೆ ಕೊನೆಯಲ್ಲಿ ಮತ್ತೆ ಮಾತನಾಡುತ್ತೀರಿ?

ಶ್ರೀ ಪಿ.ಜಿ. ಆರ್. ಸಿಂಧ್ಯಾ: ಅಧ್ಯಕ್ಷರೆ ಒಂದು ನಿಮಿಷ ಮಾತನಾಡುತ್ತೇನೆ,

ಅಧ್ಯಕ್ಷರು: ಈಗಾಗಲೇ ಸಫಿಶಿಯೆಂಟ್ ಆನ್ಸರ್ ಕೊಟ್ಟಿದ್ದಾರೆ. ಇದಕ್ಕಿಂತ ಹೆಚ್ಚಾಗಿ ಉತ್ತರ ಅವರು ಕೊಡುವುದಕ್ಕಾಗುವುದಿಲ್ಲ.

ಶ್ರೀ ಪಿ.ಜಿ. ಆರ್. ಸಿಂಧ್ಯಾ: ಹೌಸ್ ಹೇಗೆ ಕಂಡಕ್ಟ್ ಮಾಡುವುದು ಎಂಬುದು ತಮಗೆ ತಿಳಿದಿದೆ ತಾವು ದಯವಿಟ್ಟು ಬೇಜಾರು ಮಾಡಿಕೊಳ್ಳಬೇಡಿ Please allow me to speak ತಾವು ನಿಂತುಕೊಳ್ಳಬೇಡಿ, ದಯವಿಟ್ಟು ಕುಳಿತುಕೊಳ್ಳಿ ಸಾರ್.

ಅಧ್ಯಕ್ಷರು: ಒಂದೇ ಒಂದು ಕ್ಲಾರಿಫಿಕೇಷನ್ ಮಾತ್ರ ಕೇಳಬೇಕು.

ಶ್ರೀ ಪಿ.ಜಿ. ಆರ್. ಸಿಂಧ್ಯಾ: ಮಾನ್ಯ ಅಧ್ಯಕ್ಷರೆ, ತಾವು ದಯಮಾಡಿ ಈ ಸಭೆಯ ನಡವಳಿಕೆಗಳ ಪ್ರಕಾರ ಸಾಕಷ್ಟು ಈ ವಿಚಾರದಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಟ್ಟಿದ್ದೀರಿ. ನಿಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಮಾನ್ಯ ಸಭಾನಾಯಕರೂ ಕೂಡ

ನಾವು ಹೇಳಿರತಕ್ಕಂಥ ವಿಚಾರಗಳನ್ನು ಸವಿಸ್ತಾರವಾಗಿ ಕೇಳಿದ್ದಾರೆ. ಅವರ ಅಭಿಪ್ರಾಯಗಳನ್ನು ಮಂಡಿಸಿದ್ದಾರೆ. ನಾವೂ ಕೂಡ ನಮ್ಮ ಅಭಿಪ್ರಾಯಗಳನ್ನು ಅದರ ಮೇಲೆ ಹೇಳಬೇಕಾಗುತ್ತದೆ. ಏಕೆಂದರೆ ನಾವೆಲ್ಲಾ ಪಕ್ಷಗಳನ್ನು ಪ್ರತಿನಿಧಿಸಿ ಬರತಕ್ಕಂಥವರು. ನಾನು ಮಾನ್ಯ ಕೃಷ್ಣಪ್ಪನವರನ್ನು ಮತ್ತು ಮಾನ್ಯ ಮುಖ್ಯಮಂತ್ರಿಗಳಲ್ಲಿ ಎರಡು ಕ್ಲಾರಿಫಿಕೇಷನ್ ಕೇಳುವುದಕ್ಕೆ ಮುಂಚೆ ತಮಗೆ ನಾನೊಂದು ಕಿವಿಮಾತನ್ನು ಹೇಳಬಯಸುತ್ತೇನೆ. ಅಧ್ಯಕ್ಷರೆ, ಇದು ಗರಡಿ ಮನೆಯಲ್ಲ, ತಾವು ದಯವಿಟ್ಟು ಏಕ ವಚನದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರ ಬಗ್ಗೆ ಉಪಯೋಗಿಸಿರತಕ್ಕಂಥ ಶಬ್ದಗಳೇನಿದೆ ಅವು ನಿಮ್ಮ ಸ್ಥಾನಕ್ಕೆ ಶೋಭೆಯನ್ನು ತರತಕ್ಕಂಥದ್ದಲ್ಲ ಎನ್ನುವುದನ್ನು ಮಾತ್ರ ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ತಾಳ್ಮೆಯನ್ನು ಕಳೆದುಕೊಳ್ಳುವುದರಿಂದ ನಮಗೂ ಉಪಯೋಗವಾಗುವುದಿಲ್ಲ ಮತ್ತು ನಿಮಗೂ ಉಪಯೋಗವಾಗುವುದಿಲ್ಲ. ಇದು ಏನಾಗುತ್ತದೆಂದರೆ If you cannot fire, you hit from the butt, ಎಂದು ಆಗುತ್ತದಲ್ಲಾ ಹಾಗೆ ಆಗುತ್ತದೆಯೇ ಹೊರತು ಇದರಿಂದ ಏನು ಉಪಯೋಗವಾಗುವುದಿಲ್ಲ. ದಯಮಾಡಿ ಈ ಶಬ್ದಗಳು ಸಂಸದೀಯ ವ್ಯವಹಾರಗಳಿಗೆ ಉಪಯುಕ್ತವಾದುದಲ್ಲ ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಇದನ್ನು ಕಡತದಿಂದ ತೆಗೆಯಬೇಕು ಎನ್ನುವ ಸಲಹೆಯನ್ನು ಕೊಡುತ್ತೇನೆ. ಏಕೆಂದರೆ ಈ ಶಬ್ದಗಳು ಕಡತಕ್ಕೆ ಹೋಗಿದೆ ಸಾರ್. It has gone.

ಅಧ್ಯಕ್ಷರು: ಹೋಗಿಲ್ಲ, ಅವರು ನೋಟ್ ಮಾಡಿಕೊಂಡಿಲ್ಲ.

ಶ್ರೀ ಎಸ್.ಎಂ. ಕೃಷ್ಣ: ಅಧ್ಯಕ್ಷರೆ, ತಾವು ಈಗ ಏನು ಅಪ್ಪಣೆ ಕೊಟ್ಟಿದ್ದೀರಿ ಈಗತಾನೆ ಬಿ.ಜೆ.ಪಿ.ಯವರು ಗಲಾಟೆ ಮಾಡುವಾಗ ಮಾನ್ಯ ವಿಶ್ವೇಶ್ವರ ಹೆಗಡೆಯವರು ಏನೇನೋ ಹೇಳಿದರು. ಅದೆಲ್ಲಾ ಕಡತಕ್ಕೆ ಹೋಗುತ್ತದೆಯೇ?

ಅಧ್ಯಕ್ಷರು: ಇಲ್ಲ, ಇಲ್ಲ. ಐದಾರು ಜನರು ಒಂದೇ ಸಲಕ್ಕೆ ಮಾತನಾಡಿದರೆ ಯಾವುದೂ ಕಡತಕ್ಕೆ ಹೋಗುವುದಿಲ್ಲ.

ಶ್ರೀ ಪಿ.ಜಿ. ಆರ್. ಸಿಂಧ್ಯ: ಇಂಥ ಶಬ್ದಗಳು ಶೋಭೆಯನ್ನು ತರತಕ್ಕದ್ದಲ್ಲ. ತಾವು ದಯವಿಟ್ಟು ತಾಳ್ಮೆಯಿಂದ ಕೇಳಿ. ಏಕೆ ತಾವು ತಾಳ್ಮೆಯನ್ನು ಕಳೆದುಕೊಳ್ಳುತ್ತೀರಿ?

ಶ್ರೀ ಎಸ್.ಎಂ. ಕೃಷ್ಣ: ನಾನು ತಾಳ್ಮೆಯಿಂದಲೇ ಹೇಳುತ್ತಿದ್ದೇನೆ. I thought I was the epitome of all' talmes.' I will continue to be so. ತಾಳ್ಮೆಯಿಂದಲೇ ಉತ್ತರ ಕೊಟ್ಟಿದ್ದೇನೆ. ನಾನು ತಿಳಿದುಕೊಂಡಿದ್ದೇನೆ. ಅಧ್ಯಕ್ಷರೆ, ತಾವು ಯಾರ ಹೆಸರನ್ನು ಕರೆಯುತ್ತೀರಿ ಅವರು ಹೇಳಿದ್ದು ಮಾತ್ರ ಕಡತಕ್ಕೆ ಹೋಗುತ್ತದೆ ಎಂದು ತಿಳಿದುಕೊಂಡಿದ್ದೇನೆ. ಏಕೆಂದರೆ ನಾನೂ ಕೂಡ ಮೂರು ವರ್ಷಗಳ ಕಾಲ ಸಭಾಧ್ಯಕ್ಷನಾಗಿ ಕೆಲಸ ಮಾಡಿರುವುದರಿಂದ ಆ ಅನುಭವದ ಆಧಾರದ ಮೇಲೆ ನಾನು ಈ ಮಾತನ್ನು ಹೇಳಿದೆ.

ಅಧ್ಯಕ್ಷರು: ಹೌದು ಅಷ್ಟು ಮಾತ್ರ ಕಡತಕ್ಕೆ ಹೋಗುವುದು.

ಶ್ರೀ ಪಿ.ಜಿ. ಆರ್. ಸಿಂಧ್ಯ: ಖಂಡಿತವಾಗಿ, ಮುಖ್ಯಮಂತ್ರಿಗಳೇ ತಮ್ಮ ಅಪಾರವಾದ ಅನುಭವದಲ್ಲಿ ಹೇಳಿರುವುದನ್ನು ಬಹುತೇಕ ಎಲ್ಲಾ ಸಂದರ್ಭಗಳಲ್ಲಿಯೂ ಕೂಡ ಒಪ್ಪಿರತಕ್ಕಂಥವನು

ನಾನು. ಈಗ ಮಾನ್ಯ ಅಧ್ಯಕ್ಷರೆ, ಮಂತ್ರಿಗಳು ಮಾತನಾಡುವಾಗ ಪ್ಯಾಂಟ್ ಅಂಡ್ ಶೂಗಳಿಗೆ ಹೆದರುವವನು ನಾನಲ್ಲ, ನಡುಗುವುದಿಲ್ಲ, ಇದು ರಾಜಕೀಯ ಹುನ್ನಾರ ಎಂದರು. ಖಂಡಿತವಾಗಿ ನನ್ನ ಭಾಷಣದ ಪ್ರತಿಯನ್ನು ತೆಗೆದುನೋಡಿ. ಎಲ್ಲೂ ಕೂಡ ಇದರಲ್ಲಿ ರಾಜಕೀಯ ಹುನ್ನಾರ ಎನ್ನತಕ್ಕಂಥದ್ದು ಇಲ್ಲ. ಇನ್ನು ಚುನಾವಣೆಗೆ ಎರಡೂವರೆ ವರ್ಷವಿದೆ. ನಾನು ಚುನಾವಣೆಗಳಲ್ಲಿ ಸೋತಿದ್ದೇನೆ, ತಾವು ಕೂಡ ಸೋತಿದ್ದೀರಿ. ಇದೆಲ್ಲವನ್ನು ಜನ ನೋಡಿಕೊಂಡು ಜನ ಇದರ ಬಗ್ಗೆ ತೀರ್ಮಾನ ಮಾಡುತ್ತಾರೆಯಾದ ಕಾರಣ ತಾವು ದಯವಿಟ್ಟು ಆ ರೀತಿಯ ಸವಾಲುಗಳನ್ನು ಎಸೆಯತಕ್ಕಂಥದ್ದು ನಮ್ಮಿಬ್ಬರಿಗೂ ಒಳ್ಳೆಯದಲ್ಲ ಎನ್ನುವುದನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಎ.ಕೃಷ್ಣಪ್ಪ: ಮಾನ್ಯ ಸಿಂಧ್ಯಾರವರೆ, ಒಂದ್ನಿಮಿಷ. ನಾನು ಆ ರೀತಿಯ ಭಾವನೆಗಳನ್ನು ವ್ಯಕ್ತಮಾಡಿದ್ದು ಯಾವಾಗ ಎಂದರೆ, ಅಲ್ಲಿ ಅವರು ಎದ್ದುನಿಂತುಕೊಂಡು ಹೇಳಿದರು, ನಾಳೆ ಎಲೆಕ್ಷನ್ ಬರುತ್ತದೆ ಗೊತ್ತಾಗುತ್ತದೆ ಎಂದರು. ಅದಕ್ಕೆ ನಾನು ಆ ರೀತಿ ಸವಾಲು ಹಾಕಿದೆ ಅದು ಈ ಸಂಸದೀಯ ನೀತಿಗಳಿಗೆ ವಿರುದ್ಧವಾದರೆ ನಾನು ಕ್ಷಮೆಯನ್ನು ಕೇಳುತ್ತೇನೆ.

ಶ್ರೀ ಪಿ.ಜಿ. ಆರ್. ಸಿಂಧ್ಯಾ: ಚರ್ಚೆಯನ್ನು ಮಾನ್ಯ ಖರ್ಗೆಯವರೇ ತಾವು ಕೂಲಂಕುಷವಾಗಿ ಕೇಳಿದ್ದೀರಿ. ನಾನು ಕೇಳಿದ ಪಾಯಿಂಟ್ ಏನು ಎಂದರೆ ಡಿಟೈಲ್ಸ್ ಆಫ್ ದಿಸ್ ಕರೆಪ್ಷನ್ ಕೇಸ್, ಈಗ ಅವರ ಸಂಬಂಧಿಕರು ಎಂದು ಹೇಳಿರತಕ್ಕಂಥದ್ದು, ವಗೈರೆ ವಗೈರೆ, ಇದು ಇಲ್ಲಿ ಮುಖ್ಯವಾದುದಲ್ಲ. ಏಕೆ ಮುಖ್ಯವಾದುದಲ್ಲ ಎಂದರೆ It is before the Lokayukta. He well hang He will decide. ನಾನು ಇದನ್ನು ಹೇಳುವುದಕ್ಕಾಗುವುದಿಲ್ಲ. I cannot any that. Either you cannot say it. It is only the Loayukta, it is before that. we have full faith in him. The question is, 03-03-2002 ರಲ್ಲಿ ಸರ್ಕಾರದ ಕಂದಾಯ ಇಲಾಖೆಯ ಕಾರ್ಯದರ್ಶಿಗಳು ನೊಂದಣಿ ಮಹಾ ಪರಿವೀಕ್ಷಕರಿಗೆ ಒಂದು ಪತ್ರವನ್ನು ಬರೆದಿದ್ದಾರೆ. ಅದರಲ್ಲಿ ಏನಿದೆಯೆಂದರೆ ಮಹದೇವಪುರ ಹಾಗೂ ಕೃಷ್ಣರಾಜಪುರ ನಗರಸಭೆಗಳಿಗೆ 2001-02 ನೇ ಸಾಲಿನಲ್ಲಿ ಸರ್‌ಚಾರ್ಜ್ ಮತ್ತು ಸ್ಟ್ಯಾಂಪ್ ಡ್ಯೂಟಿ ಬಿಡುಗಡೆ ಮಾಡುವ ಬಗ್ಗೆ ವಿಷಯ ಎಂದು ಇದ್ದು ಮುಂದುವರೆದು ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಮಾನ್ಯ ಪಶುಸಂಗೋಪನೆ, ಸಕ್ಕರೆ ಸಚಿವರು ಮಾನ್ಯ ಮುಖ್ಯಮಂತ್ರಿಗಳಿಗೆ ಕಳುಹಿಸಿರುವ ನಡೆವಳಿಯಲ್ಲಿ, he has sent a minute to you ಕೃಷ್ಣರಾಜಪುರ ನಗರಸಭೆಯಲ್ಲಿ ಹಾಗೂ ಮಹದೇವಪುರ ನಗರಸಭೆಯಲ್ಲಿ ಅನೇಕ ಅಭಿವೃದ್ಧಿ ಕಾಮಗಾರಿಗಳನ್ನು ಕ್ರಿಯಾ ಯೋಜನೆಯಡಿಯಲ್ಲಿ ಕೈಗೊಳ್ಳಲಾಗಿದ್ದು 2001-02ನೇ ಸಾಲಿನಲ್ಲಿ ಸರ್‌ಚಾರ್ಜ್ ಸ್ಟಾಂಪ್ ಡ್ಯೂಟಿ ಬಿಡುಗಡೆ ಆಗದೇ ಇರುವುದರಿಂದ ಇದನ್ನು ತಕ್ಷಣ ಬಿಡುಗಡೆ ಮಾಡಬೇಕೆಂದು ತಾವು ಕಳುಹಿಸಿದ್ದೀರಿ. ಅವರು ತಮಗೆ ಪತ್ರವನ್ನು ಬರೆದಿದ್ದಾರೆ. ರೆವಿನ್ಯೂ ಕಾರ್ಯದರ್ಶಿಗಳು ಇದೊಂದು ವರದಿ ಮೂರು ದಿನದೊಳಗಡೆ ಕಲುಹಿಸಬೇಕು ಎಂದು 03-03-2002ರಲ್ಲಿ ಬರೆದಿದ್ದಾರೆ. ತಮಗೆ ವರದಿ ಕಳುಹಿಸಬೇಕು ಎಂದು ಹೇಳಿ. ಅಂದರೆ ತಮ್ಮ ಗಮನಕ್ಕೆ ಈ ವಿಷಯ ಬಂದಿದೆ ಎಂದಾಯ್ತು. ಹಣ ಬೇಕು ಎಂಬುದು ತಮ್ಮ ಗಮನಕ್ಕೆ ಬಂದಿದೆ ಎಂಬುದನ್ನು ನಾನು ಹೇಳುತ್ತಾ ಇರುವುದು. ಮಾನ್ಯ ಸಚಿವರೇ let me not be disturbed, please. ಏನು ತಾವು

**SRI K.H. RANGANATH:** I am not disturbing you. I am helping you. ಸರ್ಕಾರದ ವತಿಯಿಂದ ಹಣ ಬೇಕು, ಇದಕ್ಕೆ ಇಷ್ಟು ಖರ್ಚಾಗುತ್ತದೆ ಎಂದು ಹೇಳಿ ಬರೆದಿದ್ದಾರೆಂದು ಮಾತ್ರ ಹೇಳಿದ್ದರೆ ಅದು ಸರಿಯೇ ಇದೆ.

ಶ್ರೀ ಪಿ.ಜಿ. ಆರ್. ಸಿಂಧ್ಯ: ನಾನೇನು ತಪ್ಪು ಎಂದು ಹೇಳಿದ್ದೇನೆ? ಮಾನ್ಯ ಕೃಷ್ಣಪ್ಪನವರು ಮುಖ್ಯಮಂತ್ರಿಗಳಿಗೆ ಪತ್ರ ಬರೆಯುತ್ತಾರೆ. ಇದು ಆದಮೇಲೆ ಹಣ ಬಿಡುಗಡೆಯಾಗಿದೆ. ಎಷ್ಟು ಹಣ ಬಿಡುಗಡೆಯಾಗಿದೆ ಎಂಬುದನ್ನು ತಮ್ಮ ವಿವೇಚನೆಗೆ ಬಿಡುತ್ತೇನೆ. ಎಷ್ಟು ಬಿಡುಗಡೆಯಾಗಿದೆ ಎನ್ನುವಂತಹ ಅಂಕಿಂಶಗಳನ್ನು ನಾನು ಕೊಡತಕ್ಕಂಥ ಸ್ಥಿತಿಯಲ್ಲಿ ಇಲ್ಲ. As the Finance Minister, you will have more information than me. How Rs. 238 crores? 1998-99 ರಲ್ಲಿ ಎಕ್ಸಟ್ರಾ ನಾಲ್ಕು ಕೋಟಿ ರೂಪಾಯಿ ಸರ್‌ಚಾರ್ಜ್ ಬಿಡುಗಡೆಯಾಗಿರತಕ್ಕಂಥಾದ್ದು ನಿಜ. ಯಾವಾಗ ಎಂದರೆ ಅಕ್ಟೋಬರ್, ನವೆಂಬರ್ ತಿಂಗಳಲ್ಲಿ Yes, not when you were the Revenue Minister, 230 ಕೋಟಿ ರೂಪಾಯಿಗಳು ರಿಲೀಜ್ ಆಗಿರತಕ್ಕಂಥಾದ್ದು ನಿಜ. ಈಗ ತಾವು ಕೆಲವು ಅಧಿಕಾರಿಗಳನ್ನು ಅಮಾನತ್ತಿಲ್ಲಿಡುತ್ತೇವೆಂದು ಘೋಷಣೆ ಮಾಡಿದ್ದೀರಿ, We welcome that. ಈಗ ತಾವು ಹೇಳಿದ್ದೀರಿ, ಬಹಳ ಸಂತೋಷ ಅದನ್ನು ಮಾಡಿ. ಆದರೆ ಹಿಂದೆ ಏನು ಕೆಲವು ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿದ್ದೇವೆ ಎಂದು ಸರ್ಕಾರದ ಆಜ್ಞೆಯಾಗಿದೆ, actually suspension has not come into effect. Theat is my point. The government order which you have made, that has not come into effect. ಈಗ ಆಗುವುದಿಲ್ಲ. ಜಗಜ್ಜಾಹೀರು ಆಗಿರುವ ವಿಚಾರ. ಈಗ ಆಗುವುದಿಲ್ಲ, ನಮಗೆ ವಿಶ್ವಾಸ ಇದೆ. ಬಹಳ ಪ್ರಮುಖವಾಗಿ ಇದೆಲ್ಲವನ್ನೂ ಲೋಕಾಯುಕ್ತಕ್ಕೆ ಕೊಡೋಣ. ಒಳ್ಳೆಯ ಲೋಕಾಯುಕ್ತವನ್ನು ತಾವು ಆಯ್ಕೆ ಮಾಡಿದ್ದೀರಿ, ವಿರೋಧ ಪಕ್ಷದ ನಾಯಕರ ಜೊತೆ ತಾವು ಸಮಾಲೋಚನೆ ಮಾಡಿ ಮಾಡತಕ್ಕಂಥ ಪದ್ಧತಿಗೆ ತಾವು ಅಪ್ರಿಷಿಯೇಟ್ ಮಾಡುತ್ತೇವೆ. We appreciate. He was in the Supreme Court and all that ತಾವೇನು ಲೋಕಾಯುಕ್ತವನ್ನು ಸ್ಟ್ರೆಂಗ್ತನ್ ಮಾಡುವುದಕ್ಕೆ ಕ್ರಮವನ್ನು ತೆಗೆದುಕೊಳ್ಳುತ್ತೀರಿ, our party is with you. you go ahead. ಇವೆಲ್ಲವೂ ಸರಿಯೇ. ಇನ್ನು ಅಫಿಡೆವಿಟ್ ಏನು ಲೋಕಾಯುಕ್ತದ ಮುಂದೆ ಪಬ್ಲಿಕ್ ಕೊಟ್ಟಿದ್ದಾರೆ, ಅದರಲ್ಲಿ ಕೆಲವು ಅಧಿಕಾರಿಗಳ ಮೇಲೆ ಅಲಿಗೇಷನ್ಸ್ ಮಾಡಿರತಕ್ಕಂಥಾದ್ದನ್ನು ತಾವು ಗಮನಿಸಿದ್ದೀರಿ. ನಾನು ಕಳುಹಿಸಿಕೊಟ್ಟಿದ್ದೇನೆ, ಅದನ್ನು ತಾವು ನೋಡಿರಬಹುದು. ತಾವು ತಮ್ಮ ಇಂಟಲಿಜೆಂಟ್ಸ್ ವಿಂಗ್‌ನಿಂದ ತರಿಸಿಕೊಂಡಿರುತ್ತೀರಿ. ಇನ್ನು ಎರಡನೆಯದಾಗಿ ಈ ಎಲ್ಲಾ ವ್ಯವಹಾರಗಳಲ್ಲಿ ನೀಡಲ್ ಆಫ್ ಸಸ್ಪೆಷನ್ ನಿಮ್ಮ ಮಂತ್ರಿಗಳ ಮೇಲೆ ಇದೆ. I never asked for CBI enquiry. Though I have highest regard regarding the CBI Officers I have never been demanding for CBI enquiring after I became Home Minister, because the difference between CBI Officers and also our Officers is not much. ಸಿಬಿಐಗೆ ಡೆಪ್ಯುಟೇಷನ್ ಮೇಲೆ ಇರುತ್ತಾರೆ. ಅವರೆ ಮಾಡತಕ್ಕಂಥಾದ್ದು. ಆದರೆ ನಮ್ಮ ಲೋಕಾಯುಕ್ತದಲ್ಲಿ ಐಪಿಎಸ್, ಐಎಎಸ್. ಆಫೀಸರ್ಸ್ ಅಥವಾ ಡಿವೈಎಸ್‌ಪಿ, ಕರ್ನಾಟಕ ಪೋಲೀಸ್ ಅಧಿಕಾರಿಗಳೇ

ಮಾಡತಕ್ಕಂಥ ವಿಚಾರ ನಾನು ತಮ್ಮಲ್ಲಿ ಏನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ ಅಂದರೆ What is our protest? ಇವೆಲ್ಲವೂ ಸರಿ ಮಾಡಿರತಕ್ಕಂಥಾದ್ದು. ನೀವುನಿಜವಾಗಲೂ ಭ್ರಷ್ಟಾಚಾರದ ವಿರುದ್ಧ ಧರ್ಮಯುದ್ಧ ಮಾಡಿ, ಟ್ರಾನ್ಸ್‌ಫರೆಂಟ್ ಗೌವರ್ನಮೆಂಟ್ ನಡೆಸಿ ಮತ್ತೆ ನಿಮ್ಮ ಮೇಲೆ ಜನ ವಿಶ್ವಾಸ ಇಡುವುದಾದರೆ ನಮ್ಮದೇನೂ ಅಭ್ಯಂತರ ಇಲ್ಲ. ನಮ್ಮ ಪ್ರೊಟೆಸ್ಟ್ ಏನೆಂದರೆ ಇಷ್ಟೊತ್ತಿಗಾಗಲೇ ಮಂತ್ರಿಗಳು ರಾಜೀನಾಮೆ ಕೊಡಬೇಕಾಗಿತ್ತು ಅಥವಾ ತಾವು ಅವರಿಂದ ರಾಜೀನಾಮೆ ಪಡೆಯಬೇಕಾಗಿತ್ತು. ಅದೆರಡನ್ನೂ ಸಹ ತಾವು ಮಾಡದೆ ಇದ್ದರೆ ಜನರಿಗೆ ಏನು ಸಂಶಯ ಬರುತ್ತದೆ ಎಂದರೆ ಏನಪ್ಪ ಇಂತಹವರನ್ನೆಲ್ಲಾ ಡಿಫೆಂಡ್ ಮಾಡಿಕೊಳ್ಳುತ್ತಾರೆ ಎಂದು ನಿಮ್ಮ ಪಾರ್ಟಿಯವರೇ ಹೇಳುತ್ತಾರೆ, ಸಾರ್ವಜನಿಕರು ಹೇಳುತ್ತಾರೆ, ನಾವೂ ಹೇಳುತ್ತೇವೆ. ತಾವು ಅವರನ್ನು ಕಂಟಿನ್ಯೂ ಮಾಡುತ್ತೇವೆಂದು ಹೇಳಿದ್ದೀರಿ. ಅದಕ್ಕೋಸ್ಕರ ನಾವು ಇದರ ಬಗ್ಗೆ ಪ್ರೊಟೆಸ್ಟ್ ಮಾಡುತ್ತಾ ವಾಕೌಟ್ ಮಾಡುತ್ತೇವೆ.

(ಈ ಹಂತದಲ್ಲಿ ಜನತಾ ದಳ ಸದಸ್ಯರು ಪ್ರತಿಭಟನೆ ಮಾಡಿ ವಾಕೌಟ್ ಮಾಡಿದರು)

ಅಧ್ಯಕ್ಷರು:- ಈ ವಿಷಯ ಇಲ್ಲಿಗೆ ಮುಗಿಯಿತು. ಈಗ ಸದನವನ್ನು ನಾಳೆ 11.00 ಗಂಟೆಯವರೆಗೆ

(ಸಭೆಯು ಮುಂದೂಡುತ್ತಿದ್ದೇನೆ ರಾತ್ರಿ 7.43ಕ್ಕೆ ಮುಂದೂಡಲ್ಪಟ್ಟು ಮತ್ತೆ ದಿ: 17.7.02 ರಂದು ಬೆಳಿಗ್ಗೆ 11.00 ಗಂಟೆಗೆ ಸೇರಲು ನಿಶ್ಚಯಿಸಿತು)